# ಜನಶಕ್ತಿ

ಮಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 16

ಏಪ್ರಿಲ್ 17, 2011

ಕನ್ನಡ ವಾರಪತ್ರಿಕೆ

ರೂ. 5/-




Blog :janashakthi.wordpress.com
e-mail : js_weekly@yahoo.com




## ಅದಿರು ರಫ್ತು ನಿಷೇಧ ಸರ್ಕಾರದ ಅಪ್ರಾಮಾಣಿಕತೆ



## ಎಲ್‌ಡಿಎಫ್ : ಅಭಿವೃದ್ಧಿಯ ಪರ್ಯಾಯ ಹಾದಿ



## ಅಸಂಘಟಿತರಿಗೆ ಲಾಭವಿಲ್ಲದ ಪಿಂಚಣಿ ಯೋಜನೆ



## ಭ್ರಷ್ಟಾಚಾರದ ಆಶ್ರಯ ದಾತರು

## 'ಎಡರಂಗಕ್ಕೆ ಬೆಂಬಲ ಹೆಚ್ಚುತ್ತಿದೆ'
ಸಂದರ್ಶನದಲ್ಲಿ ಬುದ್ಧದೇವ್



## ಬಾಂಗ್ಲಾದೇಶಕ್ಕೀಗ 40ರ ಸ್ವಾತಂತ್ರ್ಯ ಸಂಭ್ರಮ

# ಅಮರರಾದ ಹುತಾತ್ಮ ಭಗತ್‌ಸಿಂಗ್ ಮತ್ತು ಸಂಗಾತಿಗಳು

**ಮಾರ್ಚ್ 23, ಭಗತ್‌ಸಿಂಗ್, ಸುಖ್‌ದೇವ್, ರಾಜಗುರು ಅಮರರಾದ ದಿನ. ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಮಾತ್ರವಲ್ಲದೇ, ಶೋಷಕ ಅಸಮಾನ ವ್ಯವಸ್ಥೆಯ ಬದಲಾವಣೆಯ ಕಣ್ಣೋಟವನ್ನು ಹರಡಲು ತಮ್ಮ ಬದುಕನ್ನೇ ಬಲಿದಾನಗೈದ ಈ ಸಂಗಾತಿಗಳು ಹುತಾತ್ಮರಾದ ಸನ್ನಿವೇಶದಲ್ಲೂ ತೋರಿದ ಧೀಮಂತಿಕೆ ಮನಸ್ಸು ಕಲಕುವಂತದ್ದು. ಕುಲದೀಪ್‌ನಯ್ಯರ್‌ರವರ 'ಹುತಾತ್ಮ ಭಗತ್‌ಸಿಂಗ್' ಪುಸ್ತಕ ಆಯ್ದ ಭಾಗವಿದು.**



(ಕಳೆದ ವಾರದಿಂದ)

ಒಳಗೆ ಅಂತ್ಯ ಸಂಸ್ಕಾರ ಮಾಡುವ ವಿಚಾರವನ್ನು ಅಧಿಕಾರಿಗಳು ಕೈಬಿಟ್ಟರು.

ಜೈಲಿನ ಹಿಂಭಾಗದ ಗೋಡೆಯ ಒಂದು ಭಾಗವನ್ನು ಕೆಡವಲಾಯಿತು. ಕತ್ತಲು ದಟ್ಟವಾದಾಗ, ಒಂದು ಟ್ರಕ್ಕನ್ನು ಒಳಕ್ಕೆ ತಂದು, ಲಗೇಜನ್ನು ತುಂಬುವಂತೆ ದೇಹಗಳನ್ನು ತುಂಬಲಾಯಿತು. ಮೊದಲಿಗೆ ಈ ದೇಹಗಳನ್ನು ರಾವಿ ನದಿಯ ದಂಡೆಯ ಮೇಲೆ ಸುಡುವುದೆಂದಾಗಿತ್ತು. ಆದರೆ ನದಿಯಲ್ಲಿ ಹೆಚ್ಚು ನೀರಿರಲಿಲ್ಲವಾದ ಕಾರಣ ಸಟ್ಲೆಜ್ ತೀರಕ್ಕೆ ಹೋಗುವುದೆಂದು ತೀರ್ಮಾನಿಸಲಾಯಿತು. ಟ್ರಕ್ಕಿನ ಬೆಂಗಾವಲಿಗೆ ಸೈನಿಕರಿದ್ದರು; ಟ್ರಕ್ ಫೀರೋಜ್‌ಪುರಕ್ಕೆ ಹೊರಟಿತು. ಆದರೆ ಯೋಜನೆ ಕೈಕೊಟ್ಟಿತು.

ಶವಗಳನ್ನು ಸರಿಯಾದ ರೀತಿಯಲ್ಲಿ ಸುಡಲಾಗಲಿಲ್ಲ. ಬೆಂಕಿ ಉರಿಯುತ್ತ ಜ್ವಾಲೆಗಳು ಎದ್ದಾಗ ಅದನ್ನು ಹಳ್ಳಿಯ ಜನ ನೋಡಿದರು. ಅನೇಕರು ತಕ್ಷಣ ಈ ಸ್ಥಳಕ್ಕೆ ಓಡಿಬಂದರು. ಉರಿಯುತ್ತಿದ್ದ ಶವಗಳನ್ನು ಹಾಗೆಯೇ ಬಿಟ್ಟು ಸೈನಿಕರು ತಮ್ಮ ವಾಹನಗಳಿಗೆ ಓಡಿದರು. ವಾಹನಗಳು ಲಾಹೋರಿಗೆ ಧಾವಿಸಿದವು. ಹಳ್ಳಿಯ ಜನ ಪೂಜ್ಯಭಾವದಿಂದ ಉಳಿಕೆಗಳನ್ನು ಸಂಗ್ರಹಿಸಿದರು.

ಈ ಮೂವರು ತರುಣರನ್ನು ಗಲ್ಲಿಗೇರಿಸಿದ ಸುದ್ದಿ ಲಾಹೋರ್ ಮತ್ತು ಪಂಜಾಬ್‌ನ ಇತರ ನಗರಗಳಿಗೆ ಕಾಳ್ಗಿಚ್ಚಿನಂತೆ ಹಬ್ಬಿತು. ಯುವಕರು 'ಇಂಕ್ವಿಲಾಬ್ ಜಿಂದಾಬಾದ್' 'ಭಗತ್‌ಸಿಂಗ್ ಜಿಂದಾಬಾದ್' ಘೋಷಣೆಗಳನ್ನು ಕೂಗುತ್ತ ಇಡೀ ರಾತ್ರಿ ಮೆರವಣಿಗೆ ಮಾಡಿದರು. ಮತ್ತೊಮ್ಮೆ ನಗರದಲ್ಲಿ ಹರತಾಳ ಆಚರಿಸಲಾಯಿತು. ಹಣ್ಣಿನ ಅಂಗಡಿಗಳೂ ಸಬ್ಜಿ ಮಂಡಿಗಳು ಸಹಾ ಮುಚ್ಚಿದವು. ಸರ್ಕಾರಿ ಕಾಲೇಜುಗಳನ್ನು ಹೊರತುಪಡಿಸಿ ಎಲ್ಲ ಶಾಲೆ ಕಾಲೇಜುಗಳನ್ನು ಮುಚ್ಚಲಾಯಿತು. ಸರ್ಕಾರಿ ಕಟ್ಟಡಗಳು ಮತ್ತು ಅಧಿಕಾರಿಗಳು ವಾಸವಾಗಿದ್ದ ಸ್ಥಳಗಳಿಗೆ ಪೊಲೀಸ್ ಕಾವಲನ್ನು ಹಾಕಲಾಯಿತು.

ಮಧ್ಯಾಹ್ನದ ಹೊತ್ತಿಗೆ ಲಾಹೋರಿನ ವಿವಿಧ ಭಾಗಗಳಲ್ಲಿ ಭಿತ್ತಿಪತ್ರಗಳು ಕಾಣಿಸಿಕೊಂಡವು. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಭಿತ್ತಿಪತ್ರಗಳಿಗೆ ಸಹಿ ಹಾಕಿದ್ದರು. ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಅವರ ಅಂತ್ಯ ಸಂಸ್ಕಾರವನ್ನು ಸಿಖ್ ಮತ್ತು ಹಿಂದೂ ವಿಧಿಗಳಿಗೆ ಅನುಗುಣವಾಗಿ ಸಟ್ಲೆಜ್ ನದಿಯ ದಂಡೆಯಲ್ಲಿ ಮಾಡಲಾಯಿತು ಎಂದು ಈ ಭಿತ್ತಿಪತ್ರಗಳಲ್ಲಿ ಮುದ್ರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅನೇಕ ಸಭೆಗಳು ನಡೆದವು; ಅಂತ್ಯ ಸಂಸ್ಕಾರವನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ ಎಂದು ಈ ಸಭೆಗಳಲ್ಲಿ ಹೇಳಲಾಯಿತು. ಇದನ್ನು ಅಲ್ಲಗಳೆದು ಮ್ಯಾಜಿಸ್ಟ್ರೇಟರು ಹೇಳಿಕೆ ನೀಡಿದರು. ಆದರೆ ಯಾರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ಆ ಹೊತ್ತಿಗೆ ಅವಶೇಷಗಳು ಲಾಹೋರ್ ತಲುಪಿದವು. ಸಾಂಡರ್ಸ್‌ನನ್ನು ಗುಂಡಿಕ್ಕಿ ಕೊಂದ ಜಾಗಕ್ಕೆ ತೀರ ಹತ್ತಿರದಲ್ಲಿದ್ದ ನೀಲಗೊಂಬಾದ್‌ನಿಂದ ಸಂತಾಪ ಸೂಚಕ ಮೆರವಣಿಗೆ ಹೊರಟಿತು. ಮೂರು ಮೈಲಿಗೂ ಹೆಚ್ಚು ಉದ್ದವಿದ್ದ ಮೆರವಣಿಗೆ, ಸಾವಿರಾರು ಜನ ಹಿಂದೂ, ಮುಸ್ಲಿಂ ಮತ್ತು ಸಿಖ್ಖರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಅನೇಕರು ಕಪ್ಪು ಪಟ್ಟಿಯನ್ನು ಧರಿಸಿದ್ದರು. ಮಹಿಳೆಯರು ಕಪ್ಪು ಸೀರೆಗಳನ್ನು ಉಟ್ಟಿದ್ದರು. 'ಇಂಕ್ವಿಲಾಬ್ ಜಿಂದಾಬಾದ್' 'ಭಗತ್‌ಸಿಂಗ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಮೆರವಣಿಗೆಕಾರರು ಕೂಗಿದರು. ಕಪ್ಪು ಧ್ವಜಗಳು ಹಾರಾಡಿದವು. ಮೆರವಣಿಗೆ ಅನಾರ್ಕಲಿ ಬಜಾರಿನ ಮಧ್ಯಕ್ಕೆ ಬಂದು ನಿಂತಿತು. ಮೂವರು ಹುತಾತ್ಮರ ಚಿತಾಭಸ್ಮವನ್ನು ಹೊತ್ತು ಫಿರೋಜ್‌ಪುರದಿಂದ ಹೊರಟ ಭಗತ್‌ಸಿಂಗ್‌ನ ಸೋದರಿಯರು ನಗರವನ್ನು ತಲುಪಿದ್ದಾರೆಂಬ ಸುದ್ದಿಯನ್ನು ಪ್ರಕಟಿಸುತ್ತಿದ್ದಂತೆ ಗುಂಪು ಮೌನ ತಾಳಿತು. ಮೂರು ಗಂಟೆಗಳ ನಂತರ ಪುಷ್ಪಾಲಂಕೃತವಾದ ಮೂರು ಶವ ಪೆಟ್ಟಿಗೆಗಳ ಹಿಂದೆ ಹೆಜ್ಜೆ ಹಾಕುತ್ತಿದ್ದರು. ಜೋರಾದ ಅಳು ಮುಗಿಲನ್ನು ತುಂಬಿತು. ಜನ ಗಟ್ಟಿಯಾಗಿ ಅತ್ತರು.

ವಿಪರ್ಯಾಸವೆನ್ನುವಂತೆ ಮೆರವಣಿಗೆ ರಾವಿದಂಡೆಯನ್ನು ತಲುಪಿತು. 24 ಗಂಟೆ ಮೊದಲು ಅಧಿಕಾರಿಗಳು ಇದೇ ಜಾಗದಲ್ಲಿ ಈ ಮೂವರ ಅಂತ್ಯಸಂಸ್ಕಾರವನ್ನು ಮಾಡಲು ಬಯಸಿದ್ದರು. ಲಾಹೋರ್‌ನಲ್ಲಿ ಬೃಹತ್ ಸಭೆಯೊಂದು ನಡೆಯಿತು; ಮರಣ ದಂಡನೆ ಕಾನೂನುಬಾಹಿರವೆಂದು ಖಂಡಿಸಲಾಯಿತು. ಅಧಿಕಾರಿಗಳು ಶವಗಳನ್ನು ವಿಲೇವಾರಿ ಮಾಡಿದ ಕ್ರಮದ ಬಗ್ಗೆ ಕ್ರೋಧ ವ್ಯಕ್ತವಾಯಿತು. ಉರ್ದು ದಿನಪತ್ರಿಕೆಯ ಪ್ರಸಿದ್ಧ ಸಂಪಾದಕ ಮೌಲಾನ ಜಫರ್ ಅಲಿಖಾನ್ ಅವರು, ಹೇಗೆ ತೆರೆದ ಆಕಾಶದ ಕೆಳಗೆ ಕರಕಲಾದ ಶವಗಳನ್ನು ಬಿಟ್ಟುಹೋಗಲಾಗಿತ್ತು ಎಂಬುದರ ಬಗ್ಗೆ ಪದ್ಯ ಓದಿದರು.



ಮರಣದಂಡನೆಯ ಸುದ್ದಿ ಹಬ್ಬಿದಂತೆ, ರಾಷ್ಟ್ರ ಶೋಕಸಾಗರದಲ್ಲಿ ಮುಳುಗಿತು. ಸಂತಾಪ ಸೂಚಿಸಲು ಜನ ಮೆರವಣಿಗೆಯನ್ನು ತೆಗೆದರು; ವಾಣಿಜ್ಯೋದ್ಯಮಿಗಳು ತಮ್ಮ ಉದ್ಯಮವನ್ನು ಸ್ಥಗಿತಗೊಳಿಸಿದರು. ಬ್ರಿಟಿಷರು ತಮ್ಮ ಮನೆಗಳಲ್ಲಿಯೇ ಉಳಿದರು. ಶ್ರದ್ಧಾಂಜಲಿ ಅರ್ಪಿಸಿದವರಲ್ಲಿ ನೆಹರೂ ಮೊದಲಿಗರು, 'ಭಗತ್‌ಸಿಂಗ್ ವೈರಿಯನ್ನು ಮುಕ್ತ ಕಣದಲ್ಲಿ ಎದುರಿಸಿದ ಸ್ವಚ್ಛ ಹೋರಾಟಗಾರ' ಎಂದು ನೆಹರೂ ಬಣ್ಣಿಸಿದರು. ಆತ ರಾಷ್ಟ್ರಕ್ಕಾಗಿ ಜ್ವಲಂತ ಹಂಬಲವನ್ನು ತುಂಬಿಕೊಂಡ ಯುವಕ. ಅತ್ಯಲ್ಪ ಅವಧಿಯಲ್ಲಿಯೇ ಜ್ವಾಲೆಯಾಗಿ ಮಾರ್ಪಟ್ಟ ಕಿಡಿ ಭಗತ್‌ಸಿಂಗ್. ಈ ಕಿಡಿ ರಾಷ್ಟ್ರದ ಒಂದು ನಗರದಿಂದ ಇನ್ನೊಂದಕ್ಕೆ ಹಬ್ಬಿತು; ಎಲ್ಲೆಲ್ಲೂ ಹರಡಿದ್ದ ಕತ್ತಲೆಯನ್ನು ಈ ಕಿಡಿ ದೂರ ಓಡಿಸಿತು ಎಂದು ನೆಹರೂ ನುಡಿದರು.

ಮರಣ ದಂಡನೆಗೊಳಗಾದವರ ಧೈರ್ಯವನ್ನು ಗಾಂಧಿ ಮುಕ್ತಕಂಠದಿಂದ ಹೊಗಳಿದರು. 'ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳನ್ನು ಗಲ್ಲಿಗೇರಿಸಲಾಗಿದೆ. ಅವರು ಹುತಾತ್ಮರಾಗಿದ್ದಾರೆ. ಅವರ ಸಾವು ಅನೇಕರಿಗೆ ವೈಯಕ್ತಿಕ ನಷ್ಟದಂತೆ ಕಾಣಿಸುತ್ತಿದೆ. ಈ ಯುವಕರ ನೆನಪಿಗಾಗಿ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯದಲ್ಲಿ ನಾನೂ ಭಾಗಿಯಾಗಿದ್ದೇನೆ. ಭಗತ್‌ಸಿಂಗ್ ಮತ್ತು ಅವರ ಇಬ್ಬರು ಸಂಗಾತಿಗಳನ್ನು ಗಲ್ಲಿಗೇರಿಸಲಾಗಿದೆ. ಅವರ ಜೀವಗಳನ್ನು ಉಳಿಸಲು ಹಲವಾರು ಪ್ರಯತ್ನಗಳು ನಡೆದವು; ಆಸೆಗಳೂ ಚಿಗುರಿದ್ದವು. ಆದರೆ ಎಲ್ಲ ವ್ಯರ್ಥವಾಯಿತು. ಭಗತ್‌ಸಿಂಗ್ ಬದುಕುವ ಅಪೇಕ್ಷೆಯನ್ನು ತೋರಲಿಲ್ಲ. ಕ್ಷಮಾಪಣೆ ಕೋರಲು ಭಗತ್‌ಸಿಂಗ್ ನಿರಾಕರಿಸಿದರು; ಅರ್ಜಿ ಸಲ್ಲಿಸಲು ಒಪ್ಪದೆ ಹೋದರು. ಅವರೊಂದು ವೇಳೆ ಬದುಕಲು ಒಪ್ಪಿದ್ದರೆ, ಇತರರಿಗಾಗಿ ಅವರು ಹಾಗೆ ಮಾಡುತ್ತಿದ್ದರು. ಅದಕ್ಕವರು ಒಪ್ಪಿದ್ದರೆ...' ಎಂದು ಗಾಂಧಿ ಹೇಳಿದರು.

ಈ ಮೂವರ ಪ್ರಾಣಗಳನ್ನು ಉಳಿಸಲು ಗಾಂಧಿ ಏನೂ ಮಾಡಲಿಲ್ಲ ಎಂಬ ಕೋಪದಲ್ಲಿದ್ದ ಅನೇಕರಿಗೆ ಗಾಂಧಿಯ ಈ ಮಾತುಗಳು ಕೇಳಿಸಲಿಲ್ಲ.

(ಮುಗಿಯಿತು) ○

## ಜನಶಕ್ತಿ ನೂತನ ಕಾರ್ಯಾಲಯ ನಿಧಿ : ಸ್ಪಂದನೆಗೆ ವಂದನೆ



'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ನೂತನ ಕಾರ್ಯಾಲಯವನ್ನು ಸರ್ವ ಸಜ್ಜುಗೊಳಿಸುವ ಸಂದರ್ಭದಲ್ಲಿ ಉದಾರ ಕೊಡುಗೆಗೆ ಈ ಮೂಲಕ ಮಾಡಲಾದ ಮನವಿಗೆ 'ಜನಶಕ್ತಿ'ಯ ಓದುಗ ಬಳಗದಿಂದ ಸ್ಪಂದನೆ ಆರಂಭವಾಗಿದೆ.

ನಿಧಿಗೆ ಕಾಣಿಕೆ ನೀಡಿರುವ ಸಂಗಾತಿಗಳ ಹೆಸರು ಮತ್ತು ವಿವರವನ್ನು ಕೃತಜ್ಞತೆಗಳೊಂದಿಗೆ ಇಲ್ಲಿ ಪ್ರಕಟಿಸಲಾಗಿದೆ. ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕಾರ್ಯಾಲಯವನ್ನು ವ್ಯವಸ್ಥಿತವಾಗಿ ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ಸ್ಪಂದನೆ ದೊರೆಯುತ್ತದೆಂದು ನಿರೀಕ್ಷಿಸುತ್ತೇವೆ.

**ಜನಶಕ್ತಿ ನೂತನ ಕಾರ್ಯಾಲಯ ನಿಧಿ**

| | | |
|---|---|---|
| ಹಿಂದಿನ ಮೊತ್ತ | : | 12,500,00 |
| 1) ಕಾಂ.ಬಿ.ಎನ್. ಪೂಜಾರಿ, ಸದಸ್ಯರು ವಿಮಾಶಾಖೆ, ಸಿಪಿಐ(ಎಂ) ಧಾರವಾಡ | : | 2,000.00 |
| 2) ಕಾಂ. ಉದಯ ಗದಗಕರ್ ಕಾರ್ಯದರ್ಶಿ ವಿಮಾಶಾಖೆ, ಸಿಪಿಐ(ಎಂ) ಧಾರವಾಡ | : | 2,000.00 |
| ಈಗಿನ ಮೊತ್ತ | : | 4,000.00 |
| ಒಟ್ಟು | ರೂ. | 16,500.00 |

ಇತಿ ತಮ್ಮ ವಿಶ್ವಾಸಿ
**ಎಸ್.ವೈ.ಗುರುಶಾಂತ್**
**ಸಂಪಾದಕರು**

ಬಿನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

# ಅದಿರು ರಫ್ತು ಸರ್ಕಾರದ ಅಪ್ರಮಾಣಿಕತೆ

ಕರ್ನಾಟಕ ಸರ್ಕಾರ ಹೊರಡಿಸಿದ್ದ ಅದಿರು ರಫ್ತು ನಿಷೇಧದ ಕುರಿತಂತೆ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪು ಗಮನಾರ್ಹವಾಗಿದೆ. ಮಾತ್ರವಲ್ಲ ಈ ಸರ್ಕಾರದ ಅಪ್ರಾಮಾಣಿತೆ ಹಾಗೂ ಸೋಗಲಾಡಿತನವನ್ನು ಬಹಿರಂಗಗೊಳಿಸಿದೆ.

ಅದಿರು ರಫ್ತು ನಿಷೇಧಿಸಿದ ಸರ್ಕಾರದ ಕ್ರಮದ ವಿರುದ್ಧ ರಫ್ತಿಗೆ ಅವಕಾಶ ನೀಡಬೇಕೆಂದು ಕೋರಿ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದ ಕೆಲ ಖಾಸಗಿ ಗಣಿ ಕಂಪನಿಗಳ ಕೋರಿಯನ್ನು ಕೋರ್ಟ್ ಪುರಸ್ಕರಿಸಿದೆ. ದೇಶದಲ್ಲೇ ನಿಷೇಧ ಹೇರಿದ ಮೊಟ್ಟಮೊದಲ ಸರ್ಕಾರ ತನ್ನದೆಂದು ಹೆಗ್ಗಳಿಕೆಯ ಬೊಗಳೆ ಹೊಡೆದು ಭಾರಿ ಪ್ರಚಾರ ಮಾಡಿಕೊಂಡಿದ್ದ ಸರ್ಕಾರ ಅಕ್ರಮ ತಡೆಯಲು ತಾನು ನಿರ್ವಹಿಸಬೇಕಿದ್ದ ಅಗತ್ಯ ಕ್ರಮಗಳನ್ನು ಕೈಗೊಳ್ಳದೇ ಇರುವುದನ್ನು ನ್ಯಾಯಾಲಯ ಗುರುತಿಸಿದೆ. ಇದೇ ಸರ್ಕಾರ 'ಈ ನಿಷೇಧ ತಾತ್ಕಾಲಿಕವೆಂದು ಆರು ತಿಂಗಳ ನಂತರ ಹಿಂತೆಗೆಯಲಾಗುವುದೆಂದು ನ್ಯಾಯಾಲಯಕ್ಕೆ ತಿಳಿಸಿರುವುದೇ ಅದರ 'ನಿಜ ಕಾಳಜಿ'ಯನ್ನು ಹೊರಹಾಕಿದೆ. ಹೀಗೆಂದ ಸರ್ಕಾರ ರಾಜ್ಯವನ್ನೇ ತೀವ್ರವಾಗಿ ಬಾಧಿಸಿದ ಅಕ್ರಮ ಗಣಿಗಾರಿಕೆ ತಡೆಯಲು ತಪಾಸಣೆ ನಡೆಸಿ ನಿಲ್ಲಿಸುವುದಾಗಲೀ, ಚೆಕ್‌ಪೋಸ್ಟ್‌ಗಳ ಸ್ಥಾಪನೆ, ಸಾಗಣೆ ಲಾರಿಗಳ ಮೇಲೆ ನಿಗಾ ಇಡುವ ಆಧುನಿಕ ಉಪಕರಣಗಳ ಅಳವಡಿಕೆಯಾಗಲೀ ಮಾಡಲೇ ಇಲ್ಲ. ಮೂಲತ: ರಾಜ್ಯದಲ್ಲಿ ಅತ್ಯಂತ ವ್ಯಾಪಕವಾಗಿ ನಡೆದ ಅಕ್ರಮ ಗಣಿಗಾರಿಕೆ, ಅಕ್ರಮ ಸಾಗಾಣಿಕೆ, ಬೇಲಿಕೇರಿ ಬಂದರಿನಿಂದ ಲಕ್ಷಾಂತರ ಟನ್ ಅದಿರು ಮಾಯವಾದ ಹಗರಣಗಳ ವಿರುದ್ಧ ಪ್ರಬಲ ಕೂಗು ಕೇಳಿಬಂದ ಹಿನ್ನೆಲೆಯಲ್ಲಿ ರಫ್ತು ನಿಷೇಧದ ಆಜ್ಞೆ ಹೊರಟಿತ್ತು. ಆದರೆ ಈ ಆದೇಶ ಸಮಸ್ಯೆಯ ನಿಜವಾದ ಸತ್ವಕ್ಕಾಗಲೀ, ಅಕ್ರಮ ತಡೆಯುವ ಯಾವ ಗೋಜಿಗೂ ಹೋಗುವ ಉದ್ದೇಶವಿಲ್ಲದೇ ರಫ್ತು ನಿಷೇಧದ ಪ್ರಚಾರದಲ್ಲಿ ಮಾತ್ರ ತೊಡಗಿತ್ತು. ಅಂದರೆ ಅಕ್ರಮ ತಡೆಯುವ ಇಚ್ಛೆ ಸರ್ಕಾರಕ್ಕಿರಲಿಲ್ಲ. ಬದಲಾಗಿ ಸಾರ್ವಜನಿಕ ಆಗ್ರಹ ಮತ್ತು ತಮ್ಮ ಪಕ್ಷದೊಳಗಿನ ರಾಜಕೀಯ ಒತ್ತಡ, ನಿಯಂತ್ರಣ ನಡೆಸುತ್ತಿದ್ದ ಗಣಿ ಮಾಫಿಯಾಗಳ ಮೇಲೆ ಒತ್ತಡ ಹೇರುವ ಕ್ರಮವೆಂಬಂತೆ ತೋರಿಸಲಾಯಿತಾದರೂ ವಾಸ್ತವದಲ್ಲಿ ಅದೂ ಸಾಧಿತವಾಗಲಿಲ್ಲ. ಬೇಲಿಕೇರಿಯಲ್ಲಿದ್ದ ಲಕ್ಷಾಂತರ ಟನ್ ಅದಿರು ನಾಪತ್ತೆಯನ್ನು ತಡೆಯಲಿಲ್ಲ. ಆದರೆ ಕರ್ನಾಟಕದ ಅದಿರು ಆಂಧ್ರದ ಮೂಲಕ ನಿರಾತಂಕವಾಗಿ ವಿದೇಶಗಳಿಗೆ ಹೋಯಿತು. ಯಡಿಯೂರಪ್ಪನವರ ಸಂಪುಟದ ಸಹೋದ್ಯೋಗಿ ರೆಡ್ಡಿಗಳ ವಹಿವಾಟು ಇದರಿಂದ ಭಾದಿತವಾಗಲಿಲ್ಲ. ಬದಲಾಗಿ ಅವರ ಸ್ಪರ್ಧಿಗಳನ್ನು ಹಣಿಯುವ ಒಂದು ಸಾಧನವಾಯಿತು. ಸರ್ಕಾರದ ಅದಿರು ರಫ್ತು ನಿಷೇಧದ ಹಿಂದೆ ಈ ಅದಿರು ದೊಡ್ಡ ಕಂಪನಿ, ಕೈಗಾರಿಕೋದ್ಯಮಿಗಳಿಗೆ ಮೀಸಲಿರಿಸುವ ಇರಾದೆಯನ್ನೂ ಒಳಗೊಂಡಿದೆ. ಆದ್ದರಿಂದಲೇ ರೆಡ್ಡಿ ಕಂಪನಿ ರಾತ್ರೋರಾತ್ರಿ ಉದ್ದಿಮೆದಾರರಾಗಿ ಕಾಣಿಸಿಕೊಂಡರು. ಹೂಡಿಕೆದಾರರ ಸಮಾವೇಶವು ಅಂತಿಮವಾಗಿ ನಮ್ಮ ಪ್ರಾಕೃತಿಕ ಸಂಪತ್ತಿನ ಲೂಟಿಖೋರರ ಅವಕಾಶವಾಗಿ ಪರಿಣಮಿಸಿತು.

ವಾಸ್ತವದಲ್ಲಿ ಮನಸಾರೆ ಕೊಳ್ಳೆ ಹೊಡೆಯುತ್ತಿರುವ ಅಂದಾದುಂಧಿ ರಫ್ತನ್ನು ತಡೆಯಲೇಬೇಕಿದೆ. ಅಭಿವೃದ್ಧಿಶೀಲ ರಾಷ್ಟ್ರವಾಗಿರುವ ಭಾರತ ತನ್ನ ಭವಿಷ್ಯತ್ತಿನ ಅಗತ್ಯಗಳಿಗಾಗಿ ಅಮೂಲ್ಯ ಅದಿರನ್ನು ಉಳಿಸಿ ಕಾಪಾಡಬೇಕು.' ನಮ್ಮ ಆಂತರಿಕ ಅಗತ್ಯಗಳನ್ನು ಅನುಸರಿಸಿಯೇ ಗಣಿಗಾರಿಕೆಯೂ ನಡೆಯಬೇಕು. ವಾಣಿಜ್ಯೋದ್ದೇಶಗಳಿಗೆ ತೀರಾ ಅನಿವಾರ್ಯವೆನಿಸಿದಾಗ ಒಂದು ಸೀಮಿತ ಮಟ್ಟದ ರಫ್ತು ಮಾಡಬಹುದು. ಇದನ್ನು ಒಟ್ಟು ಖಾಸಗೀಯವರ ಮೂಲಕ ವಹಿವಾಟು ನಡೆಸದೇ ಎನ್.ಎಂ.ಡಿ.ಸಿ.ಯಂತಹ ಸರ್ಕಾರದ ಸಾರ್ವಜನಿಕ ಉದ್ದಿಮೆಗಳೇ ಇಡಿಯಾಗಿ ನಡೆಸಬೇಕು. ಖಾಸಗೀಯವರ ಕೈಯಿಂದ ಗಣಿಗಾರಿಕೆ ರಫ್ತನ್ನು ಹಿಂಪಡೆದು ಸಾರ್ವಜನಿಕ ಉದ್ದಿಮೆಗಳ ಮೂಲಕ ಗಣಿಗಾರಿಕೆ ನಡೆದು ಅದಿರನ್ನು ನಮ್ಮ ಕೈಗಾರಿಕೆಗಳಲ್ಲೇ ಬಳಸುವಂತೆ ಮೌಲ್ಯವರ್ಧಿತ ಪ್ರಕ್ರಿಯೆಯಾಗಿರಬೇಕು. ಅಂದರೆ ಉದ್ಯೋಗಸೃಷ್ಟಿ, ಸಂಪನ್ಮೂಲಗಳ ರಕ್ಷಣೆ ಇದರಿಂದ ಸಾಧ್ಯ.


ವಿದೇಶಿ ವ್ಯಾಪಾರ, ರಫ್ತು ವಹಿವಾಟು ಕೇಂದ್ರ ಸರ್ಕಾರದ ಅಡಿಯಲ್ಲಿದೆ. ನಿಷೇದದಂತಹ ತೀರ್ಮಾನ ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರದ ಪಾತ್ರವೇ ಮುಖ್ಯವಾಗಿದೆ. ಈ ಬೆಳವಣಿಗೆಗಳ ಆಧಾರದಲ್ಲಿ ಹೊಸ ಗಣಿನೀತಿಯನ್ನು ರೂಪಿಸಬೇಕಿದೆ. ಈಗಲೂ ಪ್ರಧಾನವಾಗಿ ಬಂದರುಗಳ ಕಾರ್ಯನಿರ್ವಹಣೆಯೂ ಕೇಂದ್ರದ ಕೈಯ್ಯಲ್ಲೇ ಇದೆ. ಆದ್ದರಿಂದ ನಮ್ಮ ಸಂಪನ್ಮೂಲಗಳ ರಕ್ಷಣೆ, ಅಕ್ರಮಗಳನ್ನು ತಡೆಯುವ ಹೊಣೆ ಕೇಂದ್ರ ಸರ್ಕಾರದ್ದಾಗಿದೆ. ರಾಜ್ಯದ ಪಾಲು ಇಲ್ಲವೆಂದಲ್ಲ. ಅಕ್ರಮಗಳನ್ನು ತಡೆಯಲು ರಾಜ್ಯಸರ್ಕಾರಕ್ಕೆ ಸಂವಿಧಾನಾತ್ಮಕ ಅವಕಾಶ ಹಕ್ಕುಗಳಿವೆ. ಆದರೆ ಈ ಎರಡೂ ಸರ್ಕಾರಗಳು ಅಕ್ರಮ ದಂಧೆಗಳಿಗೆ ಬೆಂಬಲವಾಗಿವೆ. ಸರ್ಕಾರಿ ಯಂತ್ರವನ್ನೇ ದುರ್ಬಳಕೆ ಮಾಡುತ್ತಿವೆ. ಜಾಗತೀಕರಣ, ಉದಾರೀಕರಣದ ನೀತಿಯ ಆರಾಧಕರಾಗಿರುವ ಕಾಂಗ್ರೆಸ್, ಬಿಜೆಪಿಗಳೂ ಕಬ್ಬಿಣ, ಚಿನ್ನ ವಜ್ರದಂತಹ ಗಣಿಗಾರಿಕೆಯ ವಿದೇಶಿ, ಸ್ವದೇಶಿ ಬಂಡವಾಳಿಗರಿಗೆ ಮುಕ್ತ ಆಹ್ವಾನ ನೀಡಿವೆ.

ಆದ್ದರಿಂದ ಇಷ್ಟೆಲ್ಲಾ ಅವಾಂತರಗಳ ನಂತರವಾದರೂ ನಮ್ಮ ನಿಕ್ಷೇಪಗಳ ರಕ್ಷಣೆ, ಜನತೆಯ ನೈಜ ಅಭಿವೃದ್ಧಿಗೆ ಮೂಲವಾಗಬೇಕು. ಕರ್ನಾಟಕದಲ್ಲಿ ಏಪ್ರಿಲ್ 21 ರಿಂದ ರಫ್ತು ಚಟುವಟಿಕೆ ಪುನರಾರಂಭಗೊಳ್ಳಲು ಸುಪ್ರಿಂಕೋರ್ಟ್ ಅವಕಾಶ ಕಲ್ಪಿಸಿದೆ. ಈಗಲೂ ರಾಜ್ಯ ಸರ್ಕಾರ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಲೇಬೇಕು. ಆದರೆ ಇದು ಭೂ ಹಾಗೂ ಗಣಿಮಾಫಿಯಾಗಳ ಸರ್ಕಾರದಿಂದ ಸಾಧ್ಯವೇ? ನ್ಯಾಯಾಲಯದ ಆದೇಶ ಪಾಲಿಸುವುದಾಗಿ ಹೇಳಿರುವ ಬಿಜೆಪಿ ಸರ್ಕಾರ ನಿಜಕ್ಕೂ ಅದಕ್ಕೆ ಬದ್ಧವೇ? ಹಾಗಿದ್ದಲ್ಲಿ ಲೋಕಾಯುಕ್ತರ ಸೂಚನೆಗಳನ್ನಾದರೂ ಜಾರಿಗೆ ತರಲು ಒಂದು ಹೆಜ್ಜೆ ಇರಲಿ.

# ವಿಶ್ವಕಪ್‌ನ ಸುತ್ತ

ಏಪ್ರಿಲ್ 2 ವಿಶ್ವಕಪ್ ಕೊನೆಯ ಆಟ. ಸ್ಪರ್ಧೆ ಭಾರತ, ಶ್ರೀಲಂಕಾಗಳ ನಡುವೆಯೇ. ಸೆಮಿಫೈಲ್‌ನಲ್ಲಿ ಪಾಕಿಸ್ತಾನದ ಎದುರು ಭಾರತ ಗೆಲ್ಲುವುದರೊಂದಿಗೆ ವಿಶ್ವಕಪ್ ಗೆಲುವಿನ ಆಶೆಯನ್ನು ಜನರಲ್ಲಿ ಪ್ರಬಲವಾಗಿ ಮೂಡಿಸಿತ್ತು. ಆಟ ನಡೆಯುತ್ತಿರುವಂತೆ ಥರೇಹವಾರಿ ಕಾತರವನ್ನು ಹೆಚ್ಚಿಸಿತ್ತು.

ಅಂದು ಸಮಯ ರಾತ್ರಿ 9 ಆದರೂ ಎಲ್ಲೂ ಸಪ್ಪಳವಿಲ್ಲ. ಕೂಗಾಟ, ಚೀರಾಟಗಳಿಲ್ಲ. ಇಂತಹ 'ಮೂಡ್'ನ್ನು ಗಮನಿಸಿದ ನನಗೆ ಬಹುತೇಕ ಭಾರತ ಸೋಲಿನ ಸ್ಥಿತಿಯೆಡೆಗೆ ಸಾಗುತ್ತಿಯೇ ಅನ್ನಿಸಿತ್ತು. ಆದರೆ ಆಟ ಬಿರುಸಾಗಿ ಸಾಗಿದರೂ ಎಂದಿನಂತೆ ಕೊನೆಯ ಹಂತದ 'ಚಿತ್ತೋಹಾರಿ ಆಟ'ದ ಬಳಿಕ ಶ್ರೀಲಂಕಾ ತಂಡ ಸೋತಿತು. ಭಾರತದ ತಂಡ ಗೆದ್ದಿತು. ಆಗ ಎಲ್ಲೆಡೆಗಳಲ್ಲಿಯೂ ಸಂಭ್ರಮ, ಸಿಹಿ ಹಂಚಿಕೆ, ಕತ್ತಲಾಕಾಶದಲ್ಲಿ ಪಟಾಕಿಗಳ ಥಳಕು, ಬೆಳಕು, ಟಿ.ವಿ. ವರದಿಗಾರರಲ್ಲಿ ಹೆಚ್ಚಿದ ರಕ್ತದೊತ್ತಡ!



ಇಂತಹ ಸಂಭ್ರಮ ಕೇವಲ ಜನರಲ್ಲಿ ಮಾತ್ರವಲ್ಲ, ವಿಪರೀತ ಅನುಭವಿಸಿದ್ದು ಟಿ.ವಿ. ಪತ್ರಿಕೆ ಮಾಧ್ಯಮಗಳು. ಮುದ್ರಣ ಮಾಧ್ಯಮದಲ್ಲಿ ಥರೇಹವಾರಿ ವಿಶ್ಲೇಷಣೆಗಳು, ವ್ಯಾಖ್ಯಾನ ಹರಿದಿದೆ. ಇದಕ್ಕೂ ಮೀರಿದ ಅಬ್ಬರ ಸೃಷ್ಟಿಸಿದ್ದು ಭಾರತ ಪಾಕಿಸ್ತಾನದ ಪಂಧ್ಯದ ಸಂದರ್ಭದಲ್ಲೇ.

### ಇಲ್ಲವಾದ ಕ್ರೀಡಾ ಸ್ಪೂರ್ತಿ


ಕ್ರಿಕೆಟ್ ಬಗ್ಗೆ ಹರಿಯುತ್ತಿರುವ ಉತ್ಸಾಹ, ಹುಚ್ಚು ಹೊಳೆಯ ಹಿಂದಿನ ಅರ್ಥವಾದರೂ ಏನು? ಕ್ರೀಡೆಯನ್ನು 'ಕ್ರೀಡಾ ಮನೋಭಾವ'ದ ಸ್ಪೂರ್ತಿಯಿಂದ ಸಹಜ ಕಣ್ಣುಗಳಿಂದ ನೋಡಲಾಗುತ್ತಿದೆಯೇ? ಕ್ರಿಕೆಟ್ ಗೆಲುವು, ಸೋಲುಗಳನ್ನು ಕ್ರೀಡೆಯಾಗಿ, ಸಹಜ ಸಾಮರ್ಥ್ಯದ ಅಭಿವ್ಯಕ್ತಿಯೇ ಆಗಿದೆಯೋ? ನಿಜ, ಈ ಒಂದು ಕ್ರಿಕೆಟ್ ಪಂದ್ಯ ವಿವಿಧ ಭಾಷಿಕ, ಧರ್ಮ, ಜಾತಿಗಳ ನಮ್ಮ ಜನರನ್ನು ಬೆಸೆದಿತ್ತು. ಭಾರತದ ತಂಡವೂ ದೇಶದ ವಿವಿಧತೆಯಲ್ಲಿ ಏಕತೆಯಂತೆ ಬೆಸೆದುಕೊಂಡು ಅದು ಸಶಕ್ತ ತಂಡವಾಗಿತ್ತು. ಇಂತಹ ಐಕ್ಯತೆ ಬಲಗೊಂಡರೆ ಎಂತಹ ಸಾಧನೆಗಳನ್ನು ಭಾರತ ಮಾಡಬಹುದು ಎಂಬುದರ ಪ್ರತೀಕವೂ ಆಗಿತ್ತು. ಇದನ್ನೇ ಅಲ್ಲವೇ ಕ್ರೀಡಾಸ್ಪೂರ್ತಿ, ಸಂದೇಶ ಅನ್ನುವುದು, ಸಾಮೂಹಿಕ ಶಕ್ತಿಯೇ ಅದರ ಅಂತಃ ಸತ್ವ,

ಇದರೊಟ್ಟಿಗೆ 'ಹಲವು ಪ್ರಶ್ನೆ'ಗಳನ್ನು ಎತ್ತಿತು. ಭಾರತ ಗೆದ್ದು ಸಂಭ್ರಮಿಸುತ್ತಿದ್ದ ಮರುಗಳಿಗೆಯಲ್ಲೇ ಆಘಾತಕರ ಸುದ್ದಿಯೂ ಬಿತ್ತರಗೊಂಡಿತು. ಮಂಡ್ಯದ ಸಮೀಪ ಬಿ.ಎಸ್.ಸಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಕ್ರಿಕೆಟ್ ಆಟದ ಕಾರಣಕ್ಕೆ ನೇಣಿಗೆ ಬಲಿಯಾಗಿದ್ದ. ಭಾರತ ಗೆದ್ದರೂ ಆತ ಸಂಭ್ರಮಿಸುವ ಸ್ಥಿತಿಯಲ್ಲಿರಲಿಲ್ಲ. ಸಚಿನ್ ತೆಂಡೂಲ್ಕರ್ ಸೆಂಚುರಿ ಹೊಡೆಯಲಾಗಲಿಲ್ಲ. ಎಂಬ ಕಾರಣಕ್ಕಾಗಿ. ಹೀಗಾಗಿ ಒಂದೂವರೆ ಲಕ್ಷ ರೂಪಾಯಿಗಳ ಬೆಟ್ಟಿಂಗ್ ಕಟ್ಟಿದ ಆತ ಹಣ ಜೋಡಿಸಲು ಅಸಾಧ್ಯವಾಗುವುದನ್ನೂ ಬೆಟ್ಟಿಂಗ್ ಮಾಫಿಯಾಗಳು ತನ್ನನ್ನು ಬೇಟೆಯಾಡುವುದನ್ನು ನೆನೆದೇ ನೇಣಿಗೆ ಕೊರಳೊಡ್ಡಿದ್ದ. ಇದು ಒಂದು ಕಥೆಯಾದರೆ ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ ಹೃದಯಾಘಾತಕ್ಕೀಡಾದ ಶಿಕ್ಷಕನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದೇ ಸಾವನ್ನಪ್ಪಿದ. ಕಾರಣ ಕ್ರಿಕೆಟ್ ಆಟದ ವೀಕ್ಷಣೆಗಾಗಿ ಕುಳಿತಿದ್ದ ವೈದ್ಯ ಆಸ್ಪತ್ರೆಗೆ ಬರಲು ನಿರಾಕರಿಸಿ ಚಿಕಿತ್ಸೆ ನೀಡದಿದ್ದುದರಿಂದಾಗಿ ಶಿಕ್ಷಕ ಕೊನೆಯುಸಿರೆಳೆಯಬೇಕಾಯ್ತು. ಹಾಗೆಯೇ ಈ ಪಂದ್ಯ ಮೋಜು, ಮಸ್ತಿಗೂ ಇಂಬು ಕೊಡುವಲ್ಲಿ ಹಿಂದೆ ಬೀಳಲಿಲ್ಲ. ಈ ಒಂದು ವಾರದೊಳಗೆ ಮದ್ಯ ಮಾರಾಟ ಭರದಿಂದ ನಡೆಯಿತು. ಅದರ ವಹಿವಾಟೇ 35 ಸಾವಿರ ಕೋಟಿ ರೂಪಾಯಿಗಳು ಬೆಂಗಳೂರಿನಲ್ಲೇ 1400 ಕೋಟಿ ರೂಪಾಯಿಗಳು. 'ಇನ್ನೂ ವಿಶ್ವಕಪ್ ಹೆಸರಿನಲ್ಲಿ ನಡೆದ ವೇಶ್ಯಾವಾಟಿಕೆ' ಬಂಧನಗಳು 'ವ್ಯವಹಾರ'ದ ಕೆಲವು ಮುಖಗಳು. ಅಂದರೆ ಕ್ರಿಕೆಟ್ ಪಂದ್ಯಾಟ ಎನ್ನುವುದು ನಿಜಕ್ಕೂ ಏನು? ದೇಶದ ಗೆಲುವಿನ ಹೆಮ್ಮೆಯೇ? ಅಥವಾ ಮಾಫಿಯಾಗಳ ವಿಜೃಂಭಣೆಯೇ? ಕಾರ್ಪೊರೇಟ್ ಕಂಪನಿಗಳ ವ್ಯವಹಾರವೇ?

### ವ್ಯಾಪಾರಿ ಹಿತ

ಒಲಿಂಪಿಕ್ಸ್‌ನ ಹೊರಗಿರುವ ಈ ಕ್ರಿಕೆಟ್ ಬೆಂಬಲ ಗಳಿಸಿರು ವಂತೆ ಆರಂಭ ದಿಂದಲೂ ವಿರೋಧಕ್ಕೂ, ಟೀಕೆಗೂ ಒಳಗಾಗಿದೆ. ಇಂಗ್ಲೆಂಡ್‌ನ ಕೌಬಾಯ್ಸ್ (ದನ ಕಾಯುವ ಹುಡುಗರ) ಆಟವೆಂದೂ (ಯಾರದ್ದು ಎಂಬುದು ಈಗ ಅಪ್ರಸ್ತುತ), ಖ್ಯಾತ ಚಿಂತಕರಿಂದ 11 ಜನ ಮೂರ್ಖರ ಆಟವನ್ನು 11 ಲಕ್ಷ ಜನ ನೋಡುತ್ತಾ 11 ಕೋಟಿ ಸಂಭ್ರಮಿಸುವ ಆಟ ಎಂದೆಲ್ಲಾ ಟೀಕೆಗೆ ಒಳಗಾಗಿದೆ. ಇಂಗ್ಲೆಂಡ್ 'ಹುಡುಗರ ಆಟ' ಇದೀಗ ಬಿಲಿಯಾಧೀಶರ ಆಟವಾಗಿ ಮಾರ್ಪಟ್ಟಿದೆ. ಯಾವ ಕ್ರೀಡೆಗೂ ಇಲ್ಲದ ಕಮರ್ಷಿಯಲ್ ಟಚ್ (ವ್ಯಾಪಾರಿ ಹೊಳಹು) ಈ ಆಟಕ್ಕೆ ಬಂದಿವೆ. ಆಟಗಾರರು ತಾರಾಮಣಿಗಳು, ಹೀರೋಗಳು, ಜಾಹೀರಾತು ಹಣ ತರುವ ಕುದುರೆಗಳು, ಅವರು ಕಾರ್ಪೊರೇಟ್ ಕಂಪನಿಗಳ ಖರೀದಿಗೆ ಒಳಗಾದ ರೇಸ್ ಕುದುರೆಗಳು, ಇಡೀ ಆಟವೇ ಹಲವು ಕಂಪನಿಗಳ ಪ್ರಾಯೋಜಕತ್ವದ ಹುಂಗಿನಲ್ಲೇ ಹೀಗೆ ಕ್ರೀಡೆಯ ನಿಜ ಸತ್ವವನ್ನು ನಾಶ ಮಾಡಿ ದುಡ್ಡು ದೋಚುವ ದಂಧೆಯಾಗಿ ಕ್ರಿಕೆಟನ್ನು ಮಾರ್ಪಡಿಸಿರುವ ಮಾಫಿಯಾಗಳೇ ಆಟಕ್ಕೆ ಅಷ್ಟೊಂದು ಪ್ರಚಾರದ ಅಬ್ಬರ ಕೊಡುವುದು. ಈ ಹುಚ್ಚು ಹೊಳೆಯಲ್ಲಿ ಟಿ.ವಿ. ಪತ್ರಿಕೆ,

ಪುಟ 6 ಕ್ಕೆ



# ಬಳ್ಳಾರಿ ದೇವದಾಸಿ ಮಹಿಳೆಯರ ಅಹೋರಾತ್ರಿ ಧರಣ

ವರದಿ : ಬೃಂದಾ.ಬಿ

ಈ ಸಮಾಜದ ಅನಿಷ್ಟ ಪದ್ಧತಿಗಳಲ್ಲಿ ಒಂದಾದ ದೇವದಾಸಿ ಪದ್ಧತಿಗೆ ಸಿಲುಕಿರುವ ಬಡ, ದಲಿತ ಮಹಿಳೆಯರ ಸ್ಥಿತಿಗತಿ ಹೇಳತೀರದು. ಶೋಷಣೆಯಲ್ಲಿ ತೀರ ಶೋಷಣೆಗೊಳಗಾದ ಅನ್ಯಾಯಗಳಲ್ಲಿ ತೀರ ಅನ್ಯಾಯಕ್ಕೊಳಗಾದ ದೇವದಾಸಿಯರ ವಿಮೋಚನೆಗಾಗಿ ಹಗಲಿರುಳು ಹೋರಾಟ ಮಾಡುತ್ತ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘವು ಸಂಘಟಿಸುತ್ತ ಬಂದಿದೆ.



ದೇವದಾಸಿಯರ ಹಲವಾರು ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯಸಮಿತಿಯ ಕರೆಯ ಮೇರೆಗೆ ಜಿಲ್ಲೆಯಲ್ಲಿಯೂ ಸಾವಿರಾರು ದೇವದಾಸಿ ಮಹಿಳೆಯರು ಜಿಲ್ಲಾಧಿಕಾರಿ ಕಛೇರಿ ಎದುರು ದಿನಾಂಕ 14.03.2011 ರಿಂದ 18.03.2011 ರವರೆಗೆ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಸಂಘದ ರಾಜ್ಯ ಅಧ್ಯಕ್ಷರಾದ ಬಿ.ಮಾಳಮ್ಮ ನೇತೃತ್ವ ವಹಿಸಿ ಮಾತನಾಡುತ್ತಾ ಹತ್ತಾರು ವರ್ಷಗಳಿಂದ ರಾಜ್ಯಮಟ್ಟದಲ್ಲಿ ಸಂಘಟನೆ ಮಾಡಿ ಅನೇಕ ಬಾರಿ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಹೋರಾಟ ಮಾಡಿದರೂ ಆಳುವ ಸರಕಾರಗಳು ಬೇಡಿಕೆಗಳನ್ನು ಈಡೇರಿಸದೆ ಬರೀ ಭರವಸೆ ಕೊಡುವುದರ ಮೂಲಕ ದಲಿತ ಹಾಗೂ ಮಹಿಳೆಯರ ವಿರೋಧಿ ನೀತಿಯನ್ನು ಅನುಸರಿಸುತ್ತ ಬಂದಿವೆ ಎಂದು ಹೇಳಿದರು.

ರಾಜ್ಯದಲ್ಲಿ ಈಗ ಆಡಳಿತ ನಡೆಸುವ ಬಿಜೆಪಿ ಸರಕಾರ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಸಾವಿರಾರು ಕೋಟಿಯನ್ನು ಲೂಟಿ ಮಾಡಿದೆ. ಈ ವರ್ಷದ ಬಜೆಟ್‌ನಲ್ಲಿ ದಲಿತರಿಗೆ ಸಮರ್ಪಕವಾಗಿ ಹಣ ನಿಗದಿ ಮಾಡದೆ ಮಠಮಾನ್ಯಗಳಿಗೆ ಹಾಗೂ ಬಂಡವಾಳದಾರರ ಪರವಾಗಿ ಕೋಟ್ಯಾಂತರ ಹಣ ನೀಡಿ ಶ್ರೀಮಂತರ ಪರ ಎಂದು ಸಾಬೀತಾಗಿದೆ ಎಂದರು.

ದೇವದಾಸಿ ಮಹಿಳೆಯರ 2007 ಮತ್ತು 2008 ರ ಸಾಲಿನ ಹೊಸ ಗಣತಿ ಪಟ್ಟಿ ಬಿಡುಗಡೆ ಮಾಡಬೇಕು. ದೇವದಾಸಿ ಮಹಿಳೆಯರಿಗೆ ಮಾಸಿಕ ಪೆನ್ಷನ್ ಒಂದು ಸಾವಿರ ರೂ.ಗಳಿಗೆ ಹೆಚ್ಚಿಸಬೇಕು. ನಿಗದಿಯಾದ 45 ವರ್ಷ ವಯೋಮಿತಿಯನ್ನು ಕೈಬಿಡಬೇಕು. ನಿವೇಶನ, ಮನೆ ನೀಡಬೇಕು. ಅಂತ್ಯೋದಯ ಕಾರ್ಡನ್ನು ಪ್ರತಿಯೊಬ್ಬರಿಗೂ ಕೊಡಬೇಕು. ತಲಾ ಎರಡು ಎಕರೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ನೀಡಬೇಕು. ನೀರಾವರಿ ಸೌಲಭ್ಯ ಒದಗಿಸಿ ಬಡ್ಡಿರಹಿತ ಸಾಲ ಸೌಲಭ್ಯ ನೀಡಬೇಕು. ದೇವದಾಸಿ ಮಹಿಳೆಯರ ಬಾಕಿ ಇರುವ ಪೆನ್ಷನ್ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳು ಸಮರ್ಪಕವಾಗಿ ಪಿಂಚಣಿ ಕೊಡಬೇಕು.

ದೇವದಾಸಿ ಮಹಿಳೆಯರು ಸ್ವಾಭಿಮಾನದ ಬದುಕು ಬದುಕಲು ಸರಕಾರ ಕೂಡಲೇ ಕ್ರಮ ಕೈಗೊಂಡು ಸ್ವಯಂ ಉದ್ಯೋಗ ಸ್ಥಾಪಿಸಲು ನೆರವು ನೀಡಬೇಕು. ದೇವದಾಸಿ ಮಹಿಳೆಯರ ಅಭಿವೃದ್ಧಿಗಾಗಿ ಪ್ರತ್ಯೇಕ ಹಣವನ್ನು ಬಜೆಟ್‌ನಲ್ಲಿ ಮೀಸಲಿಡಬೇಕು. ಇನ್ನೂ ಮುಂತಾದ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಐದು ದಿನಗಳ ಕಾಲ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಿ, ಸರಕಾರಕ್ಕೆ ಜಿಲ್ಲಾಧಿಕಾರಿಗಳ ಮೂಲಕ ಮನವಿಪತ್ರವನ್ನು ಕೊಡುವುದರ ಮೂಲಕ ಒತ್ತಾಯಿಸಲಾಯಿತು.

ಧರಣಿಯ ಮುಖಂಡತ್ವವನ್ನು, ಜಿಲ್ಲಾ ಮುಖಂಡರುಗಳಾದ ದುರುಗಮ್ಮ, ಹನುಮಕ್ಕ, ಬಸಮ್ಮ ಈರಮ್ಮ ಬಿ.ಅಡಿವಪ್ಪ, ವಿ.ರೇವಣ್ಣ,



ಸಣ್ಣತಮ್ಮಪ್ಪ, ಕಮಲಮ್ಮ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಜಪಾನ್‌ನಲ್ಲಿ ಸುನಾಮಿ ಹೊಡೆತಕ್ಕೆ ಬಲಿಯಾದ ಸಂತ್ರಸ್ಥರಿಗೆ ಪರಿಹಾರನಿಧಿ 1300 ರೂ. ಜಿಲ್ಲಾಧಿಕಾರಿ ಮೂಲಕ ಕಳುಹಿಸಲಾಯಿತು.



# ಸಾಯಿಬಾಬುನ್ನ ಬದುಕ್ಸಕೆ ಡಾಕ್ಟ್ರೇ ಬೇಕಂತೆ

ಕ್ಯಾತೆ

ಈ. ಬಸವರಾಜು ಮಲ್ಲೇನಹಳ್ಳಿ

ಯಣ್ಣ, ಅಂತೂ ಸಾಯಿಬಾಬುಂಗೆ ಬ್ಯಾರೇರ್ ಎಲ್ಲು ಬೇಕು ಅಂತ ಗೊತ್ತಾಯ್ತು

ಯಾಕಿಂಗ್ ಏಳ್ತಿಯ? ಅವ್ನು ಪವಾಡ ಪುರುಸ, ಏನ್ ಬೇಕು ಅದ್ನ ಸೃಷ್ಟೆ ಮಾಡ್ತನೆ ಅಂತರೆ!

ಅನ್ನದೇನೋ ಸರಿ, ನಾನೂ ಕೇಳಿದ್ದಿನಿ, ನಮ್ ಕಡೆ ಜನ ಸಾಯಿಬಾಬುನ್ ದರುಸನ ಮಾಡಕ್ಕೆ ಅಂತವ ಓಯ್ತಲೇ ಇರ್ತರೆ. ಆದ್ರೆ ಈಗ ನಡೀತಾ ಇರಧ ನೋಡಿದ್ರೆ ನಂಗೆ ಡೌಟು ಬತ್ತಾ ಅದೆ.

**ನಿಂಗ್ಯಾಕಂತ ಡೌಟು ಬಂತು?**

ಈಗ ಕಾಗೇನೂ ಕರ್ಗಿರ್ತದೆ, ಕೋಗಿಲೇನೂ ಕರ್ಗಿರ್ತದೆ, ಅವ್ಕಳ್ದೂ ಬ್ಯಾರೆ ಅನ್ನದು ಗೊತ್ತಾಗದು ವಸಂತ್ ಕಾಲ್ದಲಿ ಅಂತರೆ. ಯಾಕೆ ಅಂದ್ರೆ ಕಾಗೆ ಕಾಕಾ ಅಂತದೆ, ಕೋಗಿಲೆ ಕೂಗದ ಕೇಳಕೆ ಒಂದು ಅನಂದ ಆಯ್ತದೆ. ಅಂಗೆ ಯಲ್ಲ ಪವಾಡ ಪುರುಸ್ರೂ, ಮೈಮ್ಯಾಲೆ ದೇವ್ರು ಬರರ್ ಬಣ್ಣ ಬಯ್ಲಾಗದು ಇಂತ ಟೈಮಲ್ಲೆಯ.

ಈಗೇನಾಗ್ಯದೆ ಸಾಯಿ ಬಾಬುಂಗೆ? ಯಾರ್‍ಯಾರ ಗೂಸ ಕೊಟ್ರೆ?

ಪಾಪ ಅವ್ನಿಗೆ ಗೂಸ ಕೊಡಕೋಗಿದ್ ಉಡುಗ್ರ ಕೊಂದಾಕಿದ, ಗೂಸು ಇಲ್ಲ, ಏನೂ ಇಲ್ಲ. ಉಸಾರಿಲ್ದೆ ಆಸ್ಪತ್ರಿಗೆ ಸೇರ್ಕಂಡವ್ನೆ. ಯಂಗೋ, ಏನೋ ಅನ್ನಂಗಾಗದಂತೆ ಅಂತೆ. ಆದ್ರೆ ಅವ್ನು ವಳ್ಗೆ ಆಸ್ಪತ್ರೆ ಕಟ್ಟಿಸ್ಯವ್ನಲ, ಅವ್ರು ಅಂಗೂ ಇಂಗೂ ಮಾಡಿ ಉಳ್ಸಕೆ ಪ್ರೇತ್ನ ಮಾಡ್ತಾ ಅವ್ರಂತೆ.

ಉಸಾರಿಲ್ದೆ ಇದ್ ಮ್ಯಾಲೆ ಆಸ್ಪತ್ರೆ ಬುಟ್ಟು ಇನ್ನೆಲ್ಲಿಗೋದರು?

ನಮ್ಮಂತರೋದ್ರೆ ಏನೂ ಇಲ್ಲ, ಇವ್ನು ದೇವ ಮಾನವ, ದೇವ್ರಿಗೆ ಸಮ. ಏನ್ ಬೇಕದ್ನೆಯ ಸೃಷ್ಟೆ ಮಾಡ್ತನೆ ಅಂತ ಪ್ರಚಾರ ತಗಂಡನು. ಕ್ವನಿಗೆ ಡಾಕುಟ್ರೇ ಗತಿಯಾಯ್ತುಲ, ಅವ್ನು ನಮ್ಮಂಗೆಯ ಅನ್ನದು ಈಗ ಗ್ಯಾರಂಟಿ ಆಯ್ತು ನೋಡು!

ನಿಂಗೆ ಈಗ ಗೊತ್ತಾಗ್ಯದೆ, ನಂಗೆ ಆ ಉಡುಗ್ರು ಇವ್ನ ವಡ್ಯಕೋಗಿ, ಇವ್ನ ಮೂಲೆ ಮುಡುಕ್ಲಲಿ ಅವುತ್ಕಂಡು ಬದಿಕ್ಯಂಡ್ನಲ, ಆಗ್ಲೇ ಗೊತ್ತಾಗೋದ್ಲು ಬುಡು.

ಮತ್ತೆ ಅದ್ಯಂಗೆ ಇಷ್ಟೊಂತರ ಜನ ನಂಬಿಕಂಡು ಕಷ್ಟ ಪರಿಹಾರ ಮಾಡಪ್ಪ ಅಂತ ಓಯ್ತರೆ?

ನಮ್ ಜನ ಏನೂ ಅರೀದೋರು ನೋಡಪ್ಪ, ಏನ್ ಏಳಿದ್ರೂ ನಂಬ್ತರೆ. ಈಗ ಅಟ್ಟಿಲಕ್ಕಮ್ಮನ್ ಗುಡಿತಲೇ ನೋಡು. ಆ ಎಮ್ಮುನ್ ಮೈಮ್ಯಾಲೆ ದೇವ್ರು ಬಂದು ಮಾತಾಡಿ ಯಲ್ಲಾರಿಗೂ ಕಷ್ಟ ಪರಿಹರುಸ್ತಿನಿ ಅಂತದೆ. ಆದ್ರೆ ಆ ಎಮ್ಮುನ್ ಕಾಲ್ ಮುದರ್ೋಗಿ, ಎತ್ತಿಕಂಡು ಬಂದು ಅಲ್ಲಿಗೆ ಕುಂಡ್ರುಸ್ಬೇಕು. ದೇವ್ರು ಅದ ಸರಿ ಮಾಡ್ಬ್ಯಾರ್ದೆ? ಅದ್ಕೆ ಏಳದು ಇಂತದ ಜನ ಯೋಚ್ನೆ ಮಾಡ್ಬೇಕು ಅಂತವ.

ಸಾಯಿ ಬಾಬ ನಡ್ವ ಕಾಲ್ದಲಿ ಚನ್ನಾಗಿ ಪ್ರಚಾರ ತಗಂಡ್ನಂತೆ?

ತಗಳದೇನು, ಬರಿಕೈಲಿ ಚಿನ್ನದ್ ಸರ ಕೊಡ್ತಿದ್ನಂತೆ. ಉಂಗ್ರ ಕೊಡ್ತಿದ್ನಂತೆ. ಬೂದಿ ಕೊಡನಂತೆ. ಅದ ನೋಡಿ ಜನ ಮರುಳಾಗೋದ್ರಂತೆ

ಸರ, ಉಂಗ್ರ ಕೊಟ್ರೆ ಏನಾರ ಉಪ್ಯೋಗಾಯ್ತದೆ, ಬೂದಿ ಕೊಡಕೆ ಅವ್ನೇ ಬೇಕೆ? ನಮ್ ಕಾರ್ಕಾನೆ ಪುಟ್ಟಯ್ಯಂಗೇಳಿದ್ರೆ ಅವುಂಗಿಂತ ಜಾಸ್ತಿನೇ ಕೊಡನು.

ನಮ್ ಜನಗಳೇ ಇಂಗೆ. ಏನ್ ಕೊಟ್ರೂ ಪ್ರಸಾದ ಅಂತ ತಗತರೆ. ಸಲ್ಪ ಯೋಚ್ನೆ ಮಾಡಂಗಾದ್ರು ಸಾಕು, ಇದ್ಯಲ್ಲ ನಡ್ಯದಿಲ್ಲ. ಆದ್ರೆ ಈಗ್ ಜನ ಆಡ್ತಾ ಇರದ ನೋಡಿದ್ರೆ ಒಂದಿಲ್ಲ ಒಂದ್ ಮೋಸುಕ್ಕೆ ಸಿಗಾಯ್ಕತ್ತಲೇ ಇರ್ತರೆ.

ಅಲ್ಲಿ ಆಸ್ಪತ್ರೇಲಿ ಆ ವಯ್ಯ ಇದ್ರೆ ಜನ ಆಚೆಕಡೆ ಸೇರಿ ಗಲಾಟೆ ಮಾಡ್ಯರಂತೆ.

ಕಮ್ಮಿ ತಿಳ್ವಳ್ಕೆ. ಉಟ್ಟಿದೋರು ಒಂದಿನ ಸಾಯ್ಲೇಬೇಕಪ್ಪ. ಅವ್ನು ಸಾಯ್ದೇ ಇಂಗೇ ಇರ್ತನೆ ಅಂತ ಅಂದ್ಕಂಡಿದ್ರೇನೊ. ಅದ್ಕೆ ಅಂಗಾಡ್ತಾ ಅವ್ರೆ.

ಯಣ್ಣ, ನಿಂಗು ಸಾಯಿ ಬಾಬುಂಗೂ ಆಗದಿಲ್ವೆ?

ಆಗದಿಲ್ಲ ಅನ್ನಕೆ ನಾವೇನು ದಾಯಾದಿಗಳೇ? ಜಮೀನ ಅಂಚ್ಕಬೇಕೆ? ಅವ್ನು ಪವಾಡ ಮಾಡ್ತಿನಿ ಅಂತ ಇದ್ನಲ, ಅದ್ಕಲ್ ಸುಳ್ಳು ಅಂತ ಏಳ್ತಿದ್ದೆ. ಅವ್ನೇ ಏನು, ಯಾರು ಅಂಗೇಳಿದ್ರೂ ಅದು ಸುಳ್ಳು ಅಂತಿನಪ್ಪ. ಇಲ್ದೇ ಇದ್ರೆ ಚಿನ್ನದ್ ಬ್ಯಲೆ ಇಂಗೇರ್ತಾ ಇತ್ತೆ?

ಇಷ್ಟ ಯೋಚ್ನೇ ಮಾಡಕ್ಕೆ ಎಷ್ಟ್ ಓದ್ಬೇಕಪ್ಪ? ಅದಿರ್ಲಿ ಅವುಂತರ ಇನ್ನೂ ಯಾರ್‍ಯಾರೋ ಉಟ್ಕಂಡಿದ್ದರಂತೆ?

ಕಟಿಂಗು, ಸ್ನಾನ ಬುಟ್ರೆ ನೀನು ಅಂಗೆ ಕಾಣುಸ್ತಿಯ. ನಾವು ಎಲ್ಲೀತಕ ಕುರಿಗಳ್ ತರ ಇರ್ತಿವೋ, ಅಲ್ಲೀತಕ ಅಂತರು ಉಟ್ಟಿಕಳ್ತಲೇ ಇರ್ತರೆ. ಮದ್ಲು ನಾವು ಇದು ಯಾಕೆ? ಏನು? ಯಂಗೆ? ಅಂತವ ಕೇಳಂಗಾಗ್ಬೇಕು, ಆಗ ನಿದಾನ್ಕೆ ಯಲ್ಲ ಸರ್ಯಾಯ್ತಳೆ ನೋಡು.

## ಜಂಗಮ ಸ್ಥಾವರ

ಬಸವಣ್ಣ ಸ್ಥಾವರವ ತಿರಸ್ಕಾರ ಮಾಡಿ
ಜಂಗಮಕೆ ಪುರಸ್ಕಾರ ನೀಡಿದನು ನೋಡಿ
ಇಂದಿವರು ಆ ಅವನ ಮೂರ್ತಿಯನು ಕೆತ್ತಿ
ಗಳಿಸಲಿಕೆ ಹತ್ತಿಹರು ಆರತಿಯ ಎತ್ತಿ

- ವಿಡಂಬಾರಿ

## ಜಾತಿ ರಾಜಕೀಯ

ಬಸವ ತತ್ವಕ್ಕೆ ಮಸಿ ಬಳಿದು ಇಂದೆ
ಜಾತಿ ರಾಜಕೀಯ ಮಾಡುವುದ ಕಂಡೆ
ಬಸವಣ್ಣ ದಲಿತ ಜನ ಮನೆಯಲ್ಲಿ ಉಂಡ
ಸತ್ಯವನು ಹೇಳಿದರೆ ಕಾರುವರು ಕೆಂಡ

- ವಿಡಂಬಾರಿ

# ಅಸಂಘಟಿತರಿಗೆ ಲಾಭವಿಲ್ಲದ ಪಿಂಚಣಿ ಯೋಜನೆ

**ಜೀವನವಿಡೀ ದುಡಿದು, ಇಳಿ ವಯಸ್ಸಿನಲ್ಲಿ ನೆಮ್ಮದಿಯ ವಿಶ್ರಾಂತ ಬದುಕು ನಡೆಸಲು ಬಯಸುವ ದುಡಿಮೆಗಾರರೇ ಎಚ್ಚರ, ಬಂಡವಾಳಿಗರ ಲಾಭದ ಕೊಳ್ಳೆಗಾಗಿ ನಿಮ್ಮ ದುಡಿಮೆಯ ಹಣವನ್ನು ಶೇರು ಮಾರುಕಟ್ಟೆ ಎಂಬ ಜೂಜಾಟದಲ್ಲಿ ಪಣಕ್ಕಿಡಲು ಹೊರಟಿದೆ, ಸರ್ಕಾರ. ಓದಿ ಈ ಅಪಾಯದ ಕುರಿತು ಲೇಖನ ಹಾಗೂ ಈ ಕುರಿತ ದುಂಡು ಮೇಜಿನ ಸಭೆಯ ವರದಿ**

■ **ಕೆ. ಮಹಾಂತೇಶ್**

ಕೇಂದ್ರ ಸರ್ಕಾರದ 'ಸ್ವಾವಲಂಬನೆ' ಪಿಂಚಣಿ ಯೋಜನೆಯಿಂದ ರಾಜ್ಯದ ಲಕ್ಷಾಂತರ ಅಸಂಘಟಿತ ಕಾರ್ಮಿಕರಿಗೆ ಪ್ರಯೋಜನವಾಗಲಿದೆ ಎಂದು ಕಾರ್ಮಿಕ ಇಲಾಖೆ ಮತ್ತು 'ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ'ಯು ಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ.

2010 ನವೆಂಬರ್-8 ರಂದು ಸರ್ಕಾರದ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಾದ ರಮೇಶ ಜಳಕಿಯವರ ಅಧ್ಯಕ್ಷತೆಯಲ್ಲಿ ಈ ಯೋಜನೆಯ ಜಾರಿ ಕುರಿತಂತೆ ನಡೆದ ಸಭೆಯಲ್ಲಿ ಉಪಸ್ಥಿತರಿದ್ದ ಬಹುತೇಕ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಆಟೋ, ಟ್ಯಾಕ್ಸಿ, ಹಮಾಲಿ, ಹೋಟೆಲ್ ಮತ್ತಿತರ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಈ ಯೋಜನೆಯಿಂದ ಕಾರ್ಮಿಕರಿಗೆ ಆಗುವ-ನಷ್ಟಗಳ ಬಗ್ಗೆ ವಿವರಿಸಿ ಈ ಯೋಜನೆಯ ಅನುಷ್ಠಾನವನ್ನು ಒಕ್ಕೊರಲಿನಿಂದ ವಿರೋಧಿಸಿದ್ದವು, ಮಾತ್ರವಲ್ಲ ಕಾರ್ಮಿಕರ ಹಣವನ್ನು ಖಾಸಗೀ ಕಂಪನಿಗಳ ವ್ಯವಹಾರಕ್ಕೆ ಧಾರೆ ಎರೆಯುವ ಬದಲು ಸ್ವತ: ಕಾರ್ಮಿಕ ಇಲಾಖೆಯು ಇತರೆ ರಾಜ್ಯಗಳಲ್ಲಿರುವಂತೆ ಪರ್ಯಾಯ ಯೋಜನೆ ರೂಪಿಸಿ ಕಾರ್ಮಿಕರಿಗೆ 'ಪಿಂಚಣಿ' ನೀಡುವ ವ್ಯವಸ್ಥೆ ಮಾಡಬೇಕೆಂದು ಲಿಖಿತವಾದ ಟಿಪ್ಪಣಿಯನ್ನು ಸಹಾ ಆ ಸಭೆಯ ಮುಂದೆ ಹಲವು ಸಂಘಗಳು ಮಂಡಿಸಿದ್ದವು.

**ಈ ಯೋಜನೆಯ ದೋಷಗಳು;**

■ ಈ ಯೋಜನೆಗೆ ಒಳಪಡುವ ಕಾರ್ಮಿಕನು ಪ್ರತಿ ತಿಂಗಳು 100 ರೂ. ರಂತೆ ವರ್ಷಕ್ಕೆ 1200 ರೂ. ಹಣ ತುಂಬಬೇಕು. ಪಿಂಚಣಿ ಪಡೆಯುವ ಪ್ರತಿ ಕಾರ್ಮಿಕನು ಕಡ್ಡಾಯವಾಗಿ -60 ವರ್ಷದ ವರೆಗೆ ಈ ಹಣ ತುಂಬಬೇಕು ಹೀಗೆ ತುಂಬಿದ ಹಣವನ್ನು 60 ನೇ ವಯಸ್ಸಿನವರೆಗೂ ಹಿಂಪಡೆಯಲು ಅವಕಾಶವೇ ಇರುವುದಿಲ್ಲ.



ದುಂಡು ಮೇಜಿನ ಸಭೆಯ ಅಧ್ಯಕ್ಷತೆ ವಹಿಸಿ ಕಾಂ. ವಿಜೆಕೆ ನಾಯರ್

■ ಕಾರ್ಮಿಕರು ಬೆವರು ಸುರಿಸಿ ದುಡಿದು ಪಾವತಿಸಿದ ಈ ಹಣಕ್ಕೆ PFRDA (Pension Fund Regularity Development Authority) ನಿಜವಾಗಿಯೂ ಕನಿಷ್ಠ ಪ್ರಮಾಣದ ಬಡ್ಡಿ ಅಥವಾ ಖಚಿತ ಹೆಚ್ಚಳದ ಗ್ಯಾರಂಟಿ ನೀಡಬೇಕು. ಆದರೆ, ಪಿ.ಎಫ್.ಆರ್.ಡಿ.ಎ ಶೆಡ್ಯೂಲ್, 'ಬಿ' ಅಡಿಯಲ್ಲಿ 6 ವಿಧವಾದ ಸೇವಾ ಶುಲ್ಕ (ಸದ್ಯಕ್ಕೆ ರೂ.70 ಇದೆ. ಮುಂದೆ ಹೆಚ್ಚಾಗಲಿದೆ) ಗಳನ್ನು ಪ್ರತಿ ವರ್ಷ ವಿಧಿಸಲಾಗುತ್ತಿದೆ. ಇದು ಯಾವ ನ್ಯಾಯ?.

■ ಇದಲ್ಲದೆ ಪ್ರತಿ ವರ್ಷ ಕಾರ್ಮಿಕರಿಂದ ಸಂಗ್ರಹವಾದ ಉಳಿತಾಯ ಹಣವನ್ನು ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡುವ (4 ವರ್ಷ ಮಾತ್ರ) ಹಣ ಎರಡನ್ನು ಸೇರಿಸಿ PFM (ಪೆನ್ಷನ್ ಫಂಡ್ ಮ್ಯಾನೇಜರ್ಸ್) ಎಂದು ಗುರ್ತಿಸಲಾದ ರಿಲಯನ್ಸ್ ಫೈನಾನ್ಸ್, ಎಸ್.ಬಿ.ಐ, ಎಲ್ಐಸಿ ಯೂನಿಟ್‌ಪ್ಲಸ್ ಇತ್ಯಾದಿ ಗುರುತಿಸಲಾದ ಷೇರು ವ್ಯವಹಾರ ನಡೆಸುವ ಕಂಪನಿಗಳಿಗೆ ನೀಡಲಾಗುತ್ತಿದೆ. ಹೀಗೆ ಸಂಗ್ರಹವಾಗುವ ಎಲ್ಲಾ ಹಣವನ್ನು ಆ ಕಂಪನಿಗಳು ಷೇರು ಮಾರುಕಟ್ಟೆಗೆ ಹೂಡುತ್ತವೆ. ಅಲ್ಲಿ ಬರುವ ಆದಾಯದ ಮೇಲೆ 'ಪಿಂಚಣಿ' ನಿರ್ಧರಿಸಲಾಗುತ್ತದೆ. ಅಂದರೆ ಖಾತ್ರಿಯಾದ 'ಪಿಂಚಣಿ' ಇಲ್ಲ ಎಂದರ್ಥವಲ್ಲವೇ?. ಹೀಗಿದ್ದೂ, ಅಧಿಕಾರಿಗಳು ಪ್ರತಿ ಕಾರ್ಮಿಕನಿಗೆ ರೂ.544/- ಪಿಂಚಣಿ ದೊರೆಯುತ್ತದೆ ಎನ್ನುವುದಕ್ಕೆ ಆಧಾರ ಎಲ್ಲಿದೆ?

■ ನಿವೃತ್ತಿಯ ಬಳಿಕಾ ಇಳಿ ವಯಸ್ಸಿನಲ್ಲಿ ಜೀವನಾಧಾರಕ್ಕೆ ಒಂದಿಷ್ಟು ಪಿಂಚಣಿ ಬೇಕೆಂಬುದು ಎಲ್ಲರ ಆಶಯ . ಆದರೆ PFRDA ಅಡಿಯಲ್ಲಿ ರೂಪಿಸಲಾದ ಈ ಯೋಜನೆಯ ಲೈಟ್-ಆಫರ್-ಡಾಕ್ಯುಮೆಂಟ್ ನಲ್ಲಿ 'ಹೊಸ ಪಿಂಚಣಿ ಲೈಟ್' ಯೋಜನೆಯಲ್ಲಿ ತೊಡಗಿಸಿದ ಹೂಡಿಕೆ ಮೊತ್ತಕ್ಕೆ ಇರುವ ಗಂಡಾಂತರ ಕುರಿತು ಹೀಗೆ ವಿವರಿಸಿದೆ.

'ಪಿಎಫ್ಆರ್‌ಡಿಎ ಹೂಡಿಕೆ ಮೊತ್ತ ಹಾಗೂ ಅದರ ಫಲ ಮಾರುಕಟ್ಟೆಯಲ್ಲಿ ಶೇರು ವ್ಯವಹಾರದ ಅಪಾಯಕ್ಕೆ (Risk) ಹೊಂದಿ ಕೊಂಡಿರುತ್ತದೆ. ಅಲ್ಲದೆ ಅಸಂಘಟಿತ ಕಾರ್ಮಿಕರ ಹೂಡಿಕೆ ಮೊತ್ತಕ್ಕೆ ಅಥವಾ ಅದರ ಫಲದ ಬಗ್ಗೆ ಯಾವುದೇ ಭರವಸೆ ನೀಡಲಾಗುವುದಿಲ್ಲ'. ಎಂದು ಸ್ಪಷ್ಟವಾಗಿ ಹೇಳಿದೆ. ಹೀಗಿದ್ದಾಗ ನಿವೃತ್ತಿ ವೇತನ (ಪಿಂಚಣಿ) ಅಸಂಘಟಿತರಿಗೆ ಸಿಗುವ ಭರವಸೆಯಾದರೂ ಎಲ್ಲಿದೆ?

■ ಒಂದು ವೇಳೆ ಪಿಂಚಣಿ ಯೋಜನೆ ಲೈಟ್‌ಗೆ ಸದಸ್ಯರಾದ ಅಸಂಘಟಿತ ಕಾರ್ಮಿಕ 60 ನೇ ವಯಸ್ಸಿಗೆ ಮೊದಲು, ಪಿಂಚಣಿ ಬೇಕೆಂದು ಅರ್ಜಿ ಸಲ್ಲಿಸಿದರೆ ಶೇಖರಣೆ ಆಗಿರುವ ಮೊತ್ತದ ಶೇ.80 ಮೊತ್ತವನ್ನು ಶೇರುಪೇಟೆ ಆನ್ಯೂಟಿನಲ್ಲಿ ತೊಡಗಿಸಬೇಕೆಂಬ ಕಡ್ಡಾಯ ರೂಪಿಸಲಾಗಿದೆ. ಇದು ಸರಿಯೇ?

ಮೇಲ್ಕಂಡ ಅಂಶಗಳಿಂದ ಸ್ಪಷ್ಟವಾಗುವುದೇನೆಂದರೆ ಬಡ ಅಸಂಘಟಿತ ಕಾರ್ಮಿಕರ ಹಣ ಕೇಂದ್ರ-ರಾಜ್ಯ ಸರ್ಕಾರಗಳು ಜನರ ತೆರಿಗೆಗಳಿಂದ ನೀಡುವ ಹಣದ ಕೊಡುಗೆಗಳನ್ನು ಪೆನ್ಷನ್ ಫಂಡ್ ಮ್ಯಾನೇಜರ್ (PFM) ಗಳೆಂದು ಆಯ್ಕೆ ಮಾಡಿದ ಸಂಸ್ಥೆಗಳಿಗೆ ಷೇರುಪೇಟೆಯಲ್ಲಿ ತೊಡಗಿಸಲು ಅವಕಾಶ ನೀಡುವುದು ಮತ್ತು ಅವರಿಗೆ ಲಾಭ ಮಾಡಿಕೊಡುವುದೇ ಈ ಹೊಸ ಪಿಂಚಣಿ ಯೋಜನೆಯ ಮುಖ್ಯ ಉದ್ದೇಶವೆಂದು

ಪುಟ 6ಕ್ಕೆ



ಡಾ. ಕೆ.ಮರುಳಸಿದ್ದಪ್ಪ

## ಬೆಂಗಳೂರಿನಲ್ಲಿ ದುಂಡುಮೇಜಿನ ಸಭೆ

### "ಜೂಜಾಟದಲ್ಲಿ ಪಾಲ್ಗೊಂಡವರ್‍ಯಾರೂ ಉದ್ಧಾರವಾಗುವುದಿಲ್ಲ"

**ಹೊಸ ಪಿಂಚಣಿ ನೀತಿ ಕುರಿತು ಡಾ. ಕೆ.ಮರುಳಸಿದ್ದಪ್ಪ**

ನಮ್ಮ ಸಮಾಜದಲ್ಲಿ ಅತ್ಯಂತ ಅಮಾಯಕರು ಮತ್ತು ಮುಗ್ಧರೆಂದರೆ ಮಕ್ಕಳು ಮತ್ತು ವೃದ್ಧರು. ಈ ಎರಡೂ ವಿಭಾಗಕ್ಕೆ ಯಾರಾದರೂ ಮೋಸ ಮಾಡಿದರೆ ಅದೊಂದು 'ಮಹಾ ಅಪರಾಧವೆಂದೇ' ನಮ್ಮ ಸಮಾಜ ಮೊದಲಿನಿಂದಲು ನಂಬಿದೆ.

ಹೀಗಿರುವಾಗ ಸ್ವತ: ಸರ್ಕಾರವೇ ಅಸಹಾಯಕರು, ಮುಗ್ಧರೂ ಆದ ಅಸಂಘಟಿತ ಕಾರ್ಮಿಕರಿಗೆ ಅವರ ಇಳಿವಯಸ್ಸಿನಲ್ಲಿ 'ಪಿಂಚಣಿ' ಹೆಸರಲ್ಲಿ ಮೋಸ ಮಾಡಲು ಹೊರಟಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ಖ್ಯಾತ ವಿಮರ್ಶಕರು ಮತ್ತು ನಿವೃತ್ತ ಪ್ರಾಧ್ಯಾಪಕರಾದ ಡಾ|ಕೆ.ಮರುಳಸಿದ್ದಪ್ಪ ಅಭಿಪ್ರಾಯಪಟ್ಟರು.

'ಸಿಐಟಿಯು ರಾಜ್ಯ ಸಮಿತಿ' ಮಾರ್ಚ್ 29ರಂದು ಬೆಂಗಳೂರಿನ ಶಾಸಕರ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಹೊಸ ಪಿಂಚಣಿ ಯೋಜನೆ (EDF) ಯಾರ ಹಿತಕ್ಕಾಗಿ? ಎನ್ನುವ 'ದುಂಡು ಮೇಜಿನ ಸಭೆ'ಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಈಗಿರುವ 'ಯೋಜನೆ'ಯಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಪಡಿಸಲು ಹೊಸದೊಂದು ಯೋಜನೆ ರೂಪಿಸಿದರೆ ಅದಕ್ಕೊಂದು ಅರ್ಥವಿರುತ್ತಿತ್ತು. ಆದರೆ ಈಗ ಸರ್ಕಾರ ತರಲು ಹೊರಟಿರುವ ಈ ರಾಷ್ಟ್ರೀಯ ಪಿಂಚಣಿ ಯೋಜನೆಯು 'ಶೇರು ಪೇಟೆ'ಯ ವ್ಯವಹಾರದ ಮೇಲೆ ಅವಲಂಬಿತವಾದ ಮತ್ತು ಜನತೆಗೆ ಮೋಸ ಮಾಡುವ ಯೋಜನೆಯಾಗಿದೆ. 'ಜೂಜಾಟ'ದಲ್ಲಿ ಪಾಲ್ಗೊಂಡ ಯಾರೊಬ್ಬರೂ ಉದ್ಧಾರವಾಗುವುದಿಲ್ಲ. ಇದಕ್ಕೆ 'ಮಹಾಭಾರತ'ದಲ್ಲಿ ಕೌರವರೊಂದಿಗೆ ಜೂಜಾಟದಲ್ಲಿ ಸೋತ ಪಾಂಡವರೇ ಉದಾಹರಣೆ ಎಂದರು.

ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿ, ಇತ್ತೀಚೆಗೆ ಸಂಸತ್ತಿನಲ್ಲಿ ಮಂಡನೆಯಾದ ಈ 'ಪಿಂಚಣಿ' ಯೋಜನೆಗೆ ಕಾಂಗ್ರೆಸ್, ಬಿಜೆಪಿ ಪಕ್ಷಗಳೆರಡು ಬೆಂಬಲಿಸುವ ಮೂಲಕ ಕಾರ್ಮಿಕರಿಗೆ ದ್ರೋಹ ಮಾಡಿವೆ. ಈ ಮಸೂದೆಯನ್ನು ಸಂಸತ್ತಿನಲ್ಲಿ ಪ್ರಬಲವಾಗಿ ವಿರೋಧಿಸಿದ ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳು ಮಾತ್ರ ಕಾರ್ಮಿಕರ ಪರವಾಗಿ ಧ್ವನಿ ಎತ್ತಿವೆ ಎಂದರು.

ಕರ್ನಾಟಕ ಸರ್ಕಾರದ ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾದ ಮಹಾದೇವಯ್ಯ ಮಠಪತಿ ಮಾತನಾಡಿ, 35 ವರ್ಷಗಳ ಕಾಲ ದುಡಿಸಿಕೊಳ್ಳುವ ಸರ್ಕಾರ ನಿವೃತ್ತಿ ನಂತರ ಅವರ ಉಳಿದ 'ನೆಮ್ಮದಿ ಬದುಕಿ'ಗೆ ಆಸರೆಯಾಗಲಿದ್ದ 'ಪಿಂಚಣಿ'ಯನ್ನು ನಾಶಪಡಿಸಲು ಹೊರಟಿವೆ. ಇಂತಹ ಕ್ರಮವನ್ನು ವಿರೋಧಿಸಿ ಬೀದಿಗಿಳಿಯಬೇಕಾದ ನಾಯಕರು ಕೇವಲ ಸರ್ಕಾರದ ಬಾಲಂಗೋಚಿ ಗಳಾಗಿದ್ದಾರೆ ಎಂದರು.

'ದುಂಡು ಮೇಜಿನ ಸಭೆ'ಯಲ್ಲಿ ಆಟೋ ಚಾಲಕರ ಪರವಾಗಿ ಅಧ್ಯಕ್ಷರಾದ ಮೀನಾಕ್ಷಿ ಸುಂದರಂ, ಹಮಾಲಿ ಕಾರ್ಮಿಕರ ಪರವಾಗಿ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್, ಅಂಗನವಾಡಿ ನೌಕರರ ಪರವಾಗಿ ನಾಗಮಣಿ, BSNLEU ಪರವಾಗಿ ಸುದರ್ಶನ, ಸಿಐಟಿಯು ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಗೋಪಾಲಗೌಡ. ಹೆಚ್.ಎನ್. ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿ.ಜೆ.ಕೆ.ನಾಯರ್ ವಹಿಸಿದ್ದರು. ಆರಂಭದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸ್ವಾಗತಿಸಿದರು. ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್ ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯ್ಯದ್ ಮುಜೀಬ್, ಯಮುನಾಗಾಂವ್ಕರ್, ರಾಜ್ಯ ಉಪಾಧ್ಯಕ್ಷರಾದ ಎನ್.ವೀರಸ್ವಾಮಿ, ಎಐಆರ್‌ಡಿಯು ಪ್ರಧಾನ ಕಾರ್ಯದರ್ಶಿ ರಾಘವೇಂದ್ರ.ಬಿ.ವಿ, ಉಪಾಧ್ಯಕ್ಷರಾದ ಹೆಚ್.ಜಿ.ಶ್ರೀನಿವಾಸಮೂರ್ತಿ, ಹಮಾಲಿ ಫೆಡರೇಷನ್ ರಾಜ್ಯ ಖಜಾಂಚಿ ರಾಜಣ್ಣ ಸೇರಿದಂತೆ ಹಲವಾರು ನಾಯಕರು ಪಾಲ್ಗೊಂಡಿದ್ದರು.

# ಅಸಂಘಟಿತರಿಗೆ ಲಾಭವಿಲ್ಲದ ಪಿಂಚಣಿ ಯೋಜನೆ

ಪುಟ 5 ರಿಂದ

ಸ್ಪಷ್ಟವಾಗುತ್ತದೆ.

ಅಂದರೆ ಬಡ ಕಾರ್ಮಿಕನು ಪ್ರತಿ ತಿಂಗಳ 'ಪಿಂಚಣಿಗಾಗಿ' ಮಾಸಿಕ ಕಂತು ತುಂಬಿ 10-20 ವರ್ಷಗಳು ಕಾದ ನಂತರವೂ 'ಖಾತ್ರಿಯಾದ ಪಿಂಚಣಿ' ಸಿಗುವುದಿಲ್ಲ ಎಂಬುದು.ಮಾತ್ರ ಗ್ಯಾರಂಟಿ!

ಇಡೀ ಈ ಪಿಂಚಣಿ ಯೋಜನೆ ನೀಡುವ ಒಂದೇ -ಒಂದು ಭರವಸೆಯೆಂದರೆ...... ಪಿಂಚಣಿ ಪಾವತಿಸುತ್ತಿರುವ ಕಾರ್ಮಿಕ ಒಂದು ವೇಳೆ ಮರಣ ಹೊಂದಿದರೆ ಅವನ /ಳ ವಾರಸುದಾರರಿಗೆ ಅದುವರೆಗೂ ಶೇಖರಣೆಯಾಗಿರುವ ಮೊತ್ತದಲ್ಲಿ ವೆಚ್ಚಗಳ ಬಾಬ್ತು ಕಡಿತ ಮಾಡಿ (ಸೇವಾ ತೆರಿಗೆ ಇತ್ಯಾದಿ) ಉಳಿದ ಮೊತ್ತ ಪಾವತಿಸಲಾಗುವುದು ಎಂಬುದಷ್ಟೆ.



ಎಸ್.ಪ್ರಸನ್ನಕುಮಾರ್ ಮಾತನಾಡುತ್ತಿರುವುದು. ಮೀನಾಕ್ಷಿ ಸುಂದರಂ, ಎಸ್.ವರಲಕ್ಷ್ಮಿ, ಕೆ.ಮಹಾಂತ್, ಹೆಚ್‌ನ್.ಗೋಪಾಲಗೌಡ ಮುಂತಾದವರು ಜೊತೆಯಲ್ಲಿದ್ದಾರೆ.

### ಪರ್ಯಾಯ ಪಿಂಚಣಿ ಯೋಜನೆಗಳಿಲ್ಲವೇ?

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಹಮಾಲಿ ಕಾರ್ಮಿಕರು, ಆಟೋ/ ಟ್ಯಾಕ್ಸಿ ಚಾಲಕರು - ದೋಬಿಗಳು ಮತ್ತು ಹೋಟೇಲ್ ಕಾರ್ಮಿಕರಿಗೆ ಹಲವಾರು ಕಲ್ಯಾಣ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ- ಕಳೆದ ವರ್ಷ ಅಂದರೆ 2010 ಜನವರಿ 5ರಂದು ಮತ್ತು 13-8-2010 ರಂದು ಎರಡು ಬಾರಿ ಸಭೆ ನಡೆಸಿ ಈ ಕೆಳಕಂಡ ಸೌಲಭ್ಯಗಳನ್ನು ನೀಡುವ ಕುರಿತು ತೀರ್ಮಾನ ಕೈಗೊಂಡಿತ್ತು.

1. ನೊಂದಾಯಿತ ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ
2. ನೊಂದಾಯಿತ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಶೈಕ್ಷಣಿಕ ಧನ ಸಹಾಯ
3. ಕೆಲಸ ಮಾಡುವಾಗ ಮೃತ ಪಟ್ಟರೆ, ಅಂಗ ವೈಕಲ್ಯ ಉಂಟಾದರೆ ಪರಿಹಾರ ನೀಡುವುದು ಮತ್ತು ಜನಶ್ರೀ ಭೀಮಾ ಯೋಜನೆ ವಿಸ್ತರಣೆ
4. ಹೊಸ ಪಿಂಚಣಿ ಯೋಜನೆ

ಆದರೆ 8-11-2010ರಂದು ಕರೆದ ಸಭೆಯಲ್ಲಿ ಮೇಲ್ಕಂಡ 3 ಸೌಲಭ್ಯಗಳನ್ನು ಬದಿಗೊತ್ತಿ ಖಾಸಗೀ ಸಂಸ್ಥೆಯವರ ಸಹಭಾಗಿತ್ವದಲ್ಲಿ 'ಈ ಹೊಸ ಪಿಂಚಣಿ' ಯೋಜನೆಯನ್ನು ಜಾರಿಗೊಳಿಸಲು ಅಧಿಕಾರಿಗಳು ಮುಂದಾಗಿದ್ದರ ಮರ್ಮವೇನು ಎಂಬುದನ್ನು ಭಾಗವಹಿಸಿದ ಬಹುತೇಕ ಪ್ರತಿನಿಧಿಗಳು ಪ್ರಶ್ನಿಸಿದ್ದರು. (ಈ ಎಲ್ಲಾ ಸಭೆಯ ವಿಚಾರಗಳು ದಾಖಲಾಗಿವೆ)

ಇದಲ್ಲದೆ ಇದುವರೆಗೂ 1.5 ಲಕ್ಷ ಸದಸ್ಯರನ್ನು ನೊಂದಾಯಿಸಿರುವ 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಮಂಡಳಿ' ಈ ಯೋಜನೆಯಲ್ಲಿ ತನ್ನ ಸದಸ್ಯ ಕಾರ್ಮಿಕರನ್ನು ಸೇರ್ಪಡೆ ಮಾಡಿಲ್ಲ.



ದುಂಡುಮೇಜಿನ ಸಭೆಯಲ್ಲಿ ಜೆ.ಡಿ.ಎಸ್. ಮುಖಂಡರಾದ ಎಚ್.ಡಿ.ರೇವಣ್ಣ

ಅಲ್ಲಿ ಕೇವಲ ವರ್ಷಕ್ಕೆ ರೂ.120-00 (ಮಾಸಿಕ ಕೇವಲ ರೂ.10) ನೀಡಿ ಸದಸ್ಯನಾಗುವ ಸದಸ್ಯನಿಗೆ ಮಾಸಿಕ ಖಚಿತವಾದ ಪಿಂಚಣಿ ರೂ.300-00 ಸಿಗುತ್ತದೆ. ಇದಲ್ಲದೆ 65 ವರ್ಷ ದಾಟಿದ ಎಲ್ಲರಿಗೂ ಸರ್ಕಾರದ 'ಸಂಧ್ಯಾ ಸುರಕ್ಷ' ಯೋಜನೆಯ ಅಡಿಯಲ್ಲಿ (Old Age Pension Scheme) ಪ್ರತಿಯೊಬ್ಬರಿಗೂ ಯಾವೊಂದು ಖರ್ಚಿಲ್ಲದೆ, ಮಾಸಿಕ ರೂ.400-00 ಪಿಂಚಣಿ ಗ್ಯಾರಂಟಿಯಾಗಿ ಸಿಗುತ್ತದೆ. ಆದರೆ ಇಲ್ಲಿ ವರ್ಷಕ್ಕೆ ರೂ.1200-00ರಂತೆ 15-20 ವರ್ಷ ಹಣ ಪಾವತಿ ಮಾಡಿದರೂ ಖಾತ್ರಿಯಾದ ಪಿಂಚಣಿ ಎಂಬುದು ಮಾತ್ರ ಗಗನ ಕುಸುಮ!

ಇನ್ನು ಕೊನೆಯದಾಗಿ ಕಲ್ಯಾಣ ಮಂಡಳಿ ಅಧಿಕಾರಿಗಳು ಕೆಲವು ಸ್ವಯಂ ಘೋಷಿತ ಮುಖಂಡರನ್ನು ಬಳಸಿ ಈ ಯೋಜನೆ ಜಾರಿಯಾಗದಿದ್ದರೆ ರೂ.40 ಕೋಟಿ ಹಣ ವಾಪಾಸ್ಸಾಗಲಿದೆ ಎಂದು ಸುಳ್ಳು ಪ್ರಚಾರ ನಡೆಸುತ್ತಿದ್ದಾರೆ. ಆದರೆ 2010ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವ ಹಣ ಕೇವಲ ರೂ.20 ಕೋಟಿ ಮಾತ್ರ! 2011-12ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವುದು 25 ಕೋಟಿ ಮಾತ್ರ (ಆದರೆ, ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ 2.92 ಕೋಟಿ) ಇದು ಏನಾಯ್ತು? 20 ಕೋಟಿಯಲ್ಲಿ ಕನಿಷ್ಟ ಒಬ್ಬನೇ ಒಬ್ಬ ಕಾರ್ಮಿಕನಿಗೂ ಒಂದೇ ಒಂದು ಗುರುತಿನ ಚೀಟಿಯನ್ನು ನೀಡಿಲ್ಲ! ಹಾಗಿದ್ದರೂ ಮಾರ್ಚ್ 31, 2011 ರೊಳಗೆ ಕಾರ್ಮಿಕ ಇಲಾಖೆಗಳಿಂದ ಅರ್ಜಿ ಪಡೆದು ಈ ಯೋಜನೆಯ ಸದಸ್ಯರಾಗುವಂತೆ ಕರೆ ನೀಡಿದ್ದರು. ಆದರೆ ಯಾವೊಂದು ಜಿಲ್ಲೆಯ ಕಾರ್ಮಿಕ ಅಧಿಕಾರಿಗಳನ್ನು ಈ ಬಗ್ಗೆ ವಿಚಾರಿಸಿದರೂ ಈ ಕುರಿತು ಮಾಹಿತಿಯೇ ಇಲ್ಲವೆಂದು ಉತ್ತರಿಸುತ್ತಿದ್ದರು. ಹಾಗಾದರೆ ಅರ್ಜಿಗಳು ಎಲ್ಲಿ ಹೋಗಿದ್ದವು. ಅಧಿಕಾರಿಗಳೇ ಉತ್ತರಿಸಬೇಕು!

ಒಟ್ಟಿನಲ್ಲಿ ಈ ಹೊಸ ಪಿಂಚಣಿ ಯೋಜನೆಯಿಂದ ಲಾಭವಾಗುವುದು 'ಬೆವರು ಸುರಿಸಿ' ನಿತ್ಯ ದುಡಿಯುವ ಅಸಂಘಟಿತ ಕಾರ್ಮಿಕನಿಗಂತೂ ಅಲ್ಲವೇ ಅಲ್ಲ. ಬದಲಾಗಿ 'ಖಾಸಗಿ ಸಂಸ್ಥೆಗಳು ಮತ್ತು ಅಧಿಕಾರಿ'ಗಳಿಗೆ ಮಾತ್ರ!

ನಿಜವಾಗಿಯೂ ಅಸಂಘಟಿತ ಕಾರ್ಮಿಕರಿಗೆ ಸಹಾಯ ಮಾಡಬೇಕೆಂದರೆ ಕಾರ್ಮಿಕ ಅಧಿಕಾರಿಗಳ ಮುಂದೆ ಹಲವಾರು ಪರ್ಯಾಯ ದಾರಿಗಳಿವೆ. ಆದರೆ ಅವುಗಳ ಬಗ್ಗೆ ಅವರು ತಲೆಕೆಡಿಸಿಕೊಳ್ಳುತ್ತಿಲ್ಲ. ಹೀಗಾಗಿ ರಾಜ್ಯದಲ್ಲಿರುವ ಎಲ್ಲಾ ಅಸಂಘಟಿತ ಕಾರ್ಮಿಕರು ತಮ್ಮ ಬೆವರಿನ ಪಾಲನ್ನು ನುಂಗಿ ಹಾಕುವ ಇಂತಹ ಪ್ರಚಾರದ ಯೋಜನೆಗೆ ಬಲಿಯಾಗಬಾರದು. ಬದಲಾಗಿ ಪರ್ಯಾಯ ಯೋಜನೆಗಳನ್ನು ರೂಪಿಸಲು ಅಧಿಕಾರಿಗಳ ಮೇಲೆ ಒತ್ತಾಯ ಮಾಡುವ ಪ್ರಯತ್ನ ನಡೆಸಬೇಕಾಗಿದೆ.

# ವಿಶ್ವಕಪ್‌ನ ಸುತ್ತ

ಪುಟ 3 ರಿಂದ

ಮಾಧ್ಯಮಗಳು ಒಂದಿಷ್ಟು ಉಣ್ಣುವುದು.

ಆದ್ದರಿಂದ ಈಗಂತೂ ಕ್ರಿಕೆಟ್ ಪಂದ್ಯಾಟವೆಂದರೆ ಬೆಟ್ಟಿಂಗ್ (ಜೂಜು), ಮ್ಯಾಚ್ ಫಿಕ್ಸಿಂಗ್ ಒಳ ಒಪ್ಪಂದ) ಹೊರತುಪಡಿಸಿ ಯೋಚಿಸುವುದೇ ಕಷ್ಟವಿದೆ. ಭಾರತ, ಪಾಕಿಸ್ತಾನದ ಪಂದ್ಯಾಟದ ಬಹುತೇಕ ಟಿಕೇಟ್‌ಗಳನ್ನು ಮೂರು ತಿಂಗಳ ಹಿಂದೆಯೇ ರಿಲಯನ್ಸ್, ಟಾಟಾದಂತಹ ಗ್ರೂಪ್‌ಗಳು, ಖರೀದಿಸಿಟ್ಟುಕೊಂಡಿದ್ದವೆಂದರೆ ಏನರ್ಥ? ಅವರಿಗೆ ಇಂತಹ ಪಂದ್ಯ ಏರ್ಪಡಲಿದೆಯೆಂದು ಕನಸು ಬಿದ್ದಿತ್ತೇ? ಈ ಆಟದಲ್ಲಿಯೂ ಭಾರತವೇ ಗೆಲ್ಲುವುದು ಎಂಬುದೂ ಜನಜನಿತವಾಗಿತ್ತು. ಇದರ ಸುತ್ತ ಬೆಟ್ಟಿಂಗ್ ಏನಿಲ್ಲವೆಂದರೂ 30 ಸಾವಿರ ಕೋಟಿಗೂ ಅಧಿಕ ವಹಿವಾಟು ನಡೆದಿದೆ ಎನ್ನಲಾಗುತ್ತಿದೆ. ಗಣಿ ನಾಡು ಹೊಸ ಪೇಟೆಯೊಂದರಲ್ಲೇ ಕನಿಷ್ಟ 100 ಕೋಟಿ ರೂಪಾಯಿಗಳ ಬೆಟ್ಟಿಂಗ್ ಹಣ ಹರಿದಾಡಿದೆ ಎಂದರು ಒಳಹೊರಗು ಬಲ್ಲವರು.

ಬೆಟ್ಟಿಂಗ್‌ಗೆ ಸಂಬಂಧಿಸಿ ಪಾಕಿಸ್ತಾನದ ತಂಡದ ಸದಸ್ಯರಿಗೆ ಸಚಿವರು ತಾಕೀತು ಮಾಡಿದ್ದು ಇಂತಹದ್ದರ ವಾಸನೆಯಿಂದ ಈ ಆಟ ಮುಕ್ತವಲ್ಲ ಎಂದು ತೋರಿಸಿತು. ಇಂತಹ ಒಳ ವ್ಯಾಪಾರದ ಒಪ್ಪಂದ ನಿಗದಿಯಾಗುವುದೇ ಮಾಫಿಯಾಗಳಿಂದ. ಇವರು ಸರ್ಕಾರಗಳನ್ನು ನಿಯಂತ್ರಿಸುವ, ಪ್ರಭಾವಿಸುವ ಕುಳಗಳು ಎಂಬುದೂ ಜಗಜ್ಜಾಹೀರು. ಅಂದರೆ ಆಟಗಾರರ ತಂಡದ ಸಾಮರ್ಥ್ಯಕ್ಕೆ ಬೆಲೆ ಎಲ್ಲಿ? ಹಣ ಚಾಚುವುದರ ಎದುರಲ್ಲಿ ದೇಶದ ಮಾನವೆಲ್ಲಿ? ಹೀಗಾಗಿ ಇದನ್ನು ಕ್ರೀಡೆ ಅನ್ನಬೇಕೋ ಅಥವಾ ಜೂಜಾಟ ಅನ್ನಬೇಕೋ? ಇಂತಹ ಜೂಜಾಟಗಳು ಯಶಸ್ವಿಯಾಗಿ ನಡೆಯಬೇಕೆಂದರೆ ಜನ ಉನ್ಮಾದಿತವಾಗಬೇಕು. ಜನರಿಗೆ ದೇಶಪ್ರೇಮದ ಅಮಲು ಹತ್ತಿಸಿ ಗಂಟು ಕಟ್ಟಬೇಕು. ಹೀಗಿದೆ ಲೆಕ್ಕಾಚಾರ

### ರಾಜಕೀಯ ಲೆಕ್ಕಾಚಾರ

ಇಂತಹವುಗಳ ಹಿಂದೆ ರಾಜಕೀಯ ಲೆಕ್ಕಾಚಾರಕ್ಕೆ ಬಳಸಿಕೊಳ್ಳುವ ಇರಾದೆ ಇಲ್ಲದಿಲ್ಲ. ಸಂತೋಷ. ಭಾರತ, ಪಾಕ್ ಆಟ ನೋಡಲು ಪ್ರಧಾನಿ ಮನಮೋಹನ್‌ಸಿಂಗ್, ಪ್ರಧಾನಿ ಜಿಲಾಗಿಯವರು ಮೊಹಾಲಿಗೆ ಆಗಮಿಸಿದ್ದು ಸೋಲುವ ಹಂತದಲ್ಲಿಯೂ ಜಿಲ್ಲಾನಿ ಎದ್ದು ನಡೆಯದೇ ಸಮಚಿತ್ತದಿಂದ ಪ್ರತಿಕ್ರೀಯಿಸಿದ್ದು, ಅಷ್ಟೇ ಏಕೆ ಪಾಕ್ ಟೀಂ ನಾಯಕ ಅಫ್ರೀದಿ ಸಹ ಸ್ವದೇಶಕ್ಕೆ ಹಿಂತಿರುಗಿದ ಮೇಲೆ ಭಾರತ ಫೈನಲ್‌ನಲ್ಲಿ ಗೆಲ್ಲಲಿ ಎಂದು ಹಾರೈಸಿದ್ದು ನಿಜಕ್ಕೂ ಅತ್ಯಂತ ಸ್ವಾಗತಾರ್ಹ. ಸ್ನೇಹ, ಸೌಹಾರ್ದತೆ ಬೆಳೆಸುವ ಪ್ರಯತ್ನಗಳು.

ಅದೇ ಹೊತ್ತಿನಲ್ಲಿ ಪ್ರಧಾನಿಗಳು, ಸೋನಿಯಾ, ರಾಹುಲ್, ಹಲವು ಚಿತ್ರನಟರು, ಗಣ್ಯರು ಇದ್ದದ್ದು ಪಂದ್ಯಾಟಕ್ಕೆ ಹೆಚ್ಚಿನ ಗಮನ ಸೆಳೆಯಿತು. ಇಂತಹ ವಿಪರೀತ ಅಬ್ಬರವು ಹಗರಣಗಳನ್ನು ಮರೆಸಲು ಕೊಂಚ ಕಾಲ ಕಾರಣವಾಯಿತು. ಹಲವು ಹಗರಣಗಳ, ಭಿನ್ನಮತದಿಂದ ತತ್ತರಿಸಿ ಜನಪ್ರಿಯತೆ ನೆಲ ಕಚ್ಚುತ್ತಿರುವ ಯಡಿಯೂರಪ್ಪನವರು ಇತರರೊಂದಿಗೆ ಸ್ಪರ್ಧೆಗಿಳಿದು ಪ್ರತಿ ಆಟಗಾರನಿಗೂ ಒಂದು ಬಿಡಿಎ ಸೈಟ್ ಕೊಡುವುದಾಗಿ ಹೇಳಿ ಪ್ರಚಾರ ಗಿಟ್ಟಿಸಿಯೂ ಆಯಿತು. ನಿರ್ವಸತಿದಾರರಿಗೆ ನಿವೇಶನ ನೀಡಲು ಯೋಚಿಸದ ಅವರು ನೂರಾರು ಕೋಟಿಗಳಲ್ಲಿ ಮಿಂದು ತೇಲುವವರಿಗೆ 60 ಕೋಟಿ ರೂ.ಗಳ ಕೊಡುಗೆ ನೀಡುವುದು ವಿಚಿತ್ರವೇ. ಸೈಟ್ ನೀಡಿಕೆಗೆ ಕಾನೂನಿನಲ್ಲಿ ಅವಕಾಶ ಇಲ್ಲದಿರುವಾಗಲೂ ಈ ಪ್ರಸಂಗವನ್ನು ಬಳಸಿಕೊಳ್ಳಲು ಬಿಜೆಪಿ ಯತ್ನಿಸಿತು. ದೇಶಪ್ರೇಮ ತೋರಿಸುವ ಸ್ಪರ್ಧೆಯಲ್ಲಿ ಕಾಂಗ್ರೆಸ್ ಸಹ ಹಿಂದೆ ಬೀಳಲಿಲ್ಲ. ಕೆಲ ಶಾಸಕರಂತೂ ಉರುಳುಸೇವೆಯನ್ನು ಸಲ್ಲಿಸಿ ನಾಟಕಕ್ಕೆ ವಿಚಿತ್ರ ಅಂತ್ಯ ಹಾಡಿದರು. ಇನ್ನು ಯಜ್ಞ, ಯಾಗ, ಪೂಜೆಗಳಿಂದ ಪೂಜಾರಿಗಳ ಖಜಾನೆ ತುಂಬಿದ್ದು ಬೇರೆ ಲೆಕ್ಕ.

### ದ್ವೇಷ ಹೆಚ್ಚಿಸುವುದು

ಬಹಳ ಮುಖ್ಯವಾಗಿ ಭಾರತ, ಪಾಕ್‌ನ ನಡುವಿನ ಆಟವನ್ನು ಎರಡು ದೇಶಗಳ ನಡುವಿನ ಯುದ್ಧವೆಂದೂ ವ್ಯಾಖ್ಯಾನಿಸಲಾಯಿತು. ಪ್ರಜಾವಾಣಿಯಂತಹ ಪತ್ರಿಕೆಯೂ ಇದು ಕಾರ್ಗಿಲ್ ಯುದ್ಧವೆಂದಿತು. ಪತ್ರಿಕೆಗಳ ಭಾಷೆಯೂ ಸಹ ಸ್ನೇಹ ಬೆಸೆಯುವ ಬದಲು ವೈರತ್ವವನ್ನೇ ಹೆಚ್ಚಿಸುವಂತಿತ್ತು. 'ಸೇಡು ತೀರಿಸಿಕೊಂಡ ಭಾರತ' ಇತ್ಯಾದಿ ವ್ಯಾಖ್ಯಾನಗಳು ಏನನ್ನು ಹೇಳುತ್ತವೆ? ಇನ್ನೊಂದೆಡೆ ಇದು ಧರ್ಮಯುದ್ದೇವೆಂದು 'ಚೆಡ್ಡಿ ಪಡೆ' ವಿಪರೀತ ಪ್ರಚಾರಿಸಿದರು. ಪಾಕ್‌ನಲ್ಲಿ ಇದು 'ಜೆಹಾದಿ' ಎಂದಿದ್ದಾರೆ ಎಂದೂ ಗಾಳಿ ಹಾಕಿದರು. ಎರಡು ದೇಶಗಳ ನಡುವಿನ ಬಾಂಧವ್ಯ ಹಾಳುಗೆಡಹಿ ದ್ವೇಷ ಹೆಚ್ಚಿಸುವುದೇ ದೇಶಪ್ರೇಮವೆಂದು ಮೆರೆಸಿದದು ಒಂದು ಕೆಟ್ಟ ಪ್ರಯತ್ನವಾಗಿದೆ. ಭಾರತ ಅಮೇರಿಕಾದೆದುರು ಶರಣಾಗುತ್ತಿದೆ, ಸೋಲುತ್ತಿದೆ. ಅಣು ಒಪ್ಪಂದವು, ಬೀಜ ಮಸೂದೆ ರಕ್ಷನೆ ಇತ್ಯಾದಿಗಳಲ್ಲಿ ಅದು ಒತ್ತಡಕ್ಕೆ ಮಣಿದು ಸೋಲುತ್ತಿದೆ. ಜನತೆ ಸಮಸ್ಯೆಗಳಿಂದ ಕಂಗಾಲಾಗಿದ್ದಾರೆ. ಆಳುವವರ ಅಕ್ರಮಣಗಳ ಎದುರು ಸೆಣಸಲಾಗದೇ ಸೋಲುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಭಾರತ ಗೆದ್ದಿತು, ನಾವು ಎಂದು ಬೀಗುವಂತಾದರೆ ಅದು ಒಳಕುದಿತ ಹೊರಗೆ ಹೋಗಲು ಒಂದು ತಾತ್ಕಾಲಿಕ ಅವಕಾಶವನ್ನಾಗಿ ಬಳಸಲಾಗಿದೆ ಎಂಬುದು ಅಷ್ಟೇ ಗಮನಾರ್ಹ.

ಜನರನ್ನು ಬೆಸೆಯಬೇಕಾದ ಕ್ರೀಡೆಯೊಂದು ಘಟನೆಗೆ ಹಣ ಗಳಿಕೆಯ ಲಾಭಕ್ಕೆ, ಸರಕಾಗಿಸಿದ ಕೃತ್ಯಕ್ಕೆ ಒಳಗಾಗಿರುವುದು ಆಘಾತಕಾರಿಯಾಗಿದೆ. ಕ್ರೀಡೆ, ಸಂಸ್ಕೃತಿ ಎಲ್ಲವೂ ಮಾರಾಟದ ಸರಕುಗಳು. ಜನಪ್ರಿಯ ಕ್ರೀಡೆ, ಸಂಸ್ಕೃತಿಯನ್ನು ಅಪಹರಿಸುವ ಕಾರ್ಪೊರೇಟ್ ಕಂಪನಿಗಳು ಎಲ್ಲವನ್ನೂ ಸರಕನ್ನಾಗಿಸಿ ಮಾರಾಟಕ್ಕೆ ಇಡುತ್ತವೆ. ಇದೇ ಅಲ್ಲವೇ ಜಾಗತೀಕರಣದ ಮಂತ್ರಶಕ್ತಿ.

# ಈ ಭ್ರಷ್ಟಾಚಾರದ ಆಶ್ರಯದಾತರನ್ನು ಸೋಲಿಸಬೇಕು.

**ಭ್ರಷ್ಟಾಚಾರವನ್ನು ಸಾರ್ವಜನಿಕ ಸಂಪನ್ಮೂಲಗಳ ಲೂಟಿ ಹೊಡೆದು ಬಹುಪಾಲು ಜನಗಳಿಗೆ ಉತ್ತಮ ಬದುಕನ್ನು ವಂಚಿಸುವಂತದ್ದು ಎಂದಷ್ಟೇ ಕಾಣುತ್ತಿಲ್ಲ. ಜತೆಗೆ ಈ ಹೊಲಸು ಗಳಿಕೆಯ ಸಂಪತ್ತನ್ನು ಜನಗಳನ್ನೇ ಭ್ರಷ್ಟರಾಗಿಸಲು, ಹಣಬಲದ ಪ್ರದರ್ಶನದಿಂದ ಅವರ ಮತಗಳನ್ನು ಖರೀದಿಸಲು ಬಳಸಲಾಗುತ್ತಿದೆ ಎಂಬ ಜಾಗೃತಿಯೂ ಕಾಣಬರುತ್ತಿದೆ. ಈ ಪಿಡುಗನ್ನು ನಮ್ಮ ವ್ಯವಸ್ಥೆಯಿಂದ ತೊಲಗಿಸಲು ಒಂದು ಸಾಂಸ್ಥಿಕ ಚೌಕಟ್ಟು, ಅಂದರೆ ಸಶಕ್ತ ಲೋಕಪಾಲ ಶಾಸನ ಬೇಕಾಗಿದೆ. ಆದರೆ ಇದು ಹೇಗಿರಬೇಕು ಎಂಬ ಬಗ್ಗೆ ಚರ್ಚೆಗಳು ಇದುವರೆಗೆ ಬಯಲಾದ ಎಲ್ಲ ಹಗರಣಗಳಲ್ಲಿ ಅಪರಾಧಿಗಳನ್ನು ಗುರುತಿಸಿ, ಶಿಕ್ಷಿಸುವ ತುರ್ತಿನಿಂದ ನಮ್ಮನ್ನು ದಾರಿ ತಪ್ಪಿಸಬಾರದು.**

ಈ ಸಂಚಿಕೆ ಓದುಗರನ್ನು ತಲುಪುವ ವೇಳೆಗೆ ರಾಜ್ಯ ವಿಧಾನಸಭೆಗಳಿಗೆ ಬಹುಹಂತಗಳ ಚುನಾವಣೆಗಳ ಪ್ರಕ್ರಿಯೆ ಆರಂಭವಾಗಿರುತ್ತದೆ. ಅಸ್ಸಾಂನಲ್ಲಿ ಮತದಾನ ಮುಗಿದಿರುತ್ತದೆ ಹಾಗೂ ತಮಿಳುನಾಡು, ಪುದುಚೇರಿ, ಕೇರಳಗಳಲ್ಲಿ ಪ್ರಚಾರಕಾರ್ಯ ಮುಗಿದಿರುತ್ತದೆ.

ಬಹುವಾಗಿ ನಿರೀಕ್ಷಿಸಿದಂತೆ, ಆಯಾಯ ರಾಜ್ಯಗಳಿಗೇ ವಿಶಿಷ್ಟವಾದ ಸ್ಥಳಿಯ ಪ್ರಶ್ನೆಗಳೊಂದಿಗೆ ಭ್ರಷ್ಟಾಚಾರ ಮತ್ತು ಬೆಲೆಯೇರಿಕೆಯ ಪ್ರಶ್ನೆಗಳು ಚುನಾವಣಾ ಪ್ರಚಾರದಲ್ಲಿ ಅಗ್ರಸ್ಥಾನ ಪಡೆದಿವೆ. ತಮಿಳುನಾಡಿನಲ್ಲಂತೂ ಇದು ಮತ್ತಷ್ಟು ನಿಜ. ಇಲ್ಲಿ ಡಿಎಂಕೆ ಮೈತ್ರಿಕೂಟ ತನ್ನ ಸರಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ಇದರಲ್ಲಿ ಕಾಂಗ್ರೆಸಿನ ಸಮರ್ಥ ಮತ್ತು ಸಂಪೂರ್ಣ ಬೆಂಬಲ ಅದಕ್ಕಿದೆ. ಕಳೆದ ಚುನಾವಣೆಗಳಲ್ಲಿ ಪ್ರತಿ ಕುಟುಂಬಕ್ಕೆ ಬಣ್ಣದ ಟಿವಿ ಇತ್ಯಾದಿಗಳನ್ನು ಪುಕ್ಕಟೆಯಾಗಿ ಹಂಚಿದ್ದರಿಂದ(ಇಂತಹ ಭರವಸೆಗಳಿಂದ ಪ್ರಯೋಜನ ಸಿಕ್ಕಿದ್ದು 50ಶೇ. ಕುಟುಂಬಗಳಿಗೆ ಮಾತ್ರ) 2ಜಿ ತರಂಗಾಂತರ ಹಗರಣ ಪ್ರತಿ ಮನೆಯಲ್ಲಿ ಚರ್ಚೆಯ ವಿಷಯವಾಗಿ ಬಿಟ್ಟಿದೆ. ಈ




ಉಚಿತ.... ಉಚಿತ......ಉಚಿತ

ಮಹಾ ಹಗರಣ, ಜತೆಗೆ ತಮಿಳುನಾಡಿನ ಹಲವು ಸ್ಥಳೀಯ ಹಗರಣಗಳು ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರವನ್ನು ಪ್ರಮುಖ ವಿಷಯವಾಗಿ ಮಾಡಿವೆ.

**ನಲ್ವತ್ತು ಕಳ್ಳರ ಕುಣಿದಾಟ**

**ಅಲಿಬಾಬಾ ಮಾತ್ರ ಇಲ್ಲ**

ಆದರೆ, ಈ ಚುನಾವಣೆಗಳಲ್ಲಿ ಭ್ರಷ್ಟಾಚಾರ ಒಂದು ಪ್ರಶ್ನೆಯಾಗಿ ತಮಿಳುನಾಡಿಗಷ್ಟೇ ಸೀಮಿತವಾಗಿಲ್ಲ. ಇತ್ತೀಚಿನ ತಿಂಗಳುಗಳಲ್ಲಿ ಭುಗಿಲೆದ್ದ ಕಾಮನ್ವೆಲ್ತ್ ಕ್ರೀಡಾಕೂಟ, ಆದರ್ಶ ಹೌಸಿಂಗ್ ಸೊಸೈಟಿ, ಅಂತರಿಕ್ಷ-ಇಸ್ರೊ, ಓಟಿಗಾಗಿ ನೋಟು, ಅಕ್ರಮ ಗಣಿಗಾರಿಕೆ, ಐಪಿಎಲ್ ಹಣ ಇತ್ಯಾದಿ, ಇತ್ಯಾದಿಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಯನ್ನು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಒಂದು ಅತಿ ಕೆಟ್ಟ ಕೃಪಾ-ಪೋಷಕನಾಗಿಸಿದೆ. ಇದು 'ಅಲಿ ಬಾಬಾ ಮತ್ತು ನಲ್ವತ್ತು ಕಳ್ಳರ' ಆ ಕಾಲಾತೀತ ಕಥೆಯನ್ನು ನೆನಪಿಗೆ ತರುತ್ತದೆ. ಆದರೆ ಈಗಿನ ಸನ್ನಿವೇಶದಲ್ಲಿ ಒಂದು ನಿರ್ಣಾಯಕ ವ್ಯತ್ಯಾಸವಿದೆ. ಇಲ್ಲಿ ಅಲಿಬಾಬಾ ಇಲ್ಲ, ಆದ್ದರಿಂದ ನಲ್ವತ್ತು ಕಳ್ಳರು ಹುಚ್ಚೆದ್ದು ಕುಣಿಯುತ್ತಿದ್ದಾರೆ.

ಇದು ಸಹಜವಾಗಿಯೇ ಎಂತಹ ಸನ್ನಿವೇಶವನ್ನು ನಿರ್ಮಿಸಿದೆಯೆಂದರೆ, ಭ್ರಷ್ಟಾಚಾರವನ್ನು ಸಾರ್ವಜನಿಕ ಸಂಪನ್ಮೂಲಗಳ ಲೂಟಿ ಹೊಡೆದು ಬಹುಪಾಲು ಜನಗಳಿಗೆ ಉತ್ತಮ ಬದುಕನ್ನು ವಂಚಿಸುವಂತದ್ದು ಎಂದಷ್ಟೇ ಕಾಣುತ್ತಿಲ್ಲ. ಜತೆಗೆ ಈ ರೀತಿ ಹೊಲಸು ರೀತಿಯಲ್ಲಿ ಗಳಿಸಿದ ಸಂಪತ್ತನ್ನು ಜನಗಳನ್ನೇ ಭ್ರಷ್ಟರಾಗಿಸಲು, ಹಣದ ಶಕ್ತಿಯನ್ನು ಪ್ರದರ್ಶಿಸಿ ಅವರ ಮತಗಳನ್ನು ಖರೀದಿಸಲು ಬಳಸಲಾಗುತ್ತಿದೆ ಎಂಬ ಜಾಗೃತಿಯೂ ಕಾಣಬರುತ್ತಿದೆ. ಈ ಪ್ರಕ್ರಿಯೆ ತಮಿಳುನಾಡಿನಲ್ಲಿ ಅತ್ಯಂತ ನಗ್ನ ಸ್ವರೂಪದಲ್ಲಿ ಕಾಣುತ್ತಿದೆ.

**ಕೇಡಿನ ಪರಿಯಿದು**

ಒಬ್ಬ ಡಿಎಂಕೆ ಮುಖಂಡನಾದ ಮಾಜಿ ಕೇಂದ್ರ ದೂರಸಂಪರ್ಕ ಮಂತ್ರಿ ಸದ್ಯ 2ಜಿ ತರಂಗಾಂತರ ಹಗರಣದಲ್ಲಿ ಜೈಲಿನಲ್ಲಿದ್ದಾರೆ. ಇನ್ನೊಬ್ಬ ಡಿಎಂಕೆ ಮಂತ್ರಿ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಮಂತ್ರಿ ನಿರೀಕ್ಷಣಾ ಜಾಮೀನು ಕೇಳಿದ್ದಾರೆ. ಇದಂತೂ ಸರಿಸಾಟಿಯಿಲ್ಲದಂತಹ ಅದ್ವಿತೀಯ ಪ್ರಕರಣ. ಚುನಾವಣಾ ಗೆಲುವಿಗಾಗಿ ಹಣಶಕ್ತಿ ಬಳಸುವುದರಲ್ಲಿ ನಿಸ್ಸೀಮನೆನಿಸಿರುವ ಈ ಮಂತ್ರಿಗೆ ತನ್ನನ್ನು ಹಿಡಿದು ಬಂಧಿಸಬಹುದು ಎಂಬ ಭೀತಿ. ಚುನಾವಣಾ ಆಯೋಗದ ಸೂಚನೆಗಳ ಮೇರೆಗೆ ಎಲ್ಲಾ ವಾಹನಗಳನ್ನು ತಪಾಸಣೆಗೊಳಪಡಿಸಿ ಒಂದು ಕಟ್ಟುನಿಟ್ಟಾದ ಎಚ್ಚರ ವಹಿಸಲಾಗಿದೆ. ಈಗಾಗಲೇ ಕೋಟ್ಯಂತರ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ. ನಿಜಸಂಗತಿಯೆಂದರೆ, ಚುನಾವಣಾ ಆಯೋಗ ಪೋಲೀಸ್ ವಾಹನಗಳಲ್ಲಿ ಹಣ ಸಾಗಿಸುವುದನ್ನು ನಿಲ್ಲಿಸಲು ಮಧ್ಯಪ್ರವೇಶಿಸುವಂತೆ ತಮಿಳುನಾಡು ಹೈಕೋರ್ಟಿನ ಬಳಿ ಹೋಗಬೇಕಾಯಿತು. ಇತ್ತೀಚಿಗೆ ಒಂದು ಬಸ್ಸಿನ ಕೃತಕ ಮಾಡಿನಲ್ಲಿ ಕೋಟಿಗಟ್ಟಲೆ ರೂಪಾಯಿ ನೋಟುಗಳನ್ನು ಸಾಗಿಸುವಾಗ ಸಿಕ್ಕಿ ಹಾಕಿಕೊಂಡಿದ್ದಾರೆ. ಹೀಗಿದೆ ಡಿಎಂಕೆಯ ಹತಾಶೆ-ವಿಜಯವನ್ನು ಖರೀದಿಸಲು ಅದು ತನ್ನೆಲ್ಲಾ ಸೃಜನಶೀಲತೆಯನ್ನು ಒರೆಗೆ ಹಚ್ಚಿದೆ!

ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ಭ್ರಷ್ಟಾಚಾರ ಉಂಟುಮಾಡಿರುವ ಆನುಷಂಗಿಕ ಕೇಡಿನ ಪರಿ ಇದು. ಜನಗಳನ್ನೇ ಭ್ರಷ್ಟರಾಗಿಸಲು ಯತ್ನಿಸಿ ಅದು ಜನಗಳ ಪ್ರಜಾಸತ್ತಾತ್ಮಕ ಆಯ್ಕೆಯನ್ನು ವಿರೂಪಗೊಳಿಸುತ್ತದೆ. ಡಿಎಂಕೆ ಮಾತ್ರವಲ್ಲ ಕಾಂಗ್ರೆಸ್ ಕೂಡ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಪ್ರಮುಖ ಆಶ್ರಯದಾತರು ಎಂದು ಕಾಣಲಾಗುತ್ತಿದೆ, ಈ ಚುನಾವಣೆಗಳಲ್ಲಿ ಅದನ್ನೂ ಕಟಕಟೆಯಲ್ಲಿ ನಿಲ್ಲಿಸಬೇಕಾಗಿದೆ.

**ನೈತಿಕ ಪ್ರಶ್ನೆಯಷ್ಟೇ ಅಲ್ಲ**

ಇಲ್ಲಿ ಇನ್ನೂ ದೊಡ್ಡದಾದ ಒಂದು ಪ್ರಶ್ನೆಯಿದೆ. ಇಂತಹ ದೊಡ್ಡ ಪ್ರಮಾಣದ ಭ್ರಷ್ಟಾಚಾರವನ್ನು ನಿಲ್ಲಿಸುವುದು ಹೇಗೆ? ನಿಲ್ಲಿಸುವುದು ಕೇವಲ ಒಂದು ನೈತಿಕ ಪ್ರಶ್ನೆಯಲ್ಲ. ನಿಜ, ಇದು ಘೋರ ಅನೈತಿಕತೆ. ಆದರೆ ಇಂತಹ ಅಪಮಾರ್ಗಗಳಿಂದ ಗಳಿಸಿದ ಸಂಪತ್ತನ್ನು ಮತ್ತು ಅಕ್ರಮ ಕಪ್ಪು ಹಣವನ್ನು ವಿದೇಶಗಳಲ್ಲಿ ತೆರಿಗೆಧಾಮಗಳಲ್ಲಿ ದಾಸ್ತಾನು ಮಾಡಿದ್ದು, ಅದನ್ನು ಹಿಂದಕ್ಕೆ ಪಡೆದು ನಮ್ಮ ಜನಗಳಿಗೆ ಉತ್ತಮ ಗುಣಮಟ್ಟದ ಬದುಕನ್ನು ಒದಗಿಸಲು ಖರ್ಚು ಮಾಡಬೇಕು. ಈ ಹಿಂದೆ ಇದೇ ಅಂಕಣದಲ್ಲಿ ನಾವು ಹೇಳಿರುವಂತೆ, 2ಜಿ ತರಂಗಾಂತರ ಹಗರಣದಲ್ಲಿ ಲೂಟಿ ಮಾಡಿದ ಹಣ ಭಾರತ ಎಲ್ಲ (ಎಪಿಎಲ್ ಮತ್ತು ಬಿಪಿಎಲ್)ಕುಟುಂಬಗಳಿಗೆ ಎರಡು ವರ್ಷಗಳ ಕಾಲ ಆಹಾರ ಭದ್ರತೆ ಒದಗಿಸಲು ಸಾಕಾಗುವಷ್ಟಿದೆ. ಅಥವ ಈ ಹಣದಿಂದ ಸಂಸತ್ತು ಅಂಗೀಕರಿಸಿದ ಶಿಕ್ಷಣದ ಹಕ್ಕನ್ನು ಜಾರಿಗೆ ತರಲು ಸಾಧ್ಯವಿತ್ತು. ಏಕೆಂದರೆ ಈ ಕಾನೂನಿನ ಪೂರ್ಣ ಅನುಷ್ಠಾನಕ್ಕೆ ದೇಶಾದ್ಯಂತ ಹೊಸ ಶಾಲೆಗಳನ್ನು ಕಟ್ಟಲು, ಶಿಕ್ಷಕರ ನೇಮಕಕ್ಕೆ, ಮಧ್ಯಾಹ್ನದ ಊಟ ಒದಗಿಸಲಿಕ್ಕೆ ಪ್ರತಿ ವರ್ಷ ಬೇಕಾಗುವುದು 35000 ಕೋಟಿರೂ. ಅಂದರೆ ಅದಕ್ಕೆ ಮುಂದಿನ ಐದು ವರ್ಷ ಈ ಹಣ ಉಪಯೋಗಕ್ಕೆ ಬರುತ್ತಿತ್ತು. ಈ ಮಹಾ ಹಗರಣ ನಮ್ಮ ಜನತೆಗೆ ಇವನ್ನೆಲ್ಲ ವಂಚಿಸಿದೆ.

ನವ-ಉದಾರವಾದಿ ಆರ್ಥಿಕ ಸುಧಾರಣೆಗಳು ಭ್ರಷ್ಟಾಚಾರಕ್ಕೆ ಇದುವರೆಗೆ ತಿಳಿದಿರದ ಮಾರ್ಗಗಳನ್ನು 'ಚಮಚಾ ಬಂಡವಾಳಶಾಹಿ'ಗೆ ನೀರೆರೆಯುವ ಮೂಲಕ ತೆರೆದು ಕೊಟ್ಟಿವೆ. ಭಾರತದೇಶಕ್ಕೆ ತನ್ನ ಎಲ್ಲ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಒಂದು ಉತ್ತಮ ಬದುಕು ಒದಗಿಸಲು ಸಂಪನ್ಮೂಲಗಳ ಬರವೇನೂ ಇಲ್ಲ. ಆದರೆ ಭ್ರಷ್ಟಾಚಾರ ಇವನ್ನೆಲ್ಲ ಲೂಟಿ ಹೊಡೆದು ಯುಪಿಎ ಸರಕಾರ ಹೇಳುವ 'ಆಮ್ ಆದ್ಮಿ'ಗೆ ವಂಚನೆ ಮಾಡುತ್ತಿದೆ. ಈ ಪ್ರಕ್ರಿಯೆಯಲ್ಲಿ, ವಾಸ್ತವವಾಗಿ ಈ ಭ್ರಷ್ಟಾಚಾರ ಭಾರತ ತನ್ನ ಅಪಾರ ಸಾಧ್ಯತೆಗಳನ್ನು ಈಡೇರಿಸಿಕೊಳ್ಳದಂತೆ ವಂಚಿಸುತ್ತಿದೆ.

**ಸಾಂಸ್ಥಿಕ ಚೌಕಟ್ಟು**

ಈಗ, ಈ ಪಿಡುಗನ್ನು ನಮ್ಮ ವ್ಯವಸ್ಥೆಯಿಂದ ತೊಲಗಿಸುವುದು ಹೇಗೆ ಎಂಬ ನಿರ್ಣಾಯಕ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಮೇಲೆ ಹೇಳಿದಂತೆ ನಲ್ವತ್ತು ಕಳ್ಳರು ಹುಚ್ಚೆದ್ದು ಕುಣಿಯುತ್ತಿರುವಾಗ ಒಬ್ಬ ಅಲಿಬಾಬಾನ ಗೈರು ಹಾಜರಿಯನ್ನು ಈ ಪಿಡುಗನ್ನು ಎದುರಿಸಬಲ್ಲ ಒಂದು ಸಾಂಸ್ಥಿಕ ಚೌಕಟ್ಟಿನ ಮೂಲಕ ತುಂಬ ಬೇಕಾಗಿದೆ. ದೇಶದ ಸರಕಾರ ಮತ್ತು ರಾಜಕೀಯ ಮುಖಂಡರು ಜನತೆಗೆ ಜವಾಬುದಾರರಾಗಿರಬೇಕು. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಾಮಾಜಿಕ ಕಾರ್ಯಕರ್ತರ ಒಂದು ವಿಭಾಗ ಸದ್ಯ ನಡೆಸಿರುವ ಚಳುವಳಿ ಜನರಲ್ಲಿ ವ್ಯಾಪಕವಾಗಿರುವ ಈ ಭಾವನೆಯ ಪ್ರತಿಫಲನ. ಆದರೆ ಈ ಸಾಂಸ್ಥಿಕ ವ್ಯವಸ್ಥೆ(ಲೋಕಪಾಲ್) ಹೇಗಿರಬೇಕು ಎಂಬ ಬಗ್ಗೆ ಚರ್ಚೆಗಳು ಇದುವರೆಗೆ ಬಯಲಾದ ಎಲ್ಲ ಹಗರಣಗಳಲ್ಲಿ ಅಪರಾಧಿಗಳನ್ನು ಗುರುತಿಸಿ, ಶಿಕ್ಷಿಸುವ ತುರ್ತಿನಿಂದ ನಮ್ಮನ್ನು ದಾರಿ ತಪ್ಪಿಸಬಾರದು, ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಅಪಾರ ಹಣವನ್ನು ಹಿಂದಕ್ಕೆ ತರುವ ಅಗತ್ಯದಿಂದ ನಮ್ಮ ಗಮನವನ್ನು ಬೇರೆಡೆಗೆ ತಿರುಗಿಸುವಂತಾಗಬಾರದು. ಈ ಎರಡೂ ವಿಷಯಗಳಲ್ಲಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಬೇರೆ ಹೇಳಬೇಕಾಗಿಲ್ಲ.

ಸಂಸತ್ತಿನ ಮುಂದಿನ ಅಧಿವೇಶನ ಲೋಕಪಾಲ್ ಶಾಸನವನ್ನು ತರಲೇಬೇಕು. ಅದಕ್ಕೆ ಮೊದಲು ರಾಜಕೀಯ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ಬಹಳ ಮುಖ್ಯವಾಗಿ ಜನತೆಯ ನಡುವೆ ಅರ್ಥಪೂರ್ಣವಾದ ವ್ಯಾಪಕ ಚರ್ಚೆ ನಡೆಯಬೇಕು.

*(ಏಪ್ರಿಲ್ 10, 2011 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯ ಆಧರಿಸಿ)*

## ಲೋಕಪಾಲ್ : ಪರಿಣಾಮಕಾರಿ ಮಸೂದೆ ತನ್ನಿ

### ಸಿಪಿಐ(ಎಂ) ಪಿ.ಬಿ. ಆಗ್ರಹ

ಒಂದು ಪರಿಣಾಮಕಾರಿಯಾದ ಲೋಕಪಾಲ ಮಸೂದೆಯ ಅಗತ್ಯವು ಭ್ರಷ್ಟಾಚಾರ ಹಗರಣಗಳ ಪರಿಸ್ಥಿತಿಯಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹವು ಇದೇ ಅಂಶವನ್ನೇ ಎತ್ತಿ ತೋರಿಸುತ್ತಿದೆ.

ಸರ್ಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕ ಸೇವಕರ ಕುರಿತಾದ ಭ್ರಷ್ಟಾಚಾರದ ದೂರುಗಳನ್ನು ತನಿಖೆ ಮಾಡುವ ಒಂದು ಬಲಿಷ್ಟ ಲೋಕಪಾಲ್ ವ್ಯವಸ್ಥೆಗಾಗಿ ಸಿಪಿಐ(ಎಂ) ಹಿಂದಿನಿಂದಲೂ ಆಗ್ರಹಿಸುತ್ತಲೇ ಬಂದಿದೆ. ಆದರೆ ಅಂತಹ ಶಾಸನವನ್ನು ತರುವ ಕೆಲಸದಲ್ಲಿ ಯಾವುದೇ ಪ್ರಗತಿ ಇಲ್ಲಿಯವರೆಗೂ ಕಂಡಿಲ್ಲ. ಭಾರತದ ಸರ್ಕಾರವು ಸೂಚಿಸುತ್ತಿರುವ ಮಸೂದೆಯ ಕರಡು ಯಾವುದಕ್ಕೂ ಪ್ರಯೋಜನವಿಲ್ಲದಾಗಿದೆ ಮತ್ತು ಅಗತ್ಯ ಉದ್ದೇಶವನ್ನು ಈಡೇರಿಸಲಾರದ್ದಾಗಿದೆ.

ಸರ್ಕಾರವು ಯಾವುದೇ ವಿಳಂಬವಿಲ್ಲದೆ ಎಲ್ಲ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಕಾರ್ಯಕರ್ತರುಗಳು ಮತ್ತು ಸಂಬಂಧಿಸಿದ ನಾಗರೀಕ ಗುಂಪುಗಳೊಂದಿಗೆ ಸಂವಾದಕ್ಕೆ ವ್ಯವಸ್ಥೆ ಕೈಗೊಳ್ಳಬೇಕಿದೆ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಆಗ್ರಹಿಸಿದೆ.

# ಎಡರಂಗದ ಪ್ರಣಾಳಿಕೆ : ಅಭಿವೃದ್ಧಿಯ ಪರ್ಯಾಯ ಮಾದರಿ

**ಕೇರಳ ರಾಜ್ಯ ಚುನಾವಣೆಯ ಹೊಸ್ತಿಲಲ್ಲಿದೆ. ಇಂತಹ ಹೊತ್ತಲ್ಲಿ ಕಳೆದ ಐದು ವರ್ಷಗಳಲ್ಲಿ ಎಲ್‌ಡಿಎಫ್ ಸರ್ಕಾರದ ಕೆಲವು ಪ್ರಮುಖ ಸಾಧನೆಗಳೇನು? ಮುಂದಿನ ಅವಧಿಯಲ್ಲಿ ಸಾಧಿಸಲು ಉದ್ದೇಶಿಸಿರುವುದೇನು?**

**ಕೆ.ಕೆ.ರಾಘೇಶ್**

ಕೇರಳದಲ್ಲಿರುವ ಎಡರಂಗದ ಸರ್ಕಾರವು ಮಾರ್ಚ್ 15 ರಂದು ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಪ್ರಸ್ತುತ ರಾಜ್ಯ ಸರ್ಕಾರದ ಜಗ ಕಲ್ಯಾಣ ಯೋಜನೆಗಳ ಮುಂದುವರಿದ ಭಾಗವಾಗಿ ಇರುವ ಈ ಪ್ರಣಾಳಿಕೆಯಲ್ಲಿ ಈ ಹಿಂದೆ ಎಡರಂಗ ಸರ್ಕಾರ ನೀಡಿದ್ದ ಭರವಸೆಗಳು ಅದರ ನಿಟ್ಟಿನಲ್ಲಿ ಮಾಡಿದ ಸಾಧನೆಗಳು ಹಾಗೂ ಈ ನಿಟ್ಟಿನಲ್ಲಿ ಮುಂದೆ ಮಾಡಬೇಕಾದ ಕೆಲಸಗಳ ವಿವರಗಳಿವೆ.

**ಭರವಸೆಗಳ ಈಡೇರಿಸುವಿಕೆ :**

ಈ ಹಿಂದೆ ಎಡರಂಗ ಸರ್ಕಾರ ನೀಡಿದ ಭರವಸೆಗಳನ್ನು ಪೂರೈಸಿದುದನ್ನು ಯಾರೂ ತಿರಸ್ಕರಿಸಲು ಸಾಧ್ಯವಿಲ್ಲ. ಸರ್ಕಾರದಿಂದ ಜನಗಳಿಗೆ ನೀಡುವ ಪಿಂಚಣಿಯನ್ನು ತಿಂಗಳಿಗೆ 110 ರೂ.ಗಳಿಂದ 200ಕ್ಕೆ ಏರಿಸುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಲಾಗಿತ್ತು. ಆದರೆ ಅದಕ್ಕೆ ದುಪ್ಪಟ್ಟಾಗಿ 400 ರೂ.ಗಳಿಗೆ ಕಲ್ಯಾಣ ಪಿಂಚಣಿಯನ್ನು ಏರಿಸಲಾಯಿತು. ಈ ಹಿಂದೆ ಹೇಳಿದಂತೆ ರೇಷನ್ ಅಂಗಡಿಗಳಲ್ಲಿ 2 ರೂ.ಗೆ ಒಂದು ಕೆ.ಜಿ. ಅಕ್ಕಿ ವಿತರಿಸುವುದು ಮುಂತಾದ ಭರವಸೆಗಳು ಇಂದು ಜಾರಿಯಾಗಿದೆ. 2006 ಚುನಾವಣೆಯ ವೇಳೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕುರಿತು ಬೆಳಕು ಚೆಲ್ಲಿದ ಪ್ರಣಾಳಿಕೆ ಆ ಯೋಜನೆಯನ್ನು ನಗರ ಪ್ರದೇಶಕ್ಕೂ ಕೂಡ ವಿಸ್ತರಿಸಿದ್ದು ಕೇರಳ ರಾಜ್ಯದ ಒಂದು ಸಾಧನೆ. ಇ.ಎಂ.ಎಸ್. ಸಂಪೂರ್ಣ ವಸತಿ ಯೋಜನೆ ಹಾಗೂ 'ಎಂ.ಎನ್.ಲಕ್ಷ್ಮಣ್ ವೀಡು' ಯೋಜನೆ ಅಡಿಯಲ್ಲಿ ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಬಡವ ವರ್ಗದ ಜನರ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಾಗಿದೆ. ಹಾಗೂ ಪ್ರತಿ ಮನೆಯಲ್ಲೂ ಶೌಚಾಲಯ ಹಾಗೂ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ.

2006 ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ಭತ್ತಕ್ಕೆ ನೀಡುವ ಬೆಂಬಲ ಬೆಲೆಯನ್ನು ರೂ.7 ರಿಂದ 14 ಕ್ಕೆ ಏರಿಸಲಾಗಿದೆ. ಕೇಂದ್ರ ಸರ್ಕಾರ ಭತ್ತಕ್ಕೆ ನೀಡುವ ಬೆಂಬಲ ಬೆಲೆ ಕೇವಲ 10 ರೂ. ಎಂಬುದು ಇಲ್ಲಿ ಗಮನಾರ್ಹ. ಸಾಲಮನ್ನಾ ಮಾಡುವ ವಿಚಾರದಲ್ಲಿ ಬದ್ಧತೆ ಘೋಷಿಸಿದ್ದ 2006 ರ ಪ್ರಣಾಳಿಕೆಯು ಈ ನಿಟ್ಟಿನಲ್ಲಿ ಸಾಲ ಮನ್ನಾ ಮಾಡಲು ಆಯೋಗ ರಚಿಸಿ, ಕೇಂದ್ರಸರ್ಕಾರ ಅನುಮತಿ ಪಡೆಯುವ ನಿಟ್ಟಿನಲ್ಲಿದೆ. ಈ ಸಾಲ ಮನ್ನಾ ಯೋಜನೆಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮೀನುಗಾರರಿಗೆ ವಿಸ್ತರಿಸಲಾಗಿದೆ.

ಈ ಹಿಂದೆ ರಾಜ್ಯವನ್ನು 2001 ರಿಂದ 2006 ರವರೆಗೆ ಆಳಿದ ಕಾಂಗ್ರೆಸ್ ಮೈತ್ರಿ ಸರ್ಕಾರ ರಾಜ್ಯದ ಬಹುತೇಕ ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ನಷ್ಟದ ನೆವ ತೋರಿಸಿ ಖಾಸಗೀಕರಣಗೊಳಿಸಲು ತುದಿಗಾಲ ಮೇಲೆ ನಿಂತಿತ್ತು. ಆದರೆ ಸರ್ಕಾರದ ತಪ್ಪು ನೀತಿಗಳಿಂದಾಗಿ 2006 ರ ವೇಳೆಗೆ 96 ಕೋಟಿ ನಷ್ಟದಲ್ಲಿದ್ದ ಉದ್ದಿಮೆಗಳನ್ನು, 300 ಕೋಟಿ ಆದಾಯ ತರುವಂತೆ ಮಾಡಲಾಗಿದೆ. ಇದು ಎಡರಂಗದ ಒಂದು ಮಹತ್ವದ ಸಾಧನೆಯಾಗಿದೆ. ಎಡರಂಗವು ಈ ಅವಧಿಯಲ್ಲಿ ಒಟ್ಟು 8 ಹೊಸ ಸಾರ್ವಜನಿಕ ಉದ್ದಿಮೆಯನ್ನು ಆರಂಭಿಸಿದೆ. ಇತ್ತೀಚಿನ ಆಯವ್ಯಯದಲ್ಲಿ ಐದು ಹೊಸ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲು ಯೋಜಿಸಿದೆ. ಎಡರಂಗದ ಸರ್ಕಾರ ರಾಜ್ಯದ ಹಿತವನ್ನು ಗಮನದಲ್ಲಿರಿಸಿ ಕೊಂಡು ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಖಾಸಗಿ ಬಂಡವಾಳವನ್ನು ಆಹ್ವಾನಿಸಿದೆ.



**ಆದಿವಾಸಿಗಳಿಗೆ ಭೂಮಿ**

ಆದಿವಾಸಿಗಳಿಗೆ ಭೂಮಿ ನೀಡಬೇಕಾದ ಪ್ರಶ್ನೆ ಯುಡಿಎಫ್ ಸರ್ಕಾರದ ಅವಧಿಯಲ್ಲಿ ಒಂದು ಪ್ರಮುಖವಾದ ಪ್ರಶ್ನೆಯಾಗಿತ್ತು. ಕೇರಳದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರ ಆದಿವಾಸಿಗಳಿಗೆ ಜಮೀನು ನೀಡದೆ ಅವರ ಹೋರಾಟವನ್ನು ದಮನಿಸುತ್ತಾ ಆಡಳಿತ ನಡೆಸಿತ್ತು. ಆದರೆ ಎಡರಂಗದ ಸರ್ಕಾರ 3000 ಸಾವಿರ ಆದಿವಾಸಿಗಳಿಗೆ ಜಮೀನು ಮಂಜೂರು ಮಾಡಿದೆ ಹಾಗೂ ಅರಣ್ಯ ಹಕ್ಕು ಕಾಯ್ದೆಯನ್ನು ದೇಶದಲ್ಲೇ ಮೊದಲ ಬಾರಿಗೆ ಜಾರಿಗೊಳಿಸಿದ ಕೀರ್ತಿ ಕೇರಳದ ಸರ್ಕಾರಕ್ಕೆ ಸಲ್ಲುತ್ತದೆ. ಉತ್ತಮ ರಸ್ತೆಗಳು ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕೆಲಸಗಳು ಮೆಚ್ಚುಗೆಗೆ ಪಾತ್ರವಾಗಿವೆ. 40 ಸಾವಿರ ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗೊಳಿಸುವ ಯೋಜನೆಗೆ ಅಂಗೀಕಾರ ನೀಡಿದೆ. ಆದರೆ ಎಡರಂಗ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ನೀಡಲಾದ ಭರವಸೆಯಂತೆ ಶಿಕ್ಷಣ, ಆರೋಗ್ಯಕ್ಕೆ ಬಜೆಟ್‌ನ್ನು ಹಲವು ಪಟ್ಟು ಏರಿಸಿದೆ.



ಪರಿಸರ ಸಂಬಂಧಿ ವಿಷಯಗಳನ್ನು ಹೆಚ್ಚು ಜಾಗ್ರತೆಯಿಂದ ಪರಿಗಣಿಸಿದ್ದ ಎಡರಂಗದ ಸರ್ಕಾರ 'ಹಸಿರು ಬಜೆಟ್' ಯೋಜನೆಯನ್ನು ರೂಪಿಸಿ 50,000 ಕ್ಕೂ ಹೆಚ್ಚು ಎಕರೆಗಳನ್ನು ರಕ್ಷಿತಾರಣ್ಯವಾಗಿ ಮಾರ್ಪಡಿಸಿತು. ಹಿಂದಿನ ಕಾಂಗ್ರೆಸ್ ಸರ್ಕಾರ ಸರ್ಕಾರಿ ಹುದ್ದೆಗಳ ನೇಮಕಾತಿಗೆ ತಡೆ ವಿಧಿಸಿತ್ತು. ಹಾಗೂ 13,600 ಹುದ್ದೆಗಳನ್ನು ರದ್ದುಪಡಿಸಿತ್ತು. ಆದರೆ ಎಡರಂಗ ಸರ್ಕಾರ ನೇಮಕಾತಿಗೆ ವಿಧಿಸಿದ್ದ ತಡೆಯನ್ನು ತೆರವುಗೊಳಿಸಿ 1,75,000 ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿದೆ ಹಾಗೂ 31,000 ಹೊಸ ಹುದ್ದೆಗಳನ್ನು ಸೃಷ್ಟಿಸಿದೆ.

ದೇಶದ ಆರ್ಥಿಕ ಬೆಳವಣಿಗೆ ದರ ಶೇ.8.6 ದಷ್ಟಿದ್ದರೆ, ಕೇರಳದ ಆರ್ಥಿಕ ಅಭಿವೃದ್ಧಿ ದರ ಶೇ.9.6 ಇದೆ ಹಾಗೂ ವಿಶ್ವದಲ್ಲಿ ಆರ್ಥಿಕ ಮುಗ್ಗಟ್ಟು ದುಷ್ಪರಿಣಾಮವಿದ್ದರೂ ಕೇರಳ ಆರ್ಥಿಕವಾಗಿ ಈ ಬೆಳವಣಿಗೆ ಸಾಧಿಸಿದೆ.

**ಇನ್ನಷ್ಟು ಉನ್ನತ ಗುರಿ ನಿಗದಿ**

2006ರಲ್ಲಿ ಎಲ್‌ಡಿಎಫ್ ಸರ್ಕಾರ ನೀಡಿದ್ದ ಭರವಸೆಗಳನ್ನು ಹೇಗೆ ಈಡೇರಿಸಿದೆ ಎಂಬುದನ್ನು 2011ರ ಚುನಾವಣಾ ಪ್ರಣಾಳಿಕೆ ಹೇಳಿದೆ. ಯುಡಿಎಫ್ ಮತ್ತು ಎಲ್‌ಡಿಎಫ್ ಆಡಳಿತವನ್ನು ತುಲನೆ ಮಾಡುವ ಮೂಲಕ ಯುಡಿಎಫ್ ಜನರಿಗೆ ಮಾಡಿದ ವಂಚನೆ, ದ್ರೋಹವನ್ನು ಬಯಲುಗೊಳಿಸಿದೆ. ಈಗ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳು, ಕಲ್ಯಾಣ ಯೋಜನೆಗಳನ್ನು ಮತ್ತಷ್ಟು ಬಲಪಡಿಸಬೇಕಾದರೆ ಎಲ್‌ಡಿಎಫ್ ಸರ್ಕಾರ ಮುಂದುವರೆಯುವುದು ಅತಿ ಮುಖ್ಯವಾಗಿದೆ. ತುಳಿತಕ್ಕೊಳಗಾದ ಸಮಾಜವನ್ನು ಮೇಲೆತ್ತಲು ಪರ್ಯಾಯ ಅಭಿವೃದ್ಧಿ ಮತ್ತು ಯೋಗ ಕ್ಷೇಮ ಯೋಜನೆಗಳನ್ನು ಹೇಗೆ ರೂಪಿಸಬಹುದು ಎಂಬುದನ್ನು 2011ರ ಚುನಾವಣಾ ಪ್ರಣಾಳಿಕೆ ಒತ್ತಿ ಹೇಳಿದೆ. ಚುನಾವಣಾ ಪ್ರಣಾಳಿಕೆಯ ಸಾರಾಂಶವನ್ನಷ್ಟೆ ಇಲ್ಲಿ ಕಟ್ಟಿಕೊಡಲಾಗಿದೆ.

- ಪ್ರಣಾಳಿಕೆಯು ಕೇರಳವನ್ನು ದೇಶದ ಅತ್ಯುನ್ನತ ಅಭಿವೃದ್ಧಿ ರಾಜ್ಯವನ್ನಾಗಿ ರೂಪಿಸುವ ಭರವಸೆ ನೀಡುತ್ತದೆ. ಇದಕ್ಕಾಗಿ ಕೃಷಿಯಲ್ಲಿ ಅತಿ ಹೆಚ್ಚಿನ ಪ್ರಗತಿ ಸಾಧಿಸಬೇಕಾಗಿದ್ದು, ಕೃಷಿಗೆ ಹೆಚ್ಚಿನ ಒತ್ತು ನೀಡಲಿದೆ. ಅಲ್ಲದೇ ಐಟಿ, ಪ್ರವಾಸೋದ್ಯಮ, ಎಲೆಕ್ಟ್ರಾನಿಕ್ ಉದ್ದಿಮೆ, ಮೌಲ್ಯವರ್ಧಿತ ಕೃಷಿ ಆಧಾರಿತ ಉದ್ದಿಮೆಗಳ ಸ್ಥಾಪಿಸುವ ಕಣ್ನೋಟ ಹೊಂದಿದೆ.
- ಕಾಲ ಮಿತಿಯೊಳಗೆ 40 ಸಾವಿರ ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯ ಒದಗಿಸಲಾಗುವುದು. ಇವುಗಳಲ್ಲಿ ಅತಿವೇಗದ ರೈಲ್ವೆ ಮಾರ್ಗ, ನ್ಯಾಷನಲ್ ವಾಟರ್‌ವೇ ಟ್ರಾಫಿಕ್, ನೂತನ ಸಮುದ್ರ ಬಂದರುಗಳು, ವಿಮಾನ ನಿಲ್ದಾಣ ಹಾಗೂ ಗ್ಯಾಸ್ ಪೈಪ್‌ಲೈನ್ ನಿರ್ಮಾಣಗಳನ್ನು ಕಾಲಮಿತಿಯಲ್ಲಿ ಮಾಡಲಾಗುವುದು. ರಾಜ್ಯಕ್ಕೆ ಖಾಸಗಿ ಬಂಡವಾಳ ಆಹ್ವಾನಿಸುವ ಸಂದರ್ಭದಲ್ಲೇ ಆಹ್ವಾನ ನೀಡುವ ಸಂದರ್ಭದಲ್ಲೇ ಅಭಿವೃದ್ಧಿಯಲ್ಲಿ ಸಾರ್ವಜನಿಕ ಉದ್ದಿಮೆಗಳ ಪಾತ್ರವನ್ನು ಹೆಚ್ಚಿಸುವ ಬದ್ಧತೆ ತೋರಲಾಗುವುದು.
- ಆರ್ಥಿಕ ಅಭಿವೃದ್ಧಿ ಸಾಧಿಸುವ ಮೂಲಕ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವುದು. ಕೃಷಿ ಅಲ್ಲದ ಇನ್ನಿತರ ವಲಯಗಳಾದ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ 10 ಲಕ್ಷ ಉದ್ಯೋಗ, ಸೇವಾ ಕ್ಷೇತ್ರದಲ್ಲಿ 10 ಲಕ್ಷ, 50 ಸಾವಿರ ಸರ್ಕಾರಿ ಉದ್ಯೋಗವಲ್ಲದೇ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ (ಐಟಿ-ಬಿಟಿ) ಕ್ಷೇತ್ರ ಸೇರಿದಂತೆ ಸಂಘಟಿತ ವಲಯದಲ್ಲಿ 5 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು.
- ಕೇಂದ್ರ ಸರ್ಕಾರದ ನವ ಉದಾರೀಕರಣದಿಂದಾಗಿ ಅಸಮಾನತೆ, ಬಡತನ ಹೆಚ್ಚುತ್ತಿದೆ. ಪರ್ಯಾಯ ನೀತಿಗಳ ಮೂಲಕ ಅತ್ಯುನ್ನತ ಅಭಿವೃದ್ಧಿ ದರ ಸಾಧಿಸುವುದು ಹಾಗೂ ಎಲ್ಲರಿಗೂ ಸಾಮಾಜಿಕ ಭದ್ರತೆ ಒದಗಿಸುವುದು. ಎಲ್ಲರಿಗೂ ಮನೆ, ಪ್ರತಿಯೊಂದು ಮನೆಗೂ ಆಹಾರ, ನೀರು ವಿದ್ಯುತ್ ನೀಡುವ ಗ್ಯಾರಂಟಿ ನೀಡಲಾಗುವುದು. ಭೂಮಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಲಾಗುವುದು. ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿ ಸ್ವಾಧೀನಪಡಿಸಿಕೊಂಡಾಗ ತಕ್ಕ ಪರಿಹಾರ ಬೆಲೆ, ಸೂಕ್ತ ಪುನರ್ವಸತಿ ಒದಗಿಸಿಕೊಡಲಾಗುವುದು.
- ಕೇರಳವನ್ನು ಮಹಿಳಾ ಸ್ನೇಹಿ ರಾಜ್ಯವಾಗಿ

ಪುಟ 10 ಕ್ಕೆ

# ಎಡರಂಗದ ಮೇಲೆ ಹೆಚ್ಚಿದ ಜನರ ವಿಶ್ವಾಸ :

## ಸಂದರ್ಶನದಲ್ಲಿ ಬುದ್ಧದೇವ್

ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಗೆ ಬಂಗಾಳದ ಕುರಿತ ವಿಶೇಷ ಸಂಚಿಕೆಗಾಗಿ ಸಿಪಿಐಎಂನ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಬುದ್ದದೇಬ್ ಭಟ್ಟಾಚಾರ್ಯ ನೀಡಿದ ಸಂದರ್ಶನದ ಸಂಪೂರ್ಣ ವಿವರವನ್ನು ನಾವು ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ.

**ಪ್ರಶ್ನೆ: ಎಡರಂಗ ಸರ್ಕಾರದ ಏಳನೇ ಅವಧಿಯುದ್ದಕ್ಕೂ ರಾಜ್ಯದಲ್ಲಿ ಹಿಂಸಾಚಾರದ ಕೃತ್ಯಗಳು ನಡೆದಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ಪ್ರಮುಖ ಸಾಧನೆಯೇನು?**

**ಭಟ್ಟಾಚಾರ್ಯ:** ಹೌದು, ಎಡರಂಗದ ಏಳನೇ ಅವಧಿಯ ಆಡಳಿತ ಅಭೂತಪೂರ್ವ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಅದರಲ್ಲೂ ಪ್ರಮುಖವಾಗಿ, ಅಭಿವೃದ್ಧಿ ಕಾರ್ಯಗಳಿಗೆ ರಾಜಕೀಯ ಅಡ್ಡಿಗಳ ರೂಪದಲ್ಲಿ ಹಿಂಸಾಚಾರ ನಡೆಯಿತು. ಇದರ ಜೊತೆಯಲ್ಲೇ ರಾಜ್ಯದ ವಿವಿಧ ಕಡೆಗಳಲ್ಲಿ ಅರಾಜಕತೆಯುನ್ನು ಸೃಷ್ಟಿಸುವಂತಹ ಪ್ರಯತ್ನಗಳು ನಡೆಯಿತು. ಪ್ರತಿಪಕ್ಷಗಳು ಈ ಪ್ರಯತ್ನಕ್ಕೆ ತುಪ್ಪ ಸುರಿದವು. ಆದರೂ, ಎಡರಂಗ ಸರ್ಕಾರ ಹಲವು ಸಾಧನೆಗಳನ್ನು ಮಾಡಿದೆ. ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸರ್ಕಾರ ಕಳೆದ ಅವಧಿಯಲ್ಲಿ ನಡೆಸಿದ ಸಾಧನೆ ಗಮನಾರ್ಹವಾಗಿದೆ. ಇದು ನಮ್ಮ ಹಿಂದಿನ ಸಾಧನೆಯ ಮುಂದುವರಿಕೆಯಾಗಿದೆ.

ಪಶ್ಚಿಮ ಬಂಗಾಳ ಈಗ ಭತ್ತ ಮತ್ತು ಇತರ ಬೆಳೆಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಇಡೀ ದೇಶವೇ ಕೃಷಿ ಬಿಕ್ಕಟ್ಟನ್ನು ಎದುರಿಸುತ್ತಿದ್ದರೂ ಪಶ್ಚಿಮ ಬಂಗಾಳದಲ್ಲಿ ಈ ಬಿಕ್ಕಟ್ಟಿನ ಪ್ರಭಾವ ತಟ್ಟದಂತೆ ನೋಡಿಕೊಂಡಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಕಾಯ್ದುಕೊಳ್ಳಲು ಸರ್ಕಾರ ನಡೆಸಿದ ಪ್ರಯತ್ನಗಳು ಸಫಲವಾಗಿವೆ. ಈಗ ನಮ್ಮ ಗಮನ ಆಹಾರ ಸಂಸ್ಕರಣ ಕ್ಷೇತ್ರದ ವಿಸ್ತರಣೆಯತ್ತ ಹರಿಸಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲೂ ಆಹಾರ ಸಂಸ್ಕರಣ ಘಟಕಗಳನ್ನು ಆರಂಭಿಸಲು ಸಾಧ್ಯವಾಗಿದೆ.

ಹಲವು ಅಡೆತಡೆಗಳು, ನಮ್ಮ ವಿರುದ್ಧ ದೊಡ್ಡ ಮಟ್ಟದಲ್ಲಿ ಅಪಪ್ರಚಾರ ನಡೆಸಿದರೂ ಕೈಗಾರಿಕಾ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರ ಮುನ್ನಡೆ ಕಾಯ್ದುಕೊಂಡಿದೆ. 2009, 2010ರಲ್ಲಿ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಅತಿ ದೊಡ್ಡ ಪ್ರಮಾಣದಲ್ಲಿ ಆಗಿದ್ದು, ಇದು ಒಂದು ದಾಖಲೆಯಾಗಿದೆ. ಜಾಗತಿಕ ಹಿಂಜರಿತದ ಹೊರತಾಗಿಯೂ, ಉದ್ಯಮಿಗಳು ಹೊಸ ಕೈಗಾರಿಕೆ ಆರಂಭಿಸಲು ಉತ್ಸಾಹ ತೋರಿದರು. ಕೈಗಾರಿಕಾ ಉದ್ಯಮಿಗಳು ಪಶ್ಚಿಮ ಬಂಗಾಳದಲ್ಲಿ ಕೈಗಾರಿಕಾ ಸ್ಥಾಪನೆ ಕೋರಿ ಕೇಂದ್ರ ಸರ್ಕಾರದ ಮುಂದೆ ಸಾಕಷ್ಟು ಸಂಖ್ಯೆಯಲ್ಲಿ ತಿಳುವಳಿಕಾ ಪತ್ರವನ್ನು ನೀಡಿರುವುದೇ ಇದಕ್ಕೆ ಸಾಕ್ಷಿ.

2009ರ ಕ್ಯಾಲೆಂಡರ್ ವರ್ಷದಲ್ಲಿ ರಾಜ್ಯದಲ್ಲಿ 44,390 ಕೋಟಿ ರೂಪಾಯಿ ಹೂಡಿಕೆಯ 206 ತಿಳುವಳಿಕಾ ಪತ್ರಗಳು ಸಲ್ಲಿಕೆ ಆದವು. ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದಿಂದ 1362 ಇಂತಹ ಪ್ರಸ್ತಾಪಗಳು ಸಲ್ಲಿಕೆಯಾಗಿವೆ. ಅಂದರೆ, ಒಟ್ಟು 2 ಲಕ್ಷದ 37 ಸಾವಿರ ಕೋಟಿ ರೂಪಾಯಿ ಹೂಡಿಕೆ, ಇದು ದೇಶದ ಒಟ್ಟು ಹೂಡಿಕೆಯ ಶೇ. 5.47ರಷ್ಟು. 2010ರಲ್ಲಿ 8493.43 ಕೋಟಿ ರೂಪಾಯಿ ಹೂಡಿಕೆ ಆಗಿದೆ. ಈ ಎಲ್ಲದರ ಮಧ್ಯೆ, ಸಿಂಗೂರ್ ಮತ್ತು ನಂದಿಗ್ರಾಮಗಳಲ್ಲಿ ಹೂಡಿಕೆ ಸಾಕಷ್ಟು ನಿರೀಕ್ಷಿತವಾಗಿತ್ತು ಎಂಬುದನ್ನು ಈ ಅಂಕಿ ಅಂಶಗಳು ತೋರಿಸುತ್ತವೆ.



ಪಶ್ಚಿಮ ಬಂಗಾಳದ ಕೈಗಾರಿಕಾ ಅಭಿವೃದ್ಧಿಯಲ್ಲಿ ಅತಿ ಮುಖ್ಯವಾಗಿ ನಾವು ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಒಂದು ನೀತಿಯನ್ನು ನಿರೂಪಿಸಿದೆವು. ಕೈಗಾರಿಕಾ ಅಂಕಿ ಅಂಶಗಳ ಪ್ರಕಾರ ರಾಜ್ಯದ 27.5 ಲಕ್ಷ ಅಸಂಘಟಿತ ಹಾಗೂ ಸಣ್ಣ ಕೈಗಾರಿಕಾ ಘಟಕಗಳು 55 ಲಕ್ಷ ಮಂದಿಗೆ ಉದ್ಯೋಗ ನೀಡಿವೆ. ಇದು ದೇಶದಲ್ಲೇ ಅತಿ ಹೆಚ್ಚು.

2006-10ರ ಅವಧಿಯಲ್ಲಿ 45,495 ಸಣ್ಣ ಹಾಗೂ ಅತಿ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿವೆ. ಈ ಘಟಕಗಳಿಂದ 4.65 ಲಕ್ಷ ಮಂದಿಗೆ ಉದ್ಯೋಗ ದೊರಕಿದೆ. ಇದರ ಜೊತೆಗೆ, ಐಟಿ ಮತ್ತು ಇತರ ಪ್ರಮುಖ ಉದ್ಯಮಗಳು ರಾಜ್ಯದಲ್ಲಿ ತಮ್ಮ ಕೇಂದ್ರವನ್ನು ಆರಂಭಿಸಿದವು. ಇದು ಪಶ್ಚಿಮ ಬಂಗಾಳದ ದೊಡ್ಡ ಸಾಧನೆಯೂ ಆಗಿದೆ.

ಸಾಮಾಜಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ನಾವು ಶೇ 99.06ರ ಸಾಧನೆಯನ್ನು ಮಾಡಿದ್ದೇವೆ. ಸ್ವಸಹಾಯ ಸಂಘಗಳು, ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಮಹಿಳಾ ಸಂಘಗಳ ಸಂಖ್ಯೆ 14 ಲಕ್ಷವನ್ನು ದಾಟಿವೆ. ಅಸಂಘಟಿತ ವಲಯ ಹಾಗೂ ಅದರ ಕಾರ್ಮಿಕರ ಬೆಂಬಲಕ್ಕೆ ರಾಜ್ಯ ಸರ್ಕಾರ ದೃಢವಾಗಿ ನಿಂತಿದೆ. ಅದು, ಸಾರಿಗೆಯಿಂದ ಹಿಡಿದು ಬೀಡಿ ಉದ್ಯಮದ ವರೆಗೆ. ಈ ವಲಯದ ಕಾರ್ಮಿಕರಿಗೆ ಉದ್ಯೋಗದ ಭದ್ರತೆಯನ್ನು ರಾಜ್ಯ ಸರ್ಕಾರ ಕಲ್ಪಿಸಿದೆ. ಕಳೆದ ಕೆಲವು ವರ್ಷಗಳಿಂದ, ಎಲ್ಲ ಜನವಿಭಾಗದ ಅದರಲ್ಲೂ ಮುಖ್ಯವಾಗಿ ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಉನ್ನತಿಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಪ್ರಶ್ನೆ: ಆದರೂ, ಈ ಅವಧಿಯಲ್ಲಿ ಎಡಪಕ್ಷಗಳ ಜನಬೆಂಬಲದಲ್ಲೂ ಇಳಿಮುಖ ಕಂಡಿದೆ. ನಿಮಗೆ ಈ ಟ್ರೆಂಡ್ ಬದಲಾಗಬಹುದು ಎಂಬ ನಂಬಿಕೆ ಇದೆಯೇ?**

**ಭಟ್ಟಾಚಾರ್ಯ:** ಹೌದು, ನಿಜವಾಗಿಯೂ 2009ರ ಲೋಕಸಭಾ ಚುನಾವಣೆ ಮತ್ತು 2010ರ ಮುನಿಸಿಪಾಲಿಟಿ ಚುನಾವಣೆಗಳಲ್ಲಿ ಎಡರಂಗ ಹಿನ್ನಡೆ ಅನುಭವಿಸಿತ್ತು. ಈ ಸಂದರ್ಭಗಳಲ್ಲಿ ನಾವು ಆಳವಾದ ಮತ್ತು ಗಂಭೀರವಾದ ವಿಮರ್ಶೆ ನಡೆಸಿದೆವು. ನಾವು ಎಡವಿದ್ದೆಲ್ಲಿ, ಸಮಸ್ಯೆ ಆದದ್ದೆಲ್ಲಿ ಎಂಬುದನ್ನು ಹುಡುಕಿದೆವು. ರಾಜಕೀಯ ಚಟುವಟಿಕೆಯಲ್ಲಿ, ಸರ್ಕಾರದ ಕಾರ್ಯವೈಖರಿಯಲ್ಲಿ ಹಾಗೂ ನಮ್ಮ ಪಕ್ಷದ ಸಂಘಟನಾತ್ಮಕ ಸಮಸ್ಯೆಗಳನ್ನು ಅಧ್ಯಯನ ನಡೆಸಿ ನಮ್ಮ ತಪ್ಪುಗಳನ್ನು, ಕೊರತೆಗಳನ್ನು ಪತ್ತೆ ಹಚ್ಚಿದೆವು. ವಿವಿಧ ಕಡೆಗಳಲ್ಲಿ ಆಗಿರುವ ಈ ತಪ್ಪುಗಳನ್ನು ಸರಿಪಡಿಸುವ ಪ್ರಕ್ರಿಯೆಯನ್ನು ಆರಂಭಿಸಿದೆವು.

ನಾವು ಮತ್ತೆ ಜನರ ಮಧ್ಯೆ ಸಾಗಿದೆವು, ಅವರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡೆವು, ಸಂವಾದ ನಡೆಸಿದೆವು. ಸಾಮಾಜಿಕ ರಂಗದಲ್ಲಿ ಸರ್ಕಾರದ ಕಾರ್ಯಚಟುವಟಿಕೆಗೆ ಮತ್ತಷ್ಟು ವೇಗ ನೀಡಿದೆವು. ಪಕ್ಷದ ಕೆಲಸಕ್ಕೆ ಪುನಶ್ಚೇತನ ನೀಡಿದೆವು. ಈ ಎಲ್ಲದರ ಫಲವಾಗಿ ನಾವು ಮತ್ತೆ ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆ ಪಡೆಯುತ್ತಿದ್ದೇವೆ. ಕಳೆದ ಕೆಲವು ತಿಂಗಳಿನಿಂದ ನಮ್ಮ ರಾಜಕೀಯ ಚಟುವಟಿಕೆಗಳಿಗೆ ಉತ್ತಮ ಬೆಂಬಲ ಸಿಗುತ್ತಿದೆ. ನಮ್ಮ ಕಾರ್ಯಕ್ರಮಗಳಿಗೆ ಜನಸಾಗರವೇ ಹರಿದುಬರುತ್ತಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬೃಹತ್ ರ್‍ಯಾಲಿಗಳು ನಡೆದಿವೆ. ಹಲವು ಜಿಲ್ಲೆಗಳಲ್ಲಿ ಸ್ವತಃ ನಾನೇ ಭಾಗವಹಿಸಿದ್ದು, ಐತಿಹಾಸಿಕ ರ್‍ಯಾಲಿಗಳಿಗೆ ಸಾಕ್ಷಿಯಾಗಿದ್ದೇನೆ. ಪ್ರತಿಪಕ್ಷದ ನಿಜವಾದ (ಕ್ರೂರ)ಮುಖದ ಪರಿಚಯ ಜನರಿಗೆ ನಿಧಾನವಾಗಿ ಗೊತ್ತಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ಜನಬೆಂಬಲ ವಿಶಾಲವಾಗಿದ್ದು, ತುಂಬಾ ಆಳವಾಗಿ ಬೇರೂರಿದೆ.

> ನಾವು ಮತ್ತೆ ಜನರ ಮಧ್ಯೆ ಸಾಗಿದೆವು, ಅವರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡೆವು, ಸಂವಾದ ನಡೆಸಿದೆವು. ಸಾಮಾಜಿಕ ರಂಗದಲ್ಲಿ ಸರ್ಕಾರದ ಕಾರ್ಯಚಟುವಟಿಕೆಗೆ ಮತ್ತಷ್ಟು ವೇಗ ನೀಡಿದೆವು. ಪಕ್ಷದ ಕೆಲಸಕ್ಕೆ ಪುನಶ್ಚೇತನ ನೀಡಿದೆವು. ಈ ಎಲ್ಲದರ ಫಲವಾಗಿ ನಾವು ಮತ್ತೆ ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆ ಪಡೆಯುತ್ತಿದ್ದೇವೆ.

**ಪ್ರಶ್ನೆ: ರಾಜ್ಯದಲ್ಲಿ ವಿಶಾಲವಾದ ಎಡ ವಿರೋಧಿ ಮೈತ್ರಿಕೂಟ ಅಸ್ತಿತ್ವದಲ್ಲಿದೆ. ಅದರ ಜೊತೆಗೆ ಮಾಧ್ಯಮಗಳು, ವಿವಿಧ ಕೋಮುವಾದಿ ಮತ್ತು ಅವಕಾಶವಾದಿ ಗುಂಪುಗಳು, ಗುರುತಿಸಿಕೊಳ್ಳುವ ರಾಜಕೀಯದ ನೆಲೆಯಲ್ಲಿ ಬಂದ ಶಕ್ತಿಗಳು ಹೀಗೆ ಎಲ್ಲವೂ ಒಂದಾಗಿದೆ. ಈ ಎಲ್ಲ ಶಕ್ತಿಗಳಿಗೆ ಎಡಪಕ್ಷಗಳು ಸಾಮಾನ್ಯ ಶತ್ರುವಾಗಿದೆ. ಏಕೆ?**

**ಭಟ್ಟಾಚಾರ್ಯ:** ಎಡರಂಗ ಮತ್ತು ಅದರ ಸರ್ಕಾರದ ಆಡಳಿತದಲ್ಲಿ ಪಶ್ಚಿಮ ಬಂಗಾಳ ಪರ್ಯಾಯ ಹಾದಿಯಲ್ಲಿ ಸಾಗಿದೆ. ಶೋಷಿತ ಜನವಿಭಾಗದ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಜೊತೆಗೆ ಪ್ರಜಾಪ್ರಭುತ್ವದ ವ್ಯಾಪ್ತಿಯನ್ನು ವಿಸ್ತರಿಸಿದೆ. ರೈತರು, ಕಾರ್ಮಿಕರು ಮತ್ತು ಇತರ ಶೋಷಿತ ಜನವಿಭಾಗಗಳನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಿದ್ದು ಮಾತ್ರವಲ್ಲದೆ ಆತ್ಮಗೌರವದಿಂದ ಬಾಳುವಂತೆ ಮಾಡಿದೆ.

ಭಾರತದಲ್ಲಿ ಜಾತ್ಯತೀತ ತತ್ವದ ಒಂದು ಕೇಂದ್ರವಾಗಿ ಪಶ್ಚಿಮ ಬಂಗಾಳ ಗುರುತಿಸಿಕೊಂಡಿದೆ. ಈ ಶಕ್ತಿಗಳು ದೇಶದಲ್ಲಿ ಜಾರಿಯಾಗುತ್ತಿರುವ ಜನವಿರೋಧಿ ಹಾಗೂ ನವ ಉದಾರೀಕರಣದ ನೀತಿಗಳನ್ನು ಬಲವಾಗಿ ವಿರೋಧಿಸುತ್ತಾ ಬಂದಿದೆ. ಅಷ್ಟೇ ಅಲ್ಲದೆ, ಸಾಮ್ರಾಜ್ಯಶಾಹಿ ಶಕ್ತಿಗಳು ನಮ್ಮ ದೇಶದ ಆಂತರಿಕ ವಿಚಾರದಲ್ಲಿ ಮೂಗು ತೂರಿಸುವುದಕ್ಕೆ ಪ್ರಬಲವಾಗಿ ಪ್ರತಿರೋಧಿಸಿದೆ.

ದೇಶದ ಎಡಚಳವಳಿಗೆ ಪಶ್ಚಿಮ ಬಂಗಾಳ ಸರ್ಕಾರ ಭದ್ರ ಬುನಾದಿ ಹಾಕಿದೆ. ಕೇಂದ್ರ ಸರ್ಕಾರ ಜಾರಿಗೊಳಿಸುವ ಇಂಥ ಜನವಿರೋಧಿ ನೀತಿಗಳ ವಿರುದ್ಧ ಚಳವಳಿಯನ್ನು ಕಟ್ಟಿ ಬೆಳೆಸಲು ರಾಜ್ಯದ ಸಂಘಟನೆ ದೊಡ್ಡ ಕೊಡುಗೆಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಸರ್ಕಾರವನ್ನು ಪತನಗೊಳಿಸಲು ನಿರಂತರ ಪ್ರಯತ್ನಗಳು ನಡೆಯುತ್ತಲೇ ಇವೆ. ಅದರೆ, ಅದ್ಯಾವುದೂ ಯಶಸ್ವಿಯಾಗಿಲ್ಲ. ಇದರಿಂದ ಕಂಗೆಟ್ಟ ಈ ಶಕ್ತಿಗಳು ಒಂದಾಗಿ ಯಾವುದೇ ರೀತಿಯಲ್ಲಾದರೂ ಸರ್ಕಾರವನ್ನು ಉಳಿಸಲು ಪಣ ತೊಟ್ಟಿವೆ. ಎಡಪಕ್ಷಗಳನ್ನು ಸೋಲಿಸುವ ಏಕೈಕ ಉದ್ದೇಶದಿಂದ ಎಲ್ಲ ನೈತಿಕ ಹಾಗೂ ರಾಜಕೀಯ ಸಮರ್ಥನೆಗಳನ್ನು ಗಾಳಿಗೆ ತೂರಿವೆ.

ಈ ಮಧ್ಯೆ, ಇನ್ನೊಂದು ಬೆಳವಣಿಗೆಯಲ್ಲಿ, ಎಲ್ಲ ಮೌಲ್ಯಗಳನ್ನು ಕಳೆದುಕೊಂಡ ಎಡ ಉಗ್ರಗಾಮಿ ಸಂಘಟನೆಯಾದ ಮಾವೋವಾದಿ ನಕ್ಸಲೀಯರು ತೃಣಮೂಲ ಕಾಂಗ್ರೆಸ್‌ನಂಥ ಪಕ್ಷದೊಂದಿಗೆ ಕೈಜೋಡಿಸಿದ್ದಾರೆ. ಈ ಮೈತ್ರಿಕೂಟದಲ್ಲಿ ಕಿರಿಯ ಭಾಗಿದಾರನಾಗಿ (ಜೂನಿಯರ್ ಪಾರ್ಟನರ್) ಸೇರಿಕೊಂಡಿದ್ದಾರೆ. ಇವರ ಒಗ್ಗೂಡುವಿಕೆ ಎಡಪಕ್ಷಗಳ ರಾಜಕೀಯ ದಾರಿಯನ್ನು ಮತ್ತೊಮ್ಮೆ ದೃಢಪಡಿಸಿವೆ.

**ಪ್ರಶ್ನೆ: ತೃಣಮೂಲ ಕಾಂಗ್ರೆಸ್ ಕುರಿತು ನಿಮ್ಮ ಮೌಲ್ಯಮಾಪನವೇನು?**

ಪುಟ 10 ಕ್ಕೆ

ಪುಟ 10 ರಿಂದ

# ಎಡರಂಗದ ಮೇಲೆ ....

**ಭಟ್ಟಾಚಾರ್ಯ:** ಇದು ಅತ್ಯಂತ ಕೆಟ್ಟ ಬಲಪಂಥೀಯ ರಾಜಕೀಯ ಶಕ್ತಿ. ಎಡರಂಗ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಏಕೈಕ ಉದ್ದೇಶದಿಂದ ಈ ಪಕ್ಷ ರಚನೆಯಾಗಿದೆ. ಅದೇ ಹಿನ್ನೆಲೆಯಲ್ಲಿ ಕಾರ್ಯಚಟುವಟಿಕೆ ನಡೆಸಿಕೊಂಡು ಬಂದಿದೆ. ಕಮ್ಯುನಿಸ್ಟ್ ವಿರೋಧಿ ಧೋರಣೆಯೇ ಈ ಪಕ್ಷದ ಪ್ರಮುಖ ರಾಜಕೀಯ, ಸೈದ್ಧಾಂತಿಕ ವಿಷಯವಾಗಿದೆ. ಇದಕ್ಕೆ ಹೊರತಾದ ಇನ್ನೊಂದು ರಾಜಕೀಯ ಅಜೆಂಡಾ ಈ ಪಕ್ಷದಲ್ಲಿ ಇಲ್ಲ. ಅಷ್ಟೇ ಏಕೆ, ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ಈ ಪಕ್ಷದಲ್ಲಿ ಇಲ್ಲ. ಸಹಜವಾಗಿಯೇ ಈ ಪಕ್ಷದಲ್ಲಿ ಯಾವುದೇ ರಾಜಕೀಯ ನೈತಿಕತೆಯೂ ಇಲ್ಲ. ತೃಣಮೂಲ ಕಾಂಗ್ರೆಸ್‌ನ್ನು ನಾವು ಈ ಹಿಂದೆ ಬಿಜೆಪಿ ಕಂಪೆನಿಯಲ್ಲಿ ನೋಡಿದ್ದೆವು. ಅಲ್ಲಿ ಅವರು ಎನ್‌ಡಿಎ ಸರ್ಕಾರದ ಭಾಗವಾಗಿದ್ದರು. ಈಗ ಕಾಂಗ್ರೆಸ್ ನೇತೃತ್ವದ ಯುಪಿಎಯಲ್ಲಿ ಅಂಗಪಕ್ಷವಾಗಿದ್ದಾರೆ, ಸರ್ಕಾರದಲ್ಲಿ ಪಾಲುದಾರ ಪಕ್ಷವಾಗಿದೆ.

ಅವರು ಇತ್ತೀಚೆಗೆ ಕೆಲವು ಎಡಪರ ಘೋಷಣೆಗಳನ್ನು ಮಾಡಿದ್ದಾರೆ. ಇದು ಜನರನ್ನು ಮೋಸ ಮಾಡುವ ತಂತ್ರ. ಅವರ ಎಲ್ಲ ರಾಜಕೀಯ ನಡೆಗಳೂ ವಿನಾಶಕಾರಿಯಾಗಿವೆ. ಅವರ ಚಟುವಟಿಕೆಗಳು ಹಾಗೂ ಮಾವೋವಾದಿಗಳ ಜೊತೆಗಿನ ಮೈತ್ರಿಕೂಟ ರಾಜ್ಯದಲ್ಲಿ ಹಿಂಸಾಚಾರಕ್ಕೆ ಪ್ರಮುಖ ಕೇಂದ್ರ ಬಿಂದುವಾಗಿದೆ.

**ಪ್ರಶ್ನೆ: ಪಶ್ಚಿಮ ಬಂಗಾಳಕ್ಕೆ ಎಡಪಂಥೀಯ ಮಾರ್ಗವೇ ಏಕೈಕ ಹಾದಿ ಎಂದು ನೀವು ಸಾಕಷ್ಟು ಬಾರಿ ಹೇಳಿದ್ದೀರಿ. ಹಾಗೆ ಏಕೆ ಹೇಳಿದ್ದೀರಿ? ಈ ಹೇಳಿಕೆಯ ಹಿಂದಿನ ಮರ್ಮವೇನು?**

**ಭಟ್ಟಾಚಾರ್ಯ:** ಬಂಡವಾಳಶಾಹಿಯ ನಕಾರಾತ್ಮಕ ಪರಿಣಾಮಗಳೇನು ಎಂಬುದನ್ನು ಜಗತ್ತೇ ನೋಡಿದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ನೇತೃತ್ವದ ಜಾಗತೀಕರಣ ಅಮೆರಿಕದಲ್ಲಿ ಅತ್ಯಂತ ಹೇಯ ಪರಿಣಾಮಗಳನ್ನು ಉಂಟು ಮಾಡಿದೆ. ಯೂರೋಪ್‌ನಲ್ಲೂ ಪರಿಸ್ಥಿತಿ ಇದಕ್ಕೆ ಹೊರತಾಗಿಲ್ಲ. ಉಳ್ಳವರು ಮತ್ತು ಇಲ್ಲದವರ ಮಧ್ಯೆ ಈ ಪ್ರಕ್ರಿಯೆ ಅಭೂತಪೂರ್ವ ಕಂದರವನ್ನೇ ನಿರ್ಮಿಸಿದೆ. ಬಹುಸಂಖ್ಯಾತ ಜನರ ಬದುಕು ಮತ್ತು ಜೀವನ ಪ್ರಕ್ರಿಯೆಗೆ ಈ ನೀತಿಗಳು ಗಂಡಾಂತರಕಾರಿಯಾಗಿ ಪರಿಣಮಿಸಿದೆ.

ವಿಶ್ವದ ಬಹುತೇಕ ಕಡೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಲ್ಯಾಟೀನ್ ಅಮೆರಿಕದ ದೇಶಗಳಲ್ಲಿ ಜನರ ಪ್ರತಿಭಟನೆಗಳು ಪ್ರಬಲವಾಗಿ ರೂಪುಗೊಂಡಿವೆ. ಎಡಪರ ರಾಜಕೀಯದ ಬಗ್ಗೆ ವ್ಯಾಪಕ ಒಲವು ವ್ಯಕ್ತವಾಗಿವೆ. ಅರಬ್ ರಾಷ್ಟ್ರಗಳಲ್ಲೂ ಈ ನೀತಿಗಳ ಬಗ್ಗೆ ಆಕ್ರೋಶ-ಅಸಮಾಧಾನಗಳು ಮನೆ ಮಾಡಿವೆ.

ನಮ್ಮ ದೇಶದಲ್ಲಿ ನವ ಉದಾರೀಕರಣದ ನೀತಿಗಳು ಮಧ್ಯಮ, ಕೆಳ ಮಧ್ಯಮ ಹಾಗೂ ಬಡ ಕುಟುಂಬಗಳನ್ನು ವ್ಯಾಪಕವಾಗಿ ಬಾಧಿಸಿದೆ. ಈಗ ದೇಶದಲ್ಲಿ ಎರಡು ವಿಧದ ಭಾರತಗಳಿವೆ. ಒಂದು ಹೊಳೆಯುವ ಭಾರತ (ಶೈನಿಂಗ್ ಇಂಡಿಯಾ) ಇನ್ನೊಂದು ಸಂಕಟ ಪಡುವ ಭಾರತ (ಸಫರಿಂಗ್ ಇಂಡಿಯಾ). ಇಂಥ ಪರಿಸ್ಥಿತಿಯಲ್ಲಿ ಒಂದು ತೃಪ್ತಿಕರವಾದ ಹಾಗೂ ಪರ್ಯಾಯ ನೀತಿ ಎಂದರೆ ಅದು ಎಡಪಂಥ ಮಾತ್ರ. ಪಶ್ಚಿಮ ಬಂಗಾಳದಲ್ಲಿ, ನಾನು ಈ ಮೊದಲೇ ಹೇಳಿದಂತೆ ಎಡಪಂಥೀಯ ವಿಚಾರಧಾರೆಗಳು ಸಮಾಜದಲ್ಲಿ, ರಾಜಕೀಯದಲ್ಲಿ ಹಾಗೂ ಸಾಂಸ್ಕೃತಿಕವಾಗಿಯೂ ಆಳವಾಗಿ ಬೇರೂರಿದೆ.

**ಪ್ರಶ್ನೆ: ಮುಂದಿನ ಚುನಾವಣೆಯಲ್ಲಿ ಎಡರಂಗದ ಪ್ರಮುಖ ಘೋಷಣೆಗಳೇನು? ಚುನಾವಣಾ ಪ್ರಚಾರದ ಪ್ರಮುಖ ವಿಷಯಗಳೇನು..?**

**ಭಟ್ಟಾಚಾರ್ಯ:** ನಾವು ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಜನರೆಡೆಗೆ ಸಾಗಲಿದ್ದೇವೆ. ಇದು ನಮ್ಮ ಪ್ರಮುಖ ಚುನಾವಣಾ ಯೋಜನೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ನಾವು ನಮ್ಮ ಯಶಸ್ಸನ್ನು ಕ್ರೋಢೀಕರಿಸಲಿದ್ದೇವೆ. ರಾಜ್ಯದಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ರಾಜ್ಯವನ್ನು ಆರ್ಥಿಕವಾಗಿ ಬಲಗೊಳಿಸಲಿದ್ದೇವೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ನಮ್ಮ ಆದ್ಯ ಗಮನ. ಅತ್ಯಂತ ಬಡ ಕುಟುಂಬವೂ ಹೆಚ್ಚಿನ ಆದಾಯ ಗಳಿಸುವಂತಾಗಲು ನಾವು ನಮ್ಮ ಪ್ರಯತ್ನಗಳನ್ನು ಮುಂದುವರಿಸಲಿದ್ದೇವೆ. ಭೂಸುಧಾರಣಾ ಕಾರ್ಯ ಮುಂದುವರಿಯಲಿದೆ. ಅತ್ಯುತ್ತಮ ಗುಣಮಟ್ಟದ ಶಿಕ್ಷಣವನ್ನು ವಿಸ್ತಾರಗೊಳಿಸುವುದು, ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ನಮ್ಮ ಗುರಿ. ಪ.ಜಾತಿ, ಪಂಗಡ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ನಮ್ಮ ಕಾರ್ಯಕ್ರಮಗಳನ್ನು ವಿಸ್ತರಿಸಲಿದ್ದೇವೆ.

ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮತ್ತು ಶೋಷಿತ ಜನರು ಸಾಧಿಸಿದ ಅಭೂತಪೂರ್ವ ಯಶಸ್ಸನ್ನು ಕಾಪಾಡುವಂತೆ ನಾವು ಜನರನ್ನು ಚುನಾವಣಾ ಪ್ರಚಾರದ ವೇಳೆ ಕೇಳಿಕೊಳ್ಳಲಿದ್ದೇವೆ. **ಅರಾಜಕತೆ ಸೃಷ್ಟಿಸಲು ಹವಣಿಸುತ್ತಿರುವ ರಾಜಕೀಯ ಶಕ್ತಿಗಳನ್ನು, ಆ ಮೈತ್ರಿಕೂಟವನ್ನು ಸೋಲಿಸಿ ಎಂಬುದೇ ನಮ್ಮ ಪ್ರಮುಖ ಚುನಾವಣಾ ಘೋಷಣೆಯಾಗಿದೆ.**

**ಪ್ರಶ್ನೆ: ಮುಂದಿನ ಎಡರಂಗ ಸರ್ಕಾರದ ಪ್ರಮುಖ ಆದ್ಯತೆ ಏನು?**

**ಭಟ್ಟಾಚಾರ್ಯ:** ನಮ್ಮ ಆದ್ಯತೆ ಸ್ಪಷ್ಟ. ನಮ್ಮ ವರ್ಗಾಧಾರಿತ ನೀತಿಗಳೂ ಸ್ಪಷ್ಟ. ಕಾರ್ಮಿಕ ವರ್ಗದ ಕಲ್ಯಾಣಕ್ಕೆ ನಾವು ಇನ್ನಷ್ಟು ಯೋಜನೆಗಳನ್ನು ಹಾಕಿದ್ದೇವೆ. ಅದರಲ್ಲೂ ಮುಖ್ಯವಾಗಿ ಅಸಂಘಟಿತ ವಲಯದ ಕಾರ್ಮಿಕ ಕ್ಷೇಮಕ್ಕೆ. ಕಟ್ಟಡ ಕಾರ್ಮಿಕರು, ನೇಕಾರರು, ಅಂಗನವಾಡಿ ಕಾರ್ಮಿಕರು, ಮಧ್ಯಾಹ್ನದ ಬಿಸಿಯೂಟದ ಸಹಾಯಕರ ಕ್ಷೇಮಕ್ಕಾಗಿ ನಾವು ಬದ್ಧರಾಗಿದ್ದೇವೆ. ಸ್ವಸಹಾಯ ಸಂಘದ ಪುನಶ್ಚೇತನಕ್ಕೆ ನಾವು ಎಲ್ಲ ಪ್ರಯತ್ನ ನಡೆಸಲಿದ್ದೇವೆ. ಯುವ ಪೀಳಿಗೆಗೂ ಎಡರಂಗ ಸರ್ಕಾರ ಆದ್ಯ ಗಮನ ನೀಡಲಿದೆ. ವಿದ್ಯಾರ್ಥಿ-ಯುವಜನರು ಪ್ರತಿಭಾನ್ವಿತರಾಗಿದ್ದಾರೆ. ಅವರ ಎಲ್ಲ ಆಶೆ ಆಕಾಂಕ್ಷೆಗಳನ್ನು ನೆರವೇರಿಸುವ, ಅವರಲ್ಲಿನ ಎಲ್ಲ ಸಾಮರ್ಥ್ಯಗಳನ್ನು ಬಳಸಲು ಸರ್ಕಾರ ಯೋಜನೆಗಳನ್ನು ರೂಪಿಸಲಿದೆ. ಅವರಿಗೆ ಉತ್ತಮ ಶಿಕ್ಷಣ ಹಾಗೂ ಉದ್ಯೋಗದ ಅವಕಾಶ ಹೆಚ್ಚಿಸಲು ನಾವು ಕಾರ್ಯಯೋಜನೆಗಳನ್ನು ಹಾಕಿಕೊಂಡಿದ್ದೇವೆ. ○

# ಎಡರಂಗದ ಪ್ರಣಾಳಿಕೆ:

ಪುಟ 8 ರಿಂದ

ಮಾರ್ಪಡಿಸುವ ಗುರಿಯನ್ನು ಹೊಂದಲಾಗಿದೆ. ಇದಕ್ಕಾಗಿ ಹಲವು ನೂತನ ಯೋಜನೆಗಳನ್ನು ಜಾರಿಗೆ ತರಲಾಗುವುದು.

■ ಸರ್ಕಾರದ ಹಣಕಾಸು ನೀತಿಯನ್ನು ಅಭಿವೃದ್ಧಿ ದೃಷ್ಟಿಕೋನದಲ್ಲಿ ರೂಪಿಸಲಾಗುವುದು. ಸಾಮಾಜಿಕ ಕ್ಷೇಮಾಭಿವೃದ್ಧಿ ಯೋಜನೆಗಳಿಗೆ ಹಣಕಾಸಿನ ಕೊರತೆಯಾಗದಂತೆ ಆದಾಯ ಖೋತಾವನ್ನು ಕಡಿಮೆ ಮಾಡಲಾಗುವುದು. ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಲು ಹಲವು ಹೊಸ ಯೋಜನೆಗಳನ್ನು ಜಾರಿಗೆ ತರಲಾಗುವುದು, ಈ ಗುರಿ ಮುಟ್ಟಲು ಬೇಕಾದ ಆಡಳಿತ ಸುಧಾರಣೆ ಜಾರಿಗೆ ತರಲಾಗುವುದು. ಹೊಸ ಕಾಯ್ದೆಯ ಆಧಾರದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಲಾಗುವುದು. ಸೆಕ್ರೇರಿಯೇಟ್ ಹಾಗೂ ರೆವಿನ್ಯೂ ಇಲಾಖೆಯಲ್ಲಿ ಸುಧಾರಣೆಗಳನ್ನು ತರಲಾಗುವುದು.

ಜಾತ್ಯತೀತತೆಯನ್ನು ಬಲಪಡಿಸಲು ಹಾಗೂ ಭ್ರಷ್ಟಾಚಾರವನ್ನು ಕಿತ್ತೊಗೆಯಲು ಚುನಾವಣಾ ಪ್ರಣಾಳಿಕೆಗಳ ಗುರಿ ಮುಟ್ಟಲು ಹಾಗೂ ಕೇರಳವನ್ನು ಪ್ರಗತಿಯ ರಾಜ್ಯವಾಗಿ ರೂಪಿಸಲು ಮತದಾರರು ಎಲ್‌ಡಿಎಫ್ ಸರ್ಕಾರಕ್ಕೆ ಬೆಂಬಲ ನೀಡುವರೆಂಬ ವಿಶ್ವಾಸ ದಿನೇ ದಿನೇ ಹೆಚ್ಚುತ್ತಿದೆ.

**ಹುಟ್ಟಿನಿಂದ ಕೊನೆವರೆಗೂ ಭದ್ರತೆ**

ರಾಜ್ಯದ ಎಲ್ಲರಿಗೂ ಹುಟ್ಟಿನಿಂದ ಕೊನೆವರೆಗೂ ಕಲ್ಯಾಣ ಮತ್ತು ಜೀವನ ಭದ್ರತೆ ನೀಡಲು ಎಲ್‌ಡಿಎಫ್ ಬದ್ಧವಾಗಿದೆ. ಸರ್ಕಾರ ಈಗಾಗಲೇ ಅಸಂಘಟಿತ ವಲಯದ ಮಹಿಳಾ ಕಾರ್ಮಿಕರಿಗೆ ವೇತನದ ಜೊತೆಗೆ ಒಂದು ತಿಂಗಳು ಹೆರಿಗೆ ರಜೆ ನೀಡುತ್ತಿದೆ. ಇದನ್ನು ಐದು ವರ್ಷಗಳಲ್ಲಿ ಮೂರು ತಿಂಗಳ ವೇತನ ಸಹಿತ ರಜೆ ವಿಸ್ತರಿಸಲಾಗುವುದು. ಪ್ರತಿ ಹುಟ್ಟುವ ಮಗುವಿಗೆ ಸರ್ಕಾರದಿಂದ 10 ಸಾವಿರ ಠೇವಣಿ ಇಡಲಾಗುವುದು. ಹದಿನಾಲ್ಕು ವರ್ಷಗಳ ನಂತರ ಠೇವಣಿ ಮೊತ್ತ ಫಲಾನುಭವಿಗಳಿಗೆ ದಕ್ಕುವುದು. ಎಲ್ಲಾ ಶಾಲೆಗಳ ಮಕ್ಕಳಿಗೆ ಉಚಿತ ಶಿಕ್ಷಣ, ಮಧ್ಯಾಹ್ನದ ಊಟ, ಉಚಿತ ಸಮವಸ್ತ್ರ ನೀಡಲಾಗುವುದು. ವೃದ್ಧಾಪ್ಯವೇತನ ಸೇರಿದಂತೆ ಇನ್ನಿತರ ಸಾಮಾಜಿಕ ಯೋಜನೆಗಳ ವೇತನಗಳನ್ನು 400 ರೂಪಾಯಿಂದ ಒಂದು ಸಾವಿರಕ್ಕೆ ಹೆಚ್ಚಿಸಲಾಗುವುದು.

ಪ್ರತಿಯೊಬ್ಬರಿಗೆ ಮನೆ ಒದಗಿಸಿಕೊಡುವ ಇಎಂಎಸ್ ಗೃಹ ಯೋಜನೆಯು ಶೀಘ್ರವೇ ಪೂರ್ಣಗೊಳ್ಳಲಿದೆ. ಸಂಪೂರ್ಣ ವಿದ್ಯುದ್ದೀಕರಣ ಯೋಜನೆಯು ಈಗಾಗಲೇ ರಾಜ್ಯದ ನೂರು ವಿಧಾನಸಭಾ ಕ್ಷೇತ್ರಗಳಲ್ಲಿ ಪೂರ್ಣಗೊಂಡಿದೆ. ಆರು ತಿಂಗಳಲ್ಲಿ ಉಳಿದ 60 ವಿಧಾನಸಭಾ ಕ್ಷೇತ್ರಗಳಲ್ಲಿ ಪೂರ್ಣಗೊಳ್ಳಲಿದೆ. ಐದು ವರ್ಷಗಳಲ್ಲಿ ಎಲ್ಲರಿಗೂ ಕುಡಿಯುವ ನೀರಿನ ಕೊಳವೆ ಸಂಪರ್ಕ ನೀಡಲಾಗುವುದು.

ಕೇಂದ್ರ ಸರ್ಕಾರವು ಕೇರಳ ರಾಜ್ಯದಲ್ಲಿ ಕೇವಲ 11.5 ಲಕ್ಷ ಬಿಪಿಎಲ್ ಕುಟುಂಬಗಳನ್ನು ಗುರುತಿಸಿದೆ. ಆದರೆ ಎಲ್‌ಡಿಎಫ್ ಸರ್ಕಾರ ಎಲ್ಲ ಮೀನುಗಾರರು, ಕೃಷಿ ಕಾರ್ಮಿಕರು, ಸಾಂಪ್ರದಾಯಿಕ ಕೆಲಸಗಳಲ್ಲಿ ತೊಡಗಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಾರ್ಮಿಕರು ಸೇರಿದಂತೆ ಎಲ್ಲ ಬಡವರನ್ನು ಬಿಪಿಎಲ್ ಪಟ್ಟಿಯಲ್ಲಿ ಸೇರಿಸಿದೆ. ನಾಗರೀಕ ಸರಬರಾಜು ಸಪ್ಲೈ ಕಾರ್ಪೋರೇಷನ್ ಮೂಲಕ ರೇಷನ್ ಮಳಿಗೆಗಳನ್ನು ತೆರೆಯಲು ಗುರುತಿಸಲಾಗುವುದು. ಅಲ್ಲದೇ 300 ರೂ. ಬೆಲೆಯ ಆಹಾರ ಸಾಮಾಗ್ರಿಗಳನ್ನು 150 ರೂಪಾಯಿಗೆ ರಿಯಾಯಿತಿ ದರದಲ್ಲಿ ನೀಡಲಾಗುವುದು. ಕೇಂದ್ರ ಸರ್ಕಾರದ ಸೀಮೆ ಎಣ್ಣೆಗೆ ಸಹಾಯ ಧನ ಕಡಿತ ಮಾಡುವ ನೀತಿಗೆ ವಿರುದ್ಧವಾಗಿ ಎಲ್‌ಡಿಎಫ್ ಸರ್ಕಾರ ಲೀಟರ್‌ಗೆ 20 ರೂ. ಸಹಾಯ ಧನ ನೀಡುವ ಭರವಸೆಯನ್ನು ಚುನಾವಣಾ ಪ್ರಣಾಳಿಕೆ ನೀಡುತ್ತದೆ.

ಪರಿಶಿಷ್ಟ ಪಂಗಡ ಸಮುದಾಯದ ಅಭಿವೃದ್ಧಿಗಾಗಿ ಕೈಗೊಂಡಿರುವ ಹಲವು ಯೋಜನೆಗಳ ಹೊರತಾಗಿಯೂ ಅವರಿಗೆ ಕೃಷಿ ಭೂಮಿ ನೀಡಲಾಗುವುದು. ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸಿಗುತ್ತಿರುವ ಸವಲತ್ತುಗಳನ್ನು ಕ್ರಿಶ್ಚಿಯನ್‌ಗೆ ಮತಾಂತರಗೊಂಡ ಈ ಸಮುದಾಯವರಿಗೂ ವಿಸ್ತರಿಸಲಾಗುವುದು. ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿಯೇ ಪ್ರತ್ಯೇಕ ಇಲಾಖೆಯನ್ನು ಆರಂಭಿಸಲಾಗುವುದು. ಲಿಂಗಾಧಾರಿತ ಬಜೆಟ್‌ಗೆ ಹೆಚ್ಚಿನ ಒತ್ತು ನೀಡಲಿದ್ದು, ಮಹಿಳೆಯರನ್ನು ಒಳಗೊಳ್ಳುವ ವಿವಿಧ ಯೋಜನೆಗಳಿಗೆ 7500 ಕೋಟಿ ಮೊತ್ತ ಒದಗಿಸಲಾಗುವುದು. ಎಲ್ಲಾ ಬಡವರಿಗೂ ಉಚಿತ ಚಿಕಿತ್ಸೆ ಆರೋಗ್ಯ ನೀಡಲಾಗುವುದು.

ವಿವಿಧ ಕಲ್ಯಾಣ ಯೋಜನೆಗಳನ್ನು ಹಾಕಿಕೊಳ್ಳುವ ಜೊತೆಯಲ್ಲಿಯೇ ಉದ್ಯೋಗ ಸೃಷ್ಟಿಗೆ ಎಲ್‌ಡಿಎಫ್ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ. ಐಟಿ ಪಾರ್ಕ್‌ಗಳಿಗೆ ಈಗಿರುವ ಭೂಮಿಯನ್ನು ಐದು ಪಟ್ಟು ಹೆಚ್ಚಿಸಲಾಗುವುದು. ಅಲ್ಲದೇ ಜೈವಿಕ ತಂತ್ರಜ್ಞಾನ (ಬಿ.ಟಿ), ನ್ಯಾನೋ

→

## ವಿಧಾನಸಭಾ ಚುನಾವಣೆಗಳು :

# ‘ಬಿಜೆಪಿ - ಕಾಂಗ್ರೆಸ್‌ಗಳನ್ನು ಸೋಲಿಸಿ, ಜೆಡಿಎಸ್ ಬೆಂಬಲಿಸಿ’


## ಸಿಪಿಐ(ಎಂ)ನ ಸ್ವತಂತ್ರ ಪ್ರಚಾರಾಂದೋಲನ

ರಾಜ್ಯದ ಅಧಿಕಾರಸ್ಥ ಬಿಜೆಪಿಯ ಅನೈತಿಕ ‘ಆಪರೇಷನ್ ಕಮಲ’ ರಾಜಕಾರಣದಿಂದ ರಾಜ್ಯದಲ್ಲೀಗ, ಜಗಳೂರು, ಬಂಗಾರಪೇಟೆ ಹಾಗೂ ಚನ್ನಪಟ್ಟಣ ಈ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆಗಳು ಬಂದಿವೆ.

ಬೆಲೆ ಏರಿಕೆಗೆ ಕಾರಣವಾಗುವ, ದುಡಿಯುವ ಜನ ವಿರೋಧಿಯಾದ ನೀತಿಗಳನ್ನೇ ಸತತವಾಗಿ ಜನರ ಮೇಲೆ ಹೇರುತ್ತಿರುವ ಭ್ರಷ್ಟಾತಿಭ್ರಷ್ಟ ಹಗರಣಗಳ ಕಳಂಕಗಳನ್ನು ಹೊತ್ತುಕೊಂಡಿರುವ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳನ್ನು ಸೋಲಿಸುವ ಹಾಗೂ ಜಾತ್ಯಾತೀತ ಜನತಾದಳವನ್ನು ಗೆಲ್ಲಿಸುವ ನಿಟ್ಟಿನಲ್ಲಿ ಶ್ರಮಿಸಲು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು ಕರೆ ನೀಡಿದ ಹಿನ್ನೆಲೆಯಲ್ಲಿ ಸಂಬಂಧಿಸಿದ ಈ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಪಕ್ಷದ ಸ್ವತಂತ್ರ ಪ್ರಚಾರಾಂದೋಲನವನ್ನು ನಡೆಸಿದೆ.

**ಬಂಗಾರಪೇಟೆಯಲ್ಲಿ ರಾಜಕೀಯ ಸಮಾವೇಶ, ಬಹಿರಂಗ ಸಭೆಗಳು**

ಮಾರ್ಚ್ 31, 2011 ರಂದು ಬಂಗಾರಪೇಟೆಯ ಮಣಿಕಂಠ ಸಭಾಂಗಣದಲ್ಲಿ ಸಿಪಿಐ(ಎಂ) ಪಕ್ಷವು ರಾಜಕೀಯ ಸಮಾವೇಶವನ್ನು ಸಂಘಟಿಸಿತ್ತು. ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ಕಾರ್ಯದರ್ಶಿ ಅರ್ಜುನನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿಯವರು ಪಾಲ್ಗೊಂಡು ಮಾತನಾಡಿ ಜನವಿರೋಧಿಯಾದ ಭ್ರಷ್ಟ ಕಾಂಗ್ರೆಸ್ ಹಾಗೂ ಜನದ್ರೋಹಿ, ಕೋಮುವಾದಿ ಬಿಜೆಪಿಯನ್ನು ಸೋಲಿಸಿ ಜಾತ್ಯಾತೀತ ಜನತಾದಳವನ್ನು ಗೆಲ್ಲಿಸಲು ಕರೆ ನೀಡಿದರು.



ಸಮಾವೇಶದಲ್ಲಿ ಸಿಪಿಐ(ಎಂ) ಜಿಲ್ಲಾ ಮುಖಂಡರುಗಳಾದ ಗಾಂಧಿನಗರ ನಾರಾಯಣಸ್ವಾಮಿ. ವಿ.ಗೀತಾ, ಸಿಪಿಐ(ಎಂ)ನ ಚುನಾಯಿತ ಪಂಚಾಯ್ತಿ ಸದಸ್ಯರುಗಳಾದ ಫ್ಲೋರಾ ಮತ್ತು ಗಣೇಶನ್ ಮುಂತಾದವರು ಪಾಲ್ಗೊಂಡು ಮಾತನಾಡಿದರು. ಸುಮಾರು 120 ಜನ ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾವೇಶದ ತೀರ್ಮಾನದಂತೆ ಕ್ಷೇತ್ರದ ವಿವಿದೆಡೆ ಸಿಪಿಐ(ಎಂ)ನ ಸ್ವತಂತ್ರ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಏಪ್ರಿಲ್ 3, 2011 ರಂದು ಬಿ.ಇ.ಎಂ.ಎಲ್. ನಗರದ ಆಲದ ಮರದಲ್ಲಿ ಬಹಿರಂಗ ಸಭೆ ನಡೆಯಿತು. ಸುಮಾರು 500 ಜನರು ಪಾಲ್ಗೊಂಡಿದ್ದ ಈ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಪಾಲ್ಗೊಂಡು ಮಾತನಾಡಿದರು. ಅರ್ಜುನನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಂಗರಾಜ್ ಮುಂತಾದವರು ಮಾತನಾಡಿದರು. [illegible]

ಏಪ್ರಿಲ್ 6 ರಂದು [illegible] ಗಾಂಧಿನಗರ [illegible] ಅಧ್ಯಕ್ಷತೆಯಲ್ಲಿ [illegible] ಜಿ.ಸಿ.ಬಯ್ಯಾರೆಡ್ಡಿ [illegible] ವಿ.ಗೀತಾ, [illegible] ಮಾತನಾಡಿದರು.

**ಜಗಳೂರಿನಲ್ಲಿ ಸಮಾವೇಶ**

ಏಪ್ರಿಲ್ 1, 2011 ರಂದು ಜಗಳೂರಿನ ಶಾದಿಮಹಲ್‌ನಲ್ಲಿ ಸಿಪಿಐ(ಎಂ) ಸ್ವತಂತ್ರ ಸಮಾವೇಶವು ನಡೆಯಿತು. ಸಿಪಿಐ(ಎಂ) ಮುಖಂಡರಾದ ಕೆ.ಎಲ್.ಭಟ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಭಾಗವಹಿಸಿ ಮಾತನಾಡಿದರು. ಭೂಮಾಲಿಕರು, ಭೂಗಳ್ಳರು, ಗಣಿ ಲೂಟಿಕೋರ, ಬಂಡವಾಳಿಗರ ಮುಕ್ತ ಲೂಟಿಗೆ ಅವಕಾಶ ನೀಡಿರುವ ಕಾಂಗ್ರೆಸ್ ಬಿಜೆಪಿಗಳನ್ನು ಸೋಲಿಸಬೇಕೆಂದು ಅವರು ಕರೆ ನೀಡಿದರು. ಸುಮಾರು 150 ಜನರು ಪಾಲ್ಗೊಂಡ ಈ ಸಮಾವೇಶದಲ್ಲಿ ಸಿಪಿಐ(ಎಂ) ಮುಖಂಡರಾದ ಓಬಳೇಶ ಮುಂತಾದವರು ಪಾಲ್ಗೊಂಡಿದ್ದರು. ಸಮಾವೇಶದ ತೀರ್ಮಾನದಂತೆ ಕರಪತ್ರ ಹಂಚಿಕೆಯೊಂದಿಗೆ ಪ್ರಚಾರಾಂದೋಲನ ನಡೆದಿದೆ.

ಅದೇ ರೀತಿ ಚನ್ನಪಟ್ಟಣ ಕ್ಷೇತ್ರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಸಿಪಿಐ(ಎಂ) ನಿಲುವು ವಿವರಿಸಿ, ಜನತಾದಳದ ಅಭ್ಯರ್ಥಿಯ ಗೆಲುವಿಗೆ ಮನವಿ ಮಾಡಲಾಗಿದೆ.

---

→

ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

ನಿಗದಿತ ವಯೋಮಾನದ ಎಲ್ಲ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡಲಾಗುವುದು. ನೂರಕ್ಕೆ ನೂರರಷ್ಟು ಶಾಲೆಗಳಿಗೆ ಇಂಟರ್‌ನೆಟ್ (ಅಂತರ್ಜಾಲ) ಸಂಪರ್ಕ ಕಲ್ಪಿಸಿಕೊಡಲಾಗುವುದು. ಸೇವಾ ಹಕ್ಕಿನ ಕಾಯ್ದೆ, ಅಂತರರಾಜ್ಯ ವಲಸೆಗಾರ ಕಾರ್ಮಿಕರ ಕಾಯ್ದೆ ಜಾರಿಗೆ ತರಲಾಗುವುದು.

ಅಂಚಿನ ಹಾಗೂ ಅಗತ್ಯ ಹೊಂದಿರುವ ವರ್ಗದ ಜನರನ್ನು ಮುಖ್ಯವಾಗಿಟ್ಟುಕೊಂಡು ರಾಜ್ಯದ ಒಟ್ಟಾರೆ ಅಭಿವೃದ್ಧಿಯ ದೃಷ್ಟಿಕೋನವನ್ನು ಎಲ್‌ಡಿಎಫ್ ಚುನಾವಣಾ ಪ್ರಣಾಳಿಕೆ ಹೊಂದಿದೆ. ಅಗತ್ಯವಿರುವ ಕಡೆಗೆಲ್ಲ ಖಾಸಗಿ ಬಂಡವಾಳವನ್ನು ಆಹ್ವಾನಿಸಲಾಗುವುದು. ಸರ್ಕಾರದ ವೆಚ್ಚ ಕಡಿತಕ್ಕೋಸ್ಕರ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಅಂದರೆ ರೇಷನ್ ವ್ಯವಸ್ಥೆಗೆ ಧಕ್ಕೆ ತರುವುದಿಲ್ಲ. ಬದಲಿಗೆ ಸರ್ಕಾರದ ಆದಾಯ ಹೆಚ್ಚಿಸಲು, ಕ್ರೋಢೀಕರಿಸಲು ನೂತನ, ಸಂಶೋಧನಾತ್ಮಕ ಮಾದರಿಗಳನ್ನು ಹುಡುಕಲಾಗುವುದು.


**ಕನ್ನಡಕ್ಕೆ : ಜಿ.ನರಸಿಂಹನ್ ಮತ್ತು ಶ್ವೇತೇಂದ್ರ**

---

## ವಿವಾಹದ ಶುಭಾಶಯಗಳು

ಅದು ವಿವಾಹದ ಸಂದರ್ಭ. ಆದರೆ ತಾಳಮೇಳಗಳ ಮಂತ್ರ ಯಂತ್ರಗಳ ಸಪ್ಪಳವಿಲ್ಲದೇ ಒಂದು ವೈಚಾರಿಕ, ಚಿಂತನ ಮಂಥನದ ಸಮಾರಂಭವೇ. ಸರಳ, ಸುಂದರ, ಬೆಸೆಗೊಳ್ಳಲು ಇಚ್ಛಿಸಿದ ಇಬ್ಬರಿಗೂ ಶುಭವೆಂದ ಬಂಧುಬಳಗ, ಗೆಳೆಯರು, ಒಡನಾಡಿಗಳು.

ಪ್ರಗತಿಪರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡ ಸಿದ್ದಾಪುರದ ಐ.ಕೆ.ಛಾಯಾ, ಡಾ. ಆರ್.ವಿ.ಭಂಡಾರಿಯವರ ಮೊಮ್ಮಗಳು) ಬೆಂಗಳೂರು ಉದ್ಯೋಗಿ ವೆಂಕಟೇಶ್ ಇವರುಗಳ ವಿವಾಹ ಸಮಾರಂಭ ನಡೆದದ್ದು ಫೆಬ್ರವರಿ 27, 2011. ಏರುಹೊತ್ತಿನಲ್ಲಿ ಉತ್ತರಕನ್ನಡದ ಸಿದ್ದಾಪುರದಲ್ಲಿ. ಇದು ಅಂತರ್ಜಾತೀಯ ಮಾತ್ರವಲ್ಲ ಅಂತರ್ ಭಾಷೀಯವೂ ಕೂಡ. ಇಂತಹ ನಿರ್ಧಾರ ಕೈಗೊಂಡವರಿಗೆ, ಕುಟುಂಬದವರಿಗೆ ಅಲ್ಲಿ ಶುಭ ಹಾರೈಸಿದರು. ಅಭಿನಂದಿಸಿದರು. ವಿವಾಹವೆಂಬುದು ಪ್ರತಿಷ್ಠೆಯ ದುಂದುವೆಚ್ಚದ ಪ್ರದರ್ಶನವಾಗಿದೆ. ಮಧುರ ಮಾನವ ಸಂಬಂಧಗಳ ಬದಲು ವ್ಯಾಪಾರೀ ಸ್ವರೂಪಕ್ಕೆ ಹೊರಳುತ್ತಿರುವುದರ ಬಗ್ಗೆ ಆತಂಕ, ಆಕ್ರೋಶ, ಬದುಕು ಪ್ರೀತಿಸುವ ಅವರೆಲ್ಲಾ ಇಂತಹ




ಮದುವೆಗಳು ಹೆಚ್ಚಬೇಕು, ಇದೊಂದು ಆಂದೋಲನವಾಗಬೇಕು ಎಂಬ ಆಶಯ ಹಾರೈಕೆ ಹೊತ್ತವರೇ ಹಾಗೇ ವಧು, ವರರಿಬ್ಬರೂ ಸಮಾಜಮುಖಿಗಳಾಗಲಿ ಎಂಬ ನಿರೀಕ್ಷೆ. ಈ ಸರಳ ಸಮಾರಂಭದಲ್ಲಿ ಖ್ಯಾತ ಹಿರಿಯ ಬರಹಗಾರರಾದ ವಿಷ್ಣು ನಾಯಕರು ಕವಿ ವಿಡಂಬಾರಿ, ಕವಿ ಸುಬ್ರಾಯ ಮತ್ತಿಹಳ್ಳಿ, ಚಿತ್ತಾರ ಪತ್ರಿಕೆ ಸಂಪಾದಕ ಡಿ.ಗಣಪತಿ, ಜನಶಕ್ತಿಯ ಎಸ್.ವೈ.ಗುರುಶಾಂತ್ ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ಶಾಂತಾರಾಮ್ ನಾಯಕ್, ಚಿಂತನದ ಆರ್.ಶ್ಯಾನಭಾಗ್, ಎನ್.ಕೆ.ವಸಂತ್‌ರಾಜ್, ಜನವಾದಿ ಮಹಿಳಾ ಸಂಘದ ಶ್ರೀಮತಿ ಸಾಹಿತ್ಯ ಪರಿಷತ್‌ನ ಟಿ.ಜಿ.ಹೆಗಡೆ ಬಾಗೂರು, ರಾಜು ಹೆಬ್ಬಾರ್ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಚಿಂತನದ ಒಡನಾಡಿ ಡಾ.ವಿಠ್ಠಲ ಭಂಡಾರಿ ನಿರ್ವಹಿಸಿದರು.



ಕ್ರಿಯಾ ಪ್ರಕಾಶನದಲ್ಲಿ ಉದ್ಯೋಗಿಯಾಗಿರುವ ಎಂ.ರವಿಶಂಕರ್ ಮತ್ತು ದೀಪ್ತಿ ರವರ ವಿವಾಹ ಮಾರ್ಚ್ ರಂದು ಬೆಂಗಳೂರಿನಲ್ಲಿ ಜರುಗಿತು. ಅಕ್ಷರ ಜೋಡಣೆ, ವಿನ್ಯಾಸಗಳ ಕೌಶಲ್ಯದ ಎಳೆಗಳ ಮೂಲಕ ಜನಶಕ್ತಿ ಪತ್ರಿಕೆಯ ಮುದ್ರಣಕ್ಕೆ ಸನ್ನದ್ಧಗೊಳಿಸುವ ತಂಡದಲ್ಲಿನ ರವಿ ಹಾಗೂ ಜೀವನ ಸಂಗಾತಿ ದೀಪ್ತಿಯವರಿಗೆ ಮುಡಿವ ಜನರ ಪ್ರಾಣಮಿತ್ರ ‘ಜನಶಕ್ತಿ’ಯ ಶುಭ ಹಾರೈಕೆಗಳು.

# ಯುಪಿಎ 2 ಜಿ ಮಂತ್ರಿಯ ಮೇಲೆ ಮೋಸ, ಫೋರ್ಜರಿ, ಕ್ರಿಮಿನಲ್ ಸಂಚು, ಭ್ರಷ್ಟಾಚಾರದ ಸಿಬಿಐ ಆರೋಪ ಪಟ್ಟಿ

**ಯುಪಿಎ ದರ್ಬಾರ್**



■ ವೇದರಾಜ ಎನ್.ಕೆ.

ಯುಪಿಎ ಸರಕಾರದ 2ಜಿ ತರಂಗಾಂತರ ಹಂಚಿಕೆ ಹಗರಣದಲ್ಲಿ ರಾಜಿನಾಮೆ ಕೊಡಬೇಕಾಗಿ ಬಂದ ಸಂಪರ್ಕ ಮಂತ್ರಿ ಎ. ರಾಜ, ಅವರ ಆಪ್ತ ಕಾರ್ಯದರ್ಶಿ ಆರ್. ಕೆ. ಚಂದೋಲಿಯ, ಆಗ ದೂರಸಂಪರ್ಕ ಕಾರ್ಯದರ್ಶಿಯಾಗಿದ್ದ ಸಿದ್ದಾರ್ಥ ಬರುವ ಮತ್ತು ಇತರ ಐದು ಕಾರ್ಪೊರೇಟ್ ಮುಖ್ಯಸ್ಥರ ಮೇಲೆ ಎಪ್ರಿಲ್ 2 ರಂದು ಸಿಬಿಐ ದಿಲ್ಲಿ ವಿಶೇಷ ನ್ಯಾಯಾಲಯವೊಂದರಲ್ಲಿ ತನ್ನ ಮೊದಲ ಆರೋಪ ಪಟ್ಟಿಯನ್ನು ಸಲ್ಲಿಸಿದೆ. ಸುಮಾರು 80000 ಪುಟಗಳಷ್ಟು ಇದೆಯೆಂದು ಹೇಳಲಾದ ಈ ಆರೋಪ ಪಟ್ಟಿಯಲ್ಲಿ ಎ.ರಾಜ ಮತ್ತು ಸಹಚರರ ಮೇಲೆ ಮೋಸ, ಫೋರ್ಜರಿ, ಕ್ರಿಮಿನಲ್ ಸಂಚು ಮತ್ತು ಭ್ರಷ್ಟಾಚಾರದ ಆರೋಪಗಳಿವೆ ಎನ್ನಲಾಗಿದೆ.

ಆರೋಪ ಪಟ್ಟಿ ಪಡೆದ ಇತರರೆಂದರೆ, ಅಂಬಾನಿಯ ರಿಲಯನ್ಸ್ ಟೆಲಿಕಾಂ ಕಂಪನಿಯ ಗ್ರೂಪ್ ಮೆನೇಜಿಂಗ್ ಡೈರೆಕ್ಟರ್ ಗೌತಮ್ ದೋಶಿ ಹಾಗೂ ಉಪಾಧ್ಯಕ್ಷರುಗಳಾದ ಹರಿ ನಾಯರ್ ಮತ್ತು ಸುರೇಂದ್ರ ಪಿಪರ, ಇನ್ನೊಂದು ಟೆಲಿಕಾಂ ಕಂಪನಿ ಎಟಿಸಲಾಟ್ ಡಿಬಿಯನ್ನು ಪ್ರಾಯೋಜಿಸಿದ ಮುಂಬೈಯ ರಿಯಲ್ ಎಸ್ಟೇಟ್ ಕಂಪನಿ ಡಿಬಿ ರಿಯಲ್ಟಿಯ ಡೈರೆಕ್ಟರ್ ವಿನೋದ ಗೋಯಂಕ, ಮತ್ತೊಂದು ರಿಯಲ್ ಎಸ್ಟೇಟ್ ಕಂಪನಿ ಗುರ್‌ಗಾಂವ್‌ನ ಯುನಿಟೆಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಸಂಜಯ್ ಚಂದ್ರ.

ಈ ಮೊದಲ ಆರೋಪ ಪಟ್ಟಿಯಲ್ಲಿ ಸರಕಾರಕ್ಕೆ ಆದ ನಷ್ಟ ರೂ. 30984 ಕೋಟಿ ರೂ. ಎಂಬುದು ಸಿಬಿಐ ಲೆಕ್ಕಾಚಾರ. ಯುಪಿಎ-2 ಸರಕಾರ ಖಜಾನೆಗೆ ಏನೇನೂ ನಷ್ಟವಾಗಿಲ್ಲ, ಕೆಲವು ಅಕ್ರಮಗಳಾಗಿವೆಯಷ್ಟೇ ಎಂದು ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಸಿಎಜಿ ಲೆಕ್ಕಾಚಾರ ಸರಿಯಲ್ಲ ಎಂಬ ಯುಪಿಎ-2 ಸರಕಾರದ ಸವಾಲನ್ನು ಬದಿಗೊತ್ತಿದೆ. ಸಿಎಜಿ ಲೆಕ್ಕಾಚಾರ ಮತ್ತು ಸಿಬಿಐ ಲೆಕ್ಕಾಚಾರ ತಾಳೆಯಾಗುತ್ತನೆ ಎಂದು ಅದು ಹೇಳಿದೆ.

ಈ ನಡುವೆ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ) ರತನ್ ಟಾಟಾ, ಅನಿಲ್ ಅಂಬಾನಿ, ಕಾರ್ಪೊರೇಟ್ ಲಾಬ್ಬಿಕಾರ್ತಿ ನೀರಾ ರಾಡಿಯ, ದೂರಸಂಪರ್ಕ ಕಂಪನಿಗಳಾದ ಎಟಿಸಲಾಟ್ ಡಿಬಿಯ ಮುಖ್ಯಸ್ಥ ಅತುಲ್ ಜಂಬ್ ಇವರನ್ನೆಲ್ಲ ಈ ಹಗರಣ ಕುರಿತಂತೆ ಪ್ರಶ್ನಿಸಿದೆ. ಅತ್ತ ಎ.ರಾಜ ಅವರ ಸಹಚರ ಸಾದಿಕ್ ಬತ್ಚಾ 'ಆತ್ಮಹತ್ಯೆ'ಯ ಬಗ್ಗೆ ಸಿಬಿಐ ತನಿಖೆ ಸುಪ್ರಿಂ ಕೋರ್ಟ್ ನಿರ್ದೇಶನದ ಮೇರೆಗೆ ಆರಂಭವಾಗಿದೆ.

**'ವ್ಯವಸ್ಥೆಯನ್ನು ಶುದ್ಧಗೊಳಿಸುತ್ತೇವೆ'**
**ಕಾರ್ಪೊರೇಟ್ ವಲಯಕ್ಕೆ ಪ್ರಧಾನಿ ಭರವಸೆ !**

ಇದು ಹಗರಣಗಳ ಸರಮಾಲೆ ತೊಟ್ಟಿರುವ ಯುಪಿಎ-2 ಸರಕಾರದ ಪ್ರಧಾನ ಮಂತ್ರಿಗಳು ಭಾರತದ ದೊಡ್ಡ-ದೊಡ್ಡ ಕಂಪನಿಗಳ ಮಾಲಕರಿಗೆ ಕೊಟ್ಟಿರುವ ಭರವಸೆ. ಒಳಗಿಂದಲೇ ಸ್ಫೋಟಗೊಂಡಿರುವ ಹಗರಣಗಳು ತನ್ನ ಸರಕಾರದ ಅಜೆಂಡಾವನ್ನು ಬದಲಿಸಲು ಬಿಡುವುದಿಲ್ಲ ಎಂದಿದ್ದಾರೆ ಅವರು.


ಅವರು ವ್ಯಾಪಾರಮತ್ತು ಉದ್ದಿಮೆ ಕುರಿತ ಪ್ರಧಾನ ಮಂತ್ರಿಗಳ ಮಂಡಳಿಯ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಇದು ದೇಶದ ದೊಡ್ಡ-ದೊಡ್ಡ ಉದ್ಯಮಿಗಳು ಸದಸ್ಯರಾಗಿರುವ ಮಂಡಳಿ. ಇದರಲ್ಲಿ 2ಜಿ ಹಗರಣದಲ್ಲಿ ಸಂಸತ್ತಿನ ಲೆಕ್ಕಪತ್ರ ಸಮಿತಿಯ ಮುಂದೆ ಹಾಜರಾದ ರತನ್ ಟಾಟಾ ಸೇರಿದಂತೆ ನಮ್ಮ ಉದ್ದಿಮೆ ವಲಯದ ಅತಿರಥ-ಮಹಾರಥರೆಲ್ಲರೂ ಭಾಗವಹಿಸಿದ್ದರು.

ಈ ಹಗರಣಗಳ ಸ್ಫೋಟ ನಡೆದಿರುವುದೇ ಯುಪಿಎ-2 ಸರಕಾರದ ಇದೇ ಅಜೆಂಡಾದಿಂದಾಗಿ, ಅದರಲ್ಲಿ ರಾಜಕಾರಣಿಗಳು, ಅಧಿಕಾರಶಾಹಿಗಳೊಂದಿಗೆ ಭಾರತದ ಕಾರ್ಪೊರೇಟ್ ವಲಯವೂ ಶಾಮೀಲಾಗಿರುವುದು ಈಗ ಒಂದೊಂದಾಗಿ ಬಯಲಾಗುತ್ತಿರುವಾಗ ವ್ಯವಸ್ಥೆಯನ್ನು ಶುದ್ಧಗೊಳಿಸುವುದರ ಅರ್ಥವೇನು ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವವಾಗುತ್ತದೆ. ಬಹುಶಃ ಕಾರ್ಪೊರೇಟ್ ಮಂದಿಗೆ ಅದು ಬೇಕಾಗಿಯೂ ಇಲ್ಲ.

**42 ವರ್ಷ ಗಳಾದರೂ 'ಲೋಕಪಾಲ್' ಮಸೂದೆ**
**ಪಾಸಾಗಿಲ್ಲವೇಕೆ?- ಅಣ್ಣಾ ಹಜಾರೆ ಪ್ರಶ್ನೆ**

ಯುಪಿಎ-2 ಸರಕಾರದ ಪ್ರಧಾನಿಗಳ ಭ್ರಷ್ಟಸಹಿಷ್ಣುತನ ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹದೊಂದಿಗೆ ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತಿದೆ. ಯುಪಿಎ-2 ಸರಕಾರವನ್ನು ಸುತ್ತಿಕೊಂಡಿರುವ ಹಗರಣಗಳ ಸರಮಾಲೆಯ ಹಿನ್ನೆಲೆಯಲ್ಲಿ ಅಣ್ಣಾರವರ ಕಾರ್ಯಾಚರಣೆಗೆ ಹೆಚ್ಚೆಚ್ಚು ಬೆಂಬಲ ವ್ಯಕ್ತವಾಗುತ್ತಿದೆ.

'ಸ್ವತಂತ್ರ ಭಾರತದ ಕಳೆದ 62 ವರ್ಷಗಳಲ್ಲಿ ಒಂದು ಸ್ವತಂತ್ರ, ಪರಿಣಾಮಕಾರಿ ಭ್ರಷ್ಟಾಚಾರ-ವಿರೋಧಿ ವ್ಯವಸ್ಥೆಯನ್ನು ತರಲು ಆಗಿಲ್ಲ. ಕಳೆದ 42 ವರ್ಷಗಳಲ್ಲಿ ಎಂಟು ಬಾರಿ ಸಂಸತ್ತಿನ ಮುಂದೆ ಬಂದ ದುರ್ಬಲ 'ಲೋಕಪಾಲ ಮಸೂದೆ'ಯನ್ನು ಕೂಡ ಪಾಸು ಮಾಡಿಸಿಕೊಳ್ಳಲು ಆಗಿಲ್ಲ. ಭಾರತದ ಜನತೆ ಇನ್ನೆಷ್ಟು ಕಾಯಬೇಕು? ಆದರೆ ಈಗ ನಾಗರಿಕರ ಒತ್ತಡದಿಂದಾಗಿ ಈ ಮಸೂದೆಯನ್ನು ಪರಿಣಾಮಕಾರಿಯಾಗಿಸುವ ಬಗ್ಗೆ ಪರಿಶೀಲಿಸಲು ಯುಪಿಎ-2 ಸರಕಾರ ನೇಮಿಸಿದ




ಮಂತ್ರಿಗಳ ಗುಂಪಿನಲ್ಲಿರುವ ಕೆಲವರು ಇಂತಹ ಕಾನೂನು ಈ ಮೊದಲೇ ಇದ್ದರೆ ಸೆರೆಮನೆಯಲ್ಲಿ ಇರಬೇಕಾಗಿತ್ತು, ಇಂತವರು ತಯಾರಿಸುವ ಮಸೂದೆಯನ್ನು ನಂಬಲು ಸಾಧ್ಯವೇ?? ಎಂಬುದು ಅಣ್ಣಾ ಹಜಾರೆಯವರ ಪ್ರಶ್ನೆ. ಇದು ಬಹುಕಾಲದಿಂದ ಈ ದೇಶದ ಸಾಮಾನ್ಯ ನಾಗರಿಕರ ಪ್ರಶ್ನೆ ಕೂಡ.

**ಬ.ಕ.ಗಳಿಗೆ ಮತ್ತಷ್ಟು ರಿಯಾಯ್ತಿಗಳು**

ಅಣ್ಣಾ ಹರೆಯವರಿಂದಲೂ 'ಒಳ್ಳೆಯ ಮನುಷ್ಯ, ಶುದ್ಧಹಸ್ತರು' ಎಂದು ಸರ್ಟಿಫಿಕೇಟ್ ಪಡೆದಿರುವ ಯುಪಿಎ-2 ಪ್ರಧಾನಿಗಳ ಜನ-ವಿರೋಧಿ, ವಿದೇಶಿ ಬಂಡವಾಳದ ಪರವಾದ ನವ-ಉದಾರವಾದಿ ಒಲವುಗಳು ಮಾತ್ರ ಭ್ರಷ್ಟಾಚಾರ ಕುರಿತ ಅವರ ನಿಷ್ಕ್ರಿಯತೆಯ ನಡುವೆಯೂ ನಿರ್ಣಾಯಕವಾಗಿ ಮುಂದುವರೆಯುತ್ತಿವೆ. ಅವರ ಸರಕಾರ ಈ ಹಣಕಾಸು ವರ್ಷದಿಂದ ಜಾರಿಗೆ ತರಬೇಕೆಂದಿರುವ ವಿದೇಶಿ ನೇರ ಹೂಡಿಕೆ ನೀತಿ ಕುರಿತ '3ನೇ ಕ್ರೋಡೀಕೃತ ಎಫ್‌ಡಿಐ ಧೋರಣೆ'ಯ ಸುತ್ತೋಲೆ ಪ್ರಕಟವಾಗಿದ್ದು ಅದರಲ್ಲಿ ಬಹುರಾಷ್ಟ್ರೀಯ ಕಂಪನಿ(ಬ.ಕ.)ಗಳಿಗೆ ಇನ್ನಷ್ಟು ರಿಯಾಯ್ತಿಗಳನ್ನು ಘೋಷಿಸಲಾಗಿದೆ.

ಭಾರತೀಯ ಕಂಪನಿಗಳೊಂದಿಗೆ ಜಂಟಿ ಉದ್ಯಮದ ಹೆಸರಿನಲ್ಲಿ ಭಾರತವನ್ನು ಪ್ರವೇಶಿಸಿರುವ ಬಹುರಾಷ್ಟ್ರೀಯ ಕಂಪನಿಗಳು ಇನ್ನು ಮುಂದೆ ತಾವು ಜಂಟಿ ಉದ್ಯಮ ರಚಿಸಿರುವ ಕ್ಷೇತ್ರದಲ್ಲಿಯೇ ಸ್ವತಂತ್ರವಾಗಿ ಹೊಸ ಘಟಕಗಳನ್ನು ತಮ್ಮ ಭಾರತೀಯ ಪಾಲುದಾರರ ಅನುಮೋದನೆಯಿಲ್ಲದೆಯೇ ತೆರೆಯಬಹುದು, ತಮ್ಮ ಪಾಲುದಾರರನ್ನೂ ಬದಲಿಸಿಕೊಳ್ಳಬಹುದು. ಇದು ಭಾರತೀಯ ಆರ್ಥಿಕದಲ್ಲಿ ಭಾರತೀಯ ಕಂಪನಿಗಳ ಪಾತ್ರವನ್ನು ದುರ್ಬಲಗೊಳಿಸಿ ಬಹುರಾಷ್ಟ್ರೀಯ ಕಂಪನಿಗಳ ಹಿಡಿತವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಕೃಷಿ ವಯದಲ್ಲಂತೂ ಈ ಮೂಲಕ ಬೀಜಗಳು, ತೋಟಗಾರಿಕೆ ಮತ್ತು ನಾಟಿ ಸಾಮಗ್ರಿಗಳ ಅಭಿವೃದ್ಧಿಯಲ್ಲಿ ಯಾವುದೇ ನಿಯಂತ್ರಣಗಳಿಲ್ಲದೆ ಶೇ.100 ಎಫ್‌ಡಿಐ ಗೆ ಅವಕಾಶ ದೊರೆತು ಭಾರತದ ರೈತ ಬೀಜ ಪೂರೈಕೆಗೂ, ಸಾಗುವಳಿಗೂ ಈ ಬ.ಕ.ಗಳ ಮರ್ಜಿಗೆ ಒಳಪಡುವಂತಾಗುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಮತ್ತು ಇತರ ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಇವು ಅಸಮರ್ಥನೀಯ ರಿಯಾಯ್ತಿಗಳು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ. ನಮ್ಮ ಉದ್ದಿಮೆಗಳು ಮತ್ತು ಕೃಷಿಯ ಮೇಲೆ ಬಹಳಷ್ಟು ಪ್ರತಿಕೂಲ ಪರಿಣಾಮ ಬೀರುವ ಈ ಕ್ರಮಗಳನ್ನು ಕೈಬಿಡುವಂತೆ ಜನತೆ ಯುಪಿಎ-2 ಸರಕಾರದ ಮೇಲೆ ಒತ್ತಡ ತರಬೇಕು ಎಂಧು ಅದು ಕರೆ ನೀಡಿದೆ.

**ಅತ್ತ ಇರಾನ್ ತೈಲ, ಇತ್ತ ಅಮೆರಿಕ ಒತ್ತಡ**

ಇರಾನಿನಿಂದ ಭಾರತ ಆಮದು ಮಾಡುತ್ತಿರುವ ಕಚ್ಚಾ ತೈಲಕ್ಕೆ ಹಣ ಪಾವತಿ ಮಾಡುವುದು ಹೇಗೆ ಎಂಬ ಪ್ರಶ್ನೆ ಮತ್ತೆ ಯುಪಿಎ-2 ಸರಕಾರವನ್ನು ಬಾಧಿಸುತ್ತಿದೆ. ಕಳೆದ ಡಿಸೆಂಬರಿನಲ್ಲಿ ಏಶ್ಯನ್ ಕ್ಲಿಯರಿಂಗ್ ಯೂನಿಯನ್(ಎಸಿಯು) ವ್ಯವಸ್ಥೆಯನ್ನು ಹಿಂತೆಗೆದುಕೊಂಡಾಗ ಈ ಪ್ರಶ್ನೆಯೆದ್ದಿತ್ತು. ಇರಾನ್ ಮಾತ್ರ ಆಗಲೂ ತೈಲ ಪೂರೈಕೆಯನ್ನು ನಿಲ್ಲಿಸಲಿಲ್ಲ. ನಂತರ ಜರ್ಮನಿಯ ಹಾಂಬುರ್ಗ್‌ನಲ್ಲಿರುವ ಇರಾನೀ ಒಡೆತನದ ಇಐಹೆಚ್ ಬ್ಯಾಂಕ್ ಮೂಲಕ ಹಣ ಪಾವತಿ ಮಾಡುವ ವ್ಯವಸ್ಥೆ ಏರ್ಪಟ್ಟು ಈ ಮಾರ್ಚ್ ವೇಳೆಗೆ ಬಾಕಿಯಿದ್ದ 150 ಕೋಟಿ ಯುರೋಗಳಷ್ಟು ಹಣವನ್ನು ಸಂದಾಯ ಮಾಡಲಾಯಿತು. ಆದರೆ ಯುಪಿಎ ಸರಕಾರದ ಪರಮ ಮಿತ್ರ ಅಮೆರಿಕಾಕ್ಕೆ ಇದು ಇಷ್ಟವಾಗಲಿಲ್ಲ.

ಪುಟ 13 ಕ್ಕೆ

## ದಲೈಲಾಮ ಭದ್ರತೆಗೆ ಸರಕಾರ ಖರ್ಚು ಮಾಡುತ್ತಿರುವುದೆಷ್ಟು?

ಈ ಪ್ರಶ್ನೆಗೆ ಉತ್ತರ ಪಡೆಯಲು ಹಿಮಾಚಲ ಪ್ರದೇಶದ ಶಾಸಕರೊಬ್ಬರು ನಡೆಸಿದ ಪ್ರಯತ್ನವೂ ನಿಷ್ಫಲವಾಗಿದೆ. ಏಕೆಂದರೆ ಇದು ಈಗಲೂ, ದಲೈಲಾಮ ಇಲ್ಲಿಗೆ ಪರಾರಿಯಾಗಿ ಬಂದು ಆರು ದಶಕಗಳ ನಂತರವೂ, ಆತ 'ರಾಜಕೀಯದಿಂದ ನಿವೃತ್ತನಾಗುತ್ತಿದ್ದೇನೆ' ಎಂದ ಮೇಲೂ ಈಗಲೂ ಗುಪ್ತ ಸಂಗತಿಯಾಗಿಯೇ ಮುಂದುವರೆಯುತ್ತಿದೆ.

ಆ ರಾಜ್ಯದ ಧರ್ಮಸಾಲಾ ಎಂಬಲ್ಲಿ ದಲೈಲಾಮ ಗಡೀಪಾರಿನಲ್ಲಿ ರಚಿಸಿದ ಸರಕಾರಕ್ಕೆ ಇದುವರೆಗೂ ಯಾವ ದೇಶವೂ ಮಾನ್ಯತೆ ನೀಡಿಲ್ಲ. ಆದರೆ ಭಾರತ ಸರಕಾರದ ವಿವಿಧ ಏಜೆನ್ಸಿಗಳು ಇಲ್ಲಿಗೆ ಓಡಿ ಬಂದ 20 ಸಾವಿರಕ್ಕೂ ಹೆಚ್ಚು ಟಿಬೇಟಿಯನ್ನರಿಗೆ ಭದ್ರತೆ ಒದಗಿಸುತ್ತಿದ್ದು ಇದರಲ್ಲಿ ಬಹಳ ಭಾಗವನ್ನು ರಾಜ್ಯ ಸರಕಾರ ಹೊರಬೇಕಾಗಿದೆ, ಆದರೆ ಕೇಂದ್ರ ಸರಕಾರ ಈ ಖರ್ಚನ್ನು ಭರಿಸುತ್ತಿಲ್ಲ ಎಂದು ಸ್ವತಃ ಆ ರಾಜ್ಯದ ಮುಖ್ಯ ಮಂತ್ರಿಗಳು ದೂರಿದ್ದಾರೆ.

ಈಗ ಧರ್ಮಸಾಲದ ಸುತ್ತಮುತ್ತಲಲ್ಲಿರುವ 27542 ಟಿಬೇಟಿಯನ್ನರು ಗಡೀಪಾರಾಗಿ ಬಂದವರೇ ಅಥವ ನಮ್ಮ ಅತಿಥಿಗಳೇ ಎಂದು ಇತ್ತೀಚೆಗೆ ಆಂತರಿಕ ಭದ್ರತೆ ಕುರಿತ ಸಭೆಯಲ್ಲಿ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಕೇಳಿದ ಪ್ರಶ್ನೆಗೂ ಉತ್ತರ ಸಿಕ್ಕಿಲ್ಲವಂತೆ.

## ಬುಡಕಟ್ಟು ಪ್ರದೇಶಗಳಿಗೆ ಕೊಳೆತ ಧಾನ್ಯಗಳ ಪೂರೈಕೆ

ಸರಕಾರೀ ಏಜೆನ್ಸಿಗಳು ಬುಡಕಟ್ಟು ಜನಗಳಿಗೆ ಪೂರೈಸುತ್ತಿರುವ ಧಾನ್ಯಗಳು ಕೊಳೆತು ಹೋಗಿದ್ದು, ಅವುಗಳಲ್ಲಿ ಇಲಿಗಳ ಹಿಕ್ಕೆಗಳು ಸಿಕ್ಕಿವೆ. ಇದರ ಸ್ಯಾಂಪಲುಗಳನ್ನು ಸಿಪಿಐ(ಎಂ) ಸಂಸತ್ ಸದಸ್ಯೆ ಬೃಂದಾ ಕಾರಟ್ ಮಾರ್ಚ್ 31ರಂದು ಸಂಸತ್ತಿನಲ್ಲಿ ಪ್ರದರ್ಶಿಸಿದರು. ಬುಡಕಟ್ಟು ಜನಗಳ ಬದುಕಿಗೆ ಬೆಲೆಯಿಲ್ಲವೇ, ಇದನ್ನು ಕಳಿಸಿದ ಅಧಿಕಾರಿಗಳು ಇದನ್ನು ತಿನ್ನಬಲ್ಲರೇ, ದಯವಿಟ್ಟು ಇಂತಹ ಧಾನ್ಯಗಳನ್ನು ಬುಡಕಟ್ಟು ಪ್ರದೇಶಗಳಿಗೆ ಕಳಿಸದಂತೆ ನೋಡಿಕೊಳ್ಳಲು ಒಂದು ವಿಶೇಷ ವ್ಯವಸ್ಥೆ ಮಾಡಿ ಎಂದು ಅವರು ಸರಕಾರವನ್ನು ಆಗ್ರಹಿಸಿದರು. ಪ್ರತಿಪಕ್ಷಗಳ ಇನ್ನೂ ಹಲವು ಸದಸ್ಯರು ಅವರ ಈ ಆಗ್ರಹವನ್ನು ಬೆಂಬಲಿಸಿದರು.

# ವಿಶ್ವಕಪ್ ಕ್ರಿಕೆಟಿಗರಿಗೆ ಬಿ.ಡಿ.ಎ ಸೈಟು

## ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ



## ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಕೆಲವರು ಇದನ್ನು ತೊಘಲಕ್ ದರ್ಬಾರ್ ಅಂತ ಕರೀ ಬಹುದು. ನಾವು ಹಾಗೇ ಕರೆಯುವುದು ಕಷ್ಟ. ಯಾಕೆಂದರೆ ಹುಚ್ಚು ಹುಚ್ಚು ತೀರ್ಮಾನಗಳು ಅನ್ನುವ ಮಹಮದ್ ಬಿನ್ ತೊಘಲಕನ ತೀರ್ಮಾನಗಳು ಎಷ್ಟೋ ತೀರ್ಮಾನಗಳನ್ನು ಒಳ್ಳೆಯ ಉದ್ದೇಶದಿಂದ ಕೈಗೊಂಡುದುದಾಗಿತ್ತು ಎನ್ನುತ್ತಾರೆ ಬಲ್ಲವರು. 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಅಂತ ನೀವು ಕೇಳಿರುತ್ತೀರಿ. ಬಹುಶ: ನಮ್ಮ ಯಡಿಯೂರಪ್ಪನಂಥವ'ರನ್ನ ನೋಡಿಯೇ ಇಂಥ ಗಾದೆಗಳು ಹುಟ್ಟಿ ಕೊಂಡಿರಬಹುದು. ನಾವು ಅದೇ ಗಾದೇ ಮಾತನ್ನು ಬಳಸಿಕೊಳ್ಳ ಬಹುದು. ಇದು ಹೀಗೆ ಮುಂದುವರಿಯುತಿದ್ದರೆ ಬಹುಶ: ಯಡಿಯೂರಪ್ಪನವರ ದರ್ಬಾರ್ ಕುರಿತೆ ಹೊಸ ಗಾದೆಗಳು ಇನ್ನಷ್ಟು ಹುಟ್ಟಿಕೊಳ್ಳಬಹುದು. ಆಗ ನಮಗೆ ಹೆಚ್ಚು ಸಮಸ್ಯೆ ಆಗಲಾರದು.

ಹೌದು ನಮ್ಮ ಯಡಿಯೂರಪ್ಪನವರು ಇತ್ತೀಚಿಗೆ ವಿಶ್ವಕಪ್ ಗೆದ್ದ ಭಾರತದ ಕ್ರಿಕೆಟ್ ತಂಡದ ಎಲ್ಲ 14 ಸದಸ್ಯರಿಗೆ ಮತ್ತು ತರಬೇತಿದಾರರಿಗೆ 50X80 ಅಳತೆಯ ಬಿಡಿಎ ಸೈಟನ್ನು ಕೊಡುಗೆಯಾಗಿ ಕೊಡುವುದಾಗಿ ಘೋಷಿಸಿದ್ದಾರೆ. ವಿಶ್ವ ಕಪ್ ಗೆದ್ದ ಭಾರತದ ತಂಡದಲ್ಲಿ ಒಬ್ಬರಾದರೂ ಕರ್ನಾಟಕದವರಿಲ್ಲ. ಬಿಡಿಎ ಸೈಟು ಪಡೆದುಕೊಳ್ಳುವ ಪ್ರಾಥಮಿಕ ಅರ್ಹತೆ ಎಂದರೆ ಆ ವ್ಯಕ್ತಿ ಕರ್ನಾಟಕದಲ್ಲಿ ಕನಿಷ್ಠ ಹತ್ತು ವರ್ಷ ವಾಸವಿರಬೇಕು. ಇಲ್ಲವಾದರೆ ಸೈಟು ನೀಡಿಕೆ ಅಕ್ರಮವಾಗುತ್ತದೆ. ಯಡಿಯೂರಪ್ಪನವರು ಬಿಡುತ್ತಾರೆಯೇ !! ಬಿಡಿಎ ಕಾನೂನಿಗೇ ತಿದ್ದುಪಡಿ ತರುತ್ತೇನೆ ಅನ್ನುತ್ತಿದ್ದಾರೆ. ಈ ಮಧ್ಯೆ ಅವರಿಗೆ ಮತ್ತೊಂದು ಐಡಿಯಾ ಹೊಳೆದಿದೆ. ಬಿಡಿಎ ಸೈಟು ಹಂಚಲು ಕಾನೂನು ಅಡ್ಡ ಬರುತ್ತವೆಯೇ ? ಅದು ಬೇಡವೇ ಬೇಡ. ಒಂದು ಈ ಕ್ರಿಕೆಟ್ ಆಟಗಾರರಿಗೆ ಹೊಸ ಬಡಾವಣೆಯನ್ನೇ ನಿರ್ಮಿಸಿಕೊಡೋಣ ಅಂತಿದ್ದಾರೆ ಅವರು.

ಬೆಂಗಳೂರಿನಲ್ಲಿ ಆಟೋ ಚಾಲಕರು, ಬಿಜಾಪುರದಲ್ಲಿ ಲಾರಿ ಹಮಾಲರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹುಬ್ಬಳ್ಳಿ ನಗರದಲ್ಲಿ ಹಾಗೂ ದಕ್ಷಿಣ ಕನ್ನಡದಲ್ಲಿ ಇನ್ನು ಹೀಗೆ ಎಷ್ಟೋ ಜನ, ಬರಿ ಜನರಲ್ಲ ದುಡಿಯುವ ಜನ, ತಮ್ಮ ದುಡಿಮೆಯಿಂದ ಈ ಸಮಾಜದ ಸುಖ ಸಂತೋಷ ಹೆಚ್ಚಿಸುವ, ಜನರಿಗೆ ಒಂದಷ್ಟು ನೆಮ್ಮದಿ ನೀಡಿ ತಾವು ಮಾತ್ರ ಬೀದಿಯಲ್ಲೆ ಬಾಳ್ವೆ ಮಾಡುವ ಜನ ನಮಗಾಗಿ ಒಂದು ಬಡಾವಣೆ ಮಾಡಿ ಸೈಟು ಕೊಡಿ ಅಂದರೆ ವಿನಂತಿ ಮಾಡಿ ಮನವಿ ಪತ್ರ ಕೊಟ್ಟರೆ ಅದನ್ನು ....ಕೆಳಗೆ ಹಾಕಿಕೊಂಡು ಕುಳಿತು ಬಿಡುವ ನಮ್ಮ ಯಡಿಯೂರಪ್ಪನವರಿಗೆ ಕರ್ನಾಟಕದವರೊಬ್ಬರೂ ಇಲ್ಲದ ಕ್ರಿಕೆಟ್ಟಿಗರ ಮೇಲೆ ಅದೇನು ಪ್ರೀತಿಯೋ ?

ಇದೇ ಕರ್ನಾಟಕದಲ್ಲಿ ಕ್ರಿಕೆಟ್ ಅಲ್ಲದ ಬೇರೆ ಬೇರೆ ಕ್ರೀಡೆಗಳಲ್ಲಿ ಹಲವಾರು ಸಾಧನೆಗಳನ್ನು ಮಾಡಿರುವ ಹಲವಾರು ಕ್ರೀಡಾಪಟುಗಳು ಎಷ್ಟು ಜನ ಯಾವ ಯಾವ ಸ್ಥಿತಿಗಳಲ್ಲಿ ಬದುಕು ಸವೆಸುತ್ತಿದ್ದಾರೆ ಅನ್ನುವ ಬಗ್ಗೆ, ಕಾಳಜಿ ಬೇಡ- ಕನಿಷ್ಟ ಮಾಹಿತಿಯಾದರೂ ಯಡಿಯೂರಪ್ಪನವರಲ್ಲಿ ಇದೆಯಾ ?

2008 ರಲ್ಲಿ ಕರ್ನಾಟಕ ಸರ್ಕಾರ ಒಟ್ಟು 25 ಕ್ರೀಡಾಪಟುಗಳಿಗೆ ಬಿಡಿಎ ಸೈಟು ನೀಡುವುದಾಗಿ ಘೋಷಿಸಿದ್ದು ಅದರಲ್ಲಿ ಸೈಟು ಸಿಕ್ಕಿರುವುದು ಬರೀ ಇಬ್ಬರಿಗೆ ಮಾತ್ರ.

ತಲೆಯ ಮೇಲೆ ಬಹುಮಾನ, ಕೊಡುಗೆಗಳ ಸುರಿಮಳೆಯನ್ನೇ ಕಾಣುತ್ತಿರುವ ವಿಶ್ವಕಪ್ ಕ್ರಿಕೆಟಿಗರ ತಲೆಯ ಮೇಲೆ ಕರ್ನಾಟಕ ರಾಜ್ಯದ ಖಜಾನೆಯಿಂದ ಮತ್ತೆ 60 ಕೋಟಿ ರೂಪಾಯಿ ತೆಗೆದು ಸುರಿಯುವ ಬದಲಿಗೆ ರಾಜ್ಯದಲ್ಲಿ ಒಂದು ಘನತೆಯ ಹೊಸ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನ ನಡೆಸುತ್ತಿರುವ ದೇವದಾಸಿಯರ ಪುನರ್ ವಸತಿಗಾಗಿ ಅದನ್ನು ಯಾಕೆ ಖರ್ಚು ಮಾಡಬಾರದು. ಮಾಡಬಹುದು. ಹಾಗೆ ಮಾಡಬೇಕಾದವರಿಗೆ ಎದೆಯಲ್ಲಿ ಮಾನವೀಯತೆ ಅನ್ನುವ ಆದ್ರತೆ ಇರಬೇಕು. ಒಣ ಬಂಡೆಕಲ್ಲಿನಂತಹ ಎದೆಯಲ್ಲಿ ಇಂಥಾ ಆಲೋಚನೆಗೆ ಜಾಗವೆಲ್ಲಿ. ಎಷ್ಟಾದರೂ ಇದು ಬಿಜೆಪಿ ಸರ್ಕಾರ ಅನ್ನುವುದನ್ನು ನಾವಾದರೂ ಯಾಕೆ ಮರೆಯಬೇಕು ಅಲ್ಲವೇ?

(ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ಬಿಡಿಎ ಸೈಟು ಕೊಡುವ ಯೋಚನೆ ಕೈಬಿಟ್ಟು ತಲಾ 25 ಲಕ್ಷ ನೀಡುವ ಘನ ತೀರ್ಮಾನ ಕೈಗೊಂಡಿದ್ದಾರೆ ಯಡಿಯೂರಪ್ಪ)

## ಅರಣ್ಯ ಭೂಮಿ ಯಾರ ಬಾಯಿಗೆ



ಅವರು ಸಹಾಯಕ ಆಯುಕ್ತರು ಅರಣ್ಯ ಬೀಡುಗಳ ಅಧಿಕಾರಿ. ಎಲ್ಲಿ ಯಾವ ಜಿಲ್ಲೆ ಅಂತೀರಾ. ಜಿಲ್ಲೆ ಬಳ್ಳಾರಿ, ತಾಲ್ಲೂಕು ಸಂಡೂರು. ಬಳ್ಳಾರಿ ಜಿಲ್ಲೆಯ ಅರಣ್ಯಾಧಿಕಾರಿ ಅಂದ ಮೇಲೆ ಏನಾದರೂ ವಿಶೇಷ ಇರಲೇಬೇಕು ಅಲ್ಲವೇ? ಇದೇ ಇದೆ. ಇಗೋ ನೋಡಿ.

ತಾಲ್ಲೂಕಿನ ರಾಮಗಡ ಎಂಬಲ್ಲಿ ಅರಣ್ಯಕಾಯ್ದೆ 1963 ರಂತೆ ಅರಣ್ಯಭೂಮಿ ಎಂದು ಘೋಷಿಸಲಾದ 2,395.4 ಎಕರೆ ಜಮೀನಿದೆ. (ಕ್ಷಮಿಸಿ ಇತ್ತು) ಅದರಲ್ಲಿ ಒಟ್ಟು 265 ಎಕರೆ ಕಬ್ಬಿಣದ ಅದಿರಿನಿಂದ ಕೂಡಿದ ಸಂಪದ್ಭರಿತ ಭೂಮಿಯನ್ನು ಅರಣ್ಯ ಭೂಮಿಯ ವ್ಯಾಪ್ತಿಯಿಂದ ಕೈಬಿಟ್ಟಿದ್ದಾರೆ ನಮ್ಮ ಭೂಪತಿ ಸಹಾಯಕ ಆಯುಕ್ತರು. ಯಾಕೆ ಏನು ಅಂತ ನೋಡಿ:

ಆ ಜಮೀನನ್ನು ಗಣಿಗಾರಿಕೆಗೆ ಕೊಡಿ ಅಂತ ಗಣಿ ಲೂಟಿಕೋರರು ಹಲವಾರು ಜನ ಅರ್ಜಿ ಹಾಕಿಕೊಂಡಿದ್ದಾರಂತೆ. ಇದರ ವಾಸನೆ ಹಿಡಿದೋ ಏನೋ ಮೇ 21, 2010 ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಲೋಕಾಯುಕ್ತರಾದ ಯು.ವಿ.ಸಿಂಗ್ ಅವರು ಈ ಜಮೀನನ್ನು ಅರಣ್ಯ ಭೂಮಿ ವ್ಯಾಪ್ತಿಯಿಂದ ಹೊರತುಪಡಿಸಬಾರದು ಅಂತ ಲಿಖಿತ, ಸ್ಪಷ್ಟ ಆದೇಶ ನೀಡಿದ್ದಾರೆ. ಈ ಆದೇಶ ನೀಡಿದ ನಾಲ್ಕೇ ದಿನದಲ್ಲಿ ಅಂದರೆ ಮೇ 25, 2010 ರಂದು ಈ 265 ಎಕರೆ ಜಮೀನನ್ನು ಅರಣ್ಯ ಭೂಮಿ ವ್ಯಾಪ್ತಿಯಿಂದ ಹೊರತುಪಡಿಸಿ ಆದೇಶ ಹೊರಡಿಸಲಾಗಿದೆ. ಹೇಗಿದೆ ಕರಾಮತ್ತು.

ಅದು ಸರಿ, ಅಲ್ಲಿ ಗಣಿಗಾರಿಕೆ ನಡೆಸಲು ಕಾದು ಕುಳಿತಿರುವ ಸದ್ ಉದ್ಯಮಿಗಳಲ್ಲಿ ಯಾರ್ಯಾರು ಇದ್ದಾರೆಂದು ಒಮ್ಮೆ ನೋಡಿಬಿಡಿ. ಆನಂದ್‌ಸಿಂಗ್ ಬಿಜೆಪಿ ಎಂ.ಎಲ್.ಎ., ಅನಿಲ್ ಲಾಡ್, ಕಾಂಗ್ರೆಸ್ ಸಂಸದ, ಅವರ ಸಹೋದರ ರಜನಿ ಎಸ್ ಲಾಡ್, ಕೆ.ಎಸ್.ಎಲ್ ಸ್ವಾಮಿ ಎಂ.ಎಲ್.ಸಿ.... ಇನ್ನು ಒಟ್ಟೂ 14 ಜನರು... ಸಾಕಾ... ಇನ್ನು ವಿವರ ಬೇಕಾ...

## ಯುಪಿಎ ದರ್ಬಾರ್....

ಪುಟ 12ರಿಂದ

ಈ ಬ್ಯಾಂಕ್ ಅಮೇರಿಕಾದಲ್ಲಿ ನಿಷೇಧ ಎದುರಿಸುತ್ತಿರುವ ಬ್ಯಾಂಕ್. ಅರ್ಮನಿಯ ಮೇಲೆ ಅಮೆರಿಕಾ ತನ್ನ ಪ್ರಭಾವ ಬಳಸಿ ಈ ವ್ಯವಸ್ಥೆಯನ್ನೂ ನಿಲ್ಲಿಸುವಂತೆ ಮಾಡಿದೆ.

ಈ ಹಸ್ತಕ್ಷೇಪಕ್ಕೆ ತುಟಿಪಿಟಕ್ಕೆನ್ನದ ಯುಪಿಎ ಸರಕಾರ ಮುಂದೇನು ಮಾಡುವುದು ಎಂದು ತಲೆ ಕೆರೆದುಕೊಳ್ಳುತ್ತಿದೆ. ಈ ನಡುವೆಯೂ ಇರಾನ್ ಕಚ್ಚಾ ತೈಲ ಪೂರೈಕೆಯನ್ನು ನಿಲ್ಲಿಸಿಲ್ಲ. ಭಾರತ ಪ್ರತಿ ತಿಂಗಳು 4.2 ಕೋಟಿ ಬ್ಯಾರಲ್ ಕಚ್ಚಾ ತೈಲವನ್ನು ಇರಾನಿನಿಂದ ಆಮದುಮಾಡಿಕೊಳ್ಳುತ್ತಿದೆ. ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳಲ್ಲಿ ಸೌದಿ ಅರೇಬಿಯಾದ ನಂತರ ಇರಾನೇ ಬರುತ್ತದೆ. ನಮ್ಮ ಆಗತ್ಯದ 12ಶೇ. ಇರಾನಿನಿಂದಲೇ ಪೂರೈಕೆಯಾಗುತ್ತಿದೆ.

ಈ ನಡುವೆ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಸದಸ್ಯನಾಗಿರುವ ಭಾರತ ಅಮೆರಿಕಾದ ಪ್ರಭಾವದಿಂದ ಭದ್ರತಾ ಸಮಿತಿ ಕೈಗೊಂಡ ತೀರ್ಮಾನಕ್ಕೆ ತನ್ನ ಧೋರಣೆಯನ್ನು ಅನುವಾಗಿಸಲು ಇರಾನಿನ ಪರಮಾಣು ಕಾರ್ಯಕ್ರಮಕ್ಕೆ ನೆರವಾಗುವ ಎಲ್ಲ ಸರಕುಗಳು ಮತ್ತು ತಂತ್ರಜ್ಞಾನದ ವ್ಯಾಪಾರ-ವ್ಯವಹಾರಗಳ ಮೇಲೆ ನಿಷೇಧ ಹಾಕಿದೆ.

ಯುಪಿಎ ಸರಕಾರದಿಂದಾಗಿ ಅಮೆರಿಕಾದೊಂದಿಗೆ ಸಾಮರಿಕ ಮೈತ್ರಿಗೆ ಕಟ್ಟು ಬಿದ್ದ ಭಾರತ ಅಮೆರಿಕಾವನ್ನು ಸಂತುಷ್ಟಗೊಳಿಸಲು ತನ್ನ ದೀರ್ಘಕಾಲದ ಮಿತ್ರ ದೇಶ ಕುರಿತಂತೆ ಹಗ್ಗದ ಮೇಲೆ ನಡೆಯುವ ದುಸ್ಥಿತಿ ತಂದುಕೊಂಡಿದೆ.

**'ಮುಕ್ತ ಸ್ಪರ್ಧೆ'ಯ ಅಮೆರಿಕನ್ ಮಾದರಿ**

ಬುಶ್-ಮನಮೋಹನ್ ಸಿಂಗ್ ಆರಂಭಿಸಿದ ಭಾರತ-ಅಮೆರಿಕಾ ಸಾಮರಿಕ ಪಾಲುದಾರಿಕೆ ಯಿರುವಾಗ 11-12 ಬಿಲಿಯ(ಶತಕೋಟಿ) ಡಾಲರುಗಳ ಯುದ್ಧವಿಮಾನ ಕಾಂಟ್ರಾಕ್ಟ್ ತಮಗೇ ದಕ್ಕಬೇಕು ಎಂದು ಅಮೆರಿಕಾದ ಎರಡು ರಕ್ಷಣಾ ಉದ್ದಿಮೆ ವಲಯದ ಖಾಸಗೀ ಕಂಪನಿಗಳು ನಿರೀಕ್ಷಿಸುತ್ತಿವೆಯಂತೆ. ಬೇರೆ ಯುರೋಪಿಯನ್ ದೇಶಗಳ ತಮ್ಮ ಪ್ರತಿಸ್ಪರ್ಧಿಗಳಿಂದ ಮೇಲುಗೈ ಪಡೆಯಲು ಇದು ನೆರವಾಗಬೇಕು ಎಂಬುದು ಅವರ ಬಯಕೆ.

ಭಾರತ ತನ್ನ ಹಳೆಯದಾಗುತ್ತಿರುವ ತನ್ನ 126 ಮಿಗ್ ಯುದ್ಧವಿಮಾನಗಳನ್ನು ಬದಲಿಸಿ ಹೊಸದನ್ನು ಕೊಳ್ಳುತ್ತದೆಯೆಂಬ ಸುದ್ದಿ ಅಮೆರಿಕಾದ ಲಾಕ್‌ಹೀಡ್ ಮತ್ತು ಬೋಯಿಂಗ್ ಕಂಪನಿಗಳ ಬಾಯಲ್ಲಿ ನೀರೂರಿಸಿವೆ. ಇದನ್ನು ಹೇಗಾದರೂ ಗಿಟ್ಟಿಸಲು ರಾಜಕೀಯ ವಶೀಲಿಬಾಜಿ ನಡೆಸುತ್ತಿವೆ. ಯುರೋಪಿನ ಯುರೋಫೈಟರ್, ಫ್ರಾನ್ಸಿನ ಡಸಾಲ್ಟ್, ಸ್ವೀಡನ್ನಿನ ಸಾಬ್ ಮತ್ತು ರಶ್ಯಾದ ಅರೆಸ್ಕೆ ಮಿಗ್ ನಿಂದ ಇವು ಪ್ರಬಲ ಪ್ರತಿಸ್ಪರ್ಧೆ ಎದುರಿಸುತ್ತಿವೆ.

ಬೇರೆಯವರಿಗೆ ಮುಕ್ತ ಸ್ಪರ್ಧೆಯ ಉಪದೇಶ ಕೊಡುವ ಅಮೆರಿಕಾದ ಈ ಎರಡು ಕಂಪನಿಗಳು ಇಲ್ಲಿ ಮಾತ್ರ ಪ್ರತಿಸ್ಪರ್ಧಿಗಳಿಂದ ತಪ್ಪಿಸಿಕೊಳ್ಳಲು ರಾಜಕೀಯ ವ್ಯವಹಾರಗಳ ಮೊರೆ ಹೋಗಿದ್ದಾರೆ. 'ಇಲ್ಲಿ ಬೆಲೆ ಮುಖ್ಯವಲ್ಲ, ಇದು ಭೌಗೋಳಿಕ ರಾಜಕೀಯ' ಎನ್ನುತ್ತಾರೆ ಬುಶ್-ಮನಮೋಹನ್ ಸಿಂಗ್ ಕೃಪಾಪೋಷಣೆಯಲ್ಲಿ ರಚನೆಗೊಂಡ ಭಾರತ-ಅಮೆರಿಕಾ ವ್ಯವಹಾರ ಮಂಡಳಿಯ ಅಧ್ಯಕ್ಷ ರೋನ್ ಸಾಮರ್ಸ್.

## ಜಗದಗಲ

ಶರತ್‌ಚಂದ್ರ

# ಬಾಂಗ್ಲಾದೇಶ 40ನೇ ಸ್ವಾತಂತ್ರ್ಯ ಉತ್ಸವ

**ಮಾರ್ಚ್** 26 ರಂದು ಬಾಂಗ್ಲಾದೇಶ ತನ್ನ 40 ನೇ ಸ್ವಾತಂತ್ರ್ಯ ಉತ್ಸವವನ್ನು ಸಂಭ್ರಮದಿಂದ ಆಚರಿಸಿತು. 1947 ಆಗಸ್ಟ್ 15 ರಂದು ಬ್ರಿಟಿಷರಿಂದ ಭಾರತದ ಸ್ವಾತಂತ್ರ್ಯದ ಭಾಗವಾಗಿ ಆಗ ಪೂರ್ವ ಪಾಕಿಸ್ತಾನ ಎಂದು ಕರೆಯಲ್ಪಟ್ಟ ಈ ದೇಶ ಸ್ವತಂತ್ರವಾಗಿತ್ತು. ಆದರೆ (ಅವಿಭಜಿತ) ಪಾಕಿಸ್ತಾನದ ಅಮೆರಿಕನ್ ಬೆಂಬಲದ ಮಿಲಿಟರಿ



ಸರ್ವಾಧಿಕಾರಿಗಳಿಂದ ವಿಮೋಚನೆಯನ್ನು ಬಾಂಗ್ಲಾದೇಶ ತನ್ನ ಸ್ವಾತಂತ್ರ್ಯ ದಿನವಾಗಿ ಆಚರಿಸುತ್ತದೆ. 1947 ರ ನಂತರ ಪಶ್ಚಿಮ ಪಾಕಿಸ್ತಾನದ ನಾಯಕರ ಮಿಲಿಟರಿ ಸರ್ವಾಧಿಕಾರಗಳ ಆಧಿಪತ್ಯಕ್ಕೆ ಒಳಗಾಗಿ ಬಹುಸಂಖ್ಯಾತರಾದರೂ ಪೂರ್ವ ಪಾಕಿಸ್ತಾನದ ಬಂಗಾಲಿಗಳು ಎರಡನೇ ದರ್ಜೆಯ ಪ್ರಜೆಗಳಾಗಬೇಕಾಯಿತು. ಇದರ ವಿರುದ್ಧ 1950 ರಲ್ಲೇ ಆರಂಭವಾದ ಭಾಷಾ ಚಳುವಳಿ, 1960-1970 ರಲ್ಲಿ ವ್ಯಾಪಕ ಪ್ರಜಾಸತ್ತಾತ್ಮಕ ಚಳುವಳಿಯಾಗಿ ಬೆಳೆಯಿತು. 1970 ರಲ್ಲಿ ಜನತಾ ಚಳುವಳಿಯ ಒತ್ತಡದಿಂದ ನಡೆದ ಚುನಾವಣೆಯಲ್ಲಿ ಬಹುಮತ ಗಳಿಸಿದ ಶೇಕ್ ಮುಜಿಬುರ್ ರಹಮಾನ್ ಅವರ ಅವಾಮಿ ಲೀಗಿಗೆ ಸರ್ಕಾರ ರಚಿಸಲು ಅವಕಾಶ ಕೊಡಲಿಲ್ಲ.

ಶೇಕ್ ಅವರು ಮಾರ್ಚ್ 7, 1971 ರಂದು ಎರಡನೇ ಸ್ವಾತಂತ್ರ್ಯ ಹೋರಾಟಕ್ಕೆ ಕರೆ ಕೊಟ್ಟರು. ಮಾರ್ಚ್ 25 ರಂದು ಶೇಕ್ ಅವರನ್ನು ಬಂಧಿಸಿ ಜನತೆಯ ಮೇಲೆ ದಮನ ಚಕ್ರ ಹರಿಯ ಬಿಡಲಾಯಿತು. ಇದರ ವಿರುದ್ಧ ಅವಾಮಿ ಲೀಗ್ "ಮುಕ್ತಿ ಬಾಹಿನಿ" ಎಂಬ ಸಶಸ್ತ್ರ ವಿಮೋಚನಾ ಪಡೆ ಸಂಘಟಿಸಿತು. ಈ ಹೋರಾಟಕ್ಕೆ ಭಾರತದ ಜನತೆ ಮತ್ತು ಸರ್ಕಾರ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರೋಧ ಲೆಕ್ಕಿಸದೆ, ಎಲ್ಲಾ ರೀತಿಯ ಬೆಂಬಲ ನೀಡಿದವು. ಒಂಬತ್ತು ತಿಂಗಳ ದಿಟ್ಟ ಅಗಣಿತ ತ್ಯಾಗ ಬಲಿದಾನಗಳ ರಕ್ತ ಸಿಕ್ತ ಹೋರಾಟ ನಡೆಯಿತು. ಡಿಸೆಂಬರ್ 16 ರಂದು ಪೂರ್ವ ಪಾಕಿಸ್ತಾನದ ಸೈನ್ಯ ಮುಕ್ತಿ ಬಾಹಿನಿ ಮತ್ತು ಭಾರತೀಯ ಸೈನ್ಯದ ಸಂಯುಕ್ತ ಶಕ್ತಿಗೆ ಶರಣಾಯಿತು.

ಕಳೆದ 40 ವರ್ಷಗಳಲ್ಲಿ ಬಾಂಗ್ಲಾದೇಶ ತನ್ನದೇ ಮಿಲಿಟರಿ ಸರ್ವಾಧಿಕಾರಿಗಳಿಂದ, ಅಮೆರಿಕನ್ ಮೂಗು ತೂರಿಸುವಿಕೆ ಮತ್ತು ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳಿಂದ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಎದುರಿಸಿದೆ. ರಾಷ್ಟ್ರಪಿತ ಶೇಕ್ ಅವರೇ ಈ ಶಕ್ತಿಗಳಿಗೆ ಬಲಿಯಾದರು. ಹಲವು ವರ್ಷಗಳ ಹೋರಾಟದ ನಂತರ 2008 ರಲ್ಲಿ ಅವಾಮಿ ಲೀಗ್ ಶೇಕ್ ಪುತ್ರಿ ಹಸಿನಾ ನಾಯಕತ್ವದಲ್ಲಿ ಪುನಃ ಅಧಿಕಾರಕ್ಕೆ ಬಂದು ಪ್ರಜಾಪ್ರಭುತ್ವ ಪುನಃಸ್ಥಾಪನೆಯ ಕಾಯಕ ಕೈಗೊಂಡಿದೆ. ಜಾತ್ಯತೀತತೆಯನ್ನು ದೇಶದ ಸಂವಿಧಾನದ ಅಸ್ತಿಭಾರವಾಗಿ ಪುನಃಸ್ಥಾಪಿಸಲು ಮುಂದಾಗಿದೆ. ಮೂಲಭೂತವಾದಿಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗಿದೆ. ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಭಾಗವಹಿಸಿ ಜನತೆಯ ವಿರುದ್ಧ ಅಪರಾಧ ಎಸಗಿದ ಮಿಲಿಟರಿ ಅಧಿಕಾರಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಬಾಂಗ್ಲಾದೇಶದ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಜನತೆಯ ವಿರುದ್ಧ ತೀವ್ರ ಯುದ್ಧ ಅಪರಾಧಗಳು ಜರುಗಿದವು. ಈ ಯುದ್ಧದ ಭಾಗವಾಗಿ 30 ಲಕ್ಷ ಜನ ಸತ್ತರು. 2 ಲಕ್ಷ ಮಹಿಳೆಯರ ಮೇಲೆ ಅತ್ಯಾಚಾರ ನಡೆಯಿತು. ಒಂದು ಕೋಟಿ ಜನ ನಿರಾಶ್ರಿತರಾಗಿ ದೀರ್ಘ ಕಾಲ ಭಾರತದ ನಿರಾಶ್ರಿತ ಕ್ಯಾಂಪುಗಳಲ್ಲಿ ವಾಸಿಸಬೇಕಾಯಿತು. ಮಿಲಿಟರಿ ಸರ್ಕಾರದ ಜತೆ ಶಾಮೀಲಾಗಿ ಇಂತಹ ಯುದ್ಧ ಅಪರಾಧ ಎಸಗಿದವರ ವಿರುದ್ಧ ವಿಚಾರಣೆಗೆ ಟ್ರಿಬ್ಯೂನಲ್ ರಚಿಸಲಾಗಿದೆ. ಭಾರತ ಸೇರಿದಂತೆ ಎಲ್ಲಾ ನೆರೆಯ ದೇಶಗಳ ಜತೆ ಸೌಹಾರ್ದ ಸಂಬಂಧ ಸ್ಥಾಪಿಸಲು ಮುಂದಾಗಿದೆ. ಅಮೆರಿಕದ ಬಾಲಬಡುಕ ವಿದೇಶ ನೀತಿಯಿಂದ ದೂರ ಸರಿದು ಈ ಎಲ್ಲಾ ಅಂಶಗಳಿಂದ 40 ನೇ ಸ್ವಾತಂತ್ರ್ಯ ಉತ್ಸವ ವಿಶೇಷವಾದದ್ದು. ದೇಶದ ಆದ್ಯಂತ ವಿಶೇಷ ಉತ್ಸಾಹ ಸಂಭ್ರಮದಿಂದ ಅದನ್ನು ಆಚರಿಸಲಾಯಿತು. 1971 ರ ವಿಮೋಚನಾ ಹೋರಾಟದ ಹುತಾತ್ಮರ ವಿಶೇಷ ನೆನಕೆ ಈ ಬಾರಿಯ ವಿಶೇಷವಾಗಿತ್ತು. ಢಾಕ್ಕಾದಲ್ಲಿ ಮತ್ತು ಇತರ ಹಲವು ಪಟ್ಟಣಗಳಲ್ಲಿ ಹುತಾತ್ಮರ ಸ್ಮಾರಕಗಳಲ್ಲಿ ಪುಷ್ಪಾರ್ಪಣೆ, ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಮಾರ್ಚಿನಿಂದ ಮುಂದಿನ ಮಾರ್ಚ ವರೆಗೆ ನಡೆಯಲಿರುವ 40 ನೇ ಸ್ವಾತಂತ್ರ್ಯ ಉತ್ಸವದಲ್ಲಿ ಬಾಂಗ್ಲಾದೇಶದ ವಿಮೋಚನಾ ಹೋರಾಟಕ್ಕೆ ವಿವಿಧ ರೀತಿಯಲ್ಲಿ ಕೊಡುಗೆ ನೀಡಿದ 226 ಭಾರತೀಯರು, ಹಲವು ಪಾಕಿಸ್ತಾನಿಗಳು ಸೇರಿದಂತೆ 500 ವಿದೇಶಿಯರನ್ನು ಗೌರವಿಸಲಾಗುವುದು. ಬಾಂಗ್ಲಾದೇಶದ ಗೌರವ ನಾಗರಿಕತ್ವ ಮತ್ತು ಚಿನ್ನದ ಪದಕಗಳನ್ನು ನೀಡಲಾಗುವುದು. ಇಂದಿರಾ ಗಾಂಧಿ, ಜ್ಯೋತಿ ಬಸು, ಕೃಷ್ಣ ಮೆನನ್, ಸ್ವರಣ್ ಸಿಂಗ್, ಫೀಲ್ಡ್ ಮಾರ್ಶಲ್ ಮಾನೆಕ್ಶಾ, ಲೆ.ಜ. ಜಗಜೀತ್ ಸಿಂಗ್ ಅರೋರಾ, ಸತ್ಯಜೀತ್ ರಾಯ್, ಬಿಶ್ನು ದೇ, ಮನ್ನಾ ದೇ, ಮಹಮ್ಮದ್ ರಫಿ. ಬಾಂಗ್ಲಾದೇಶದ ವಿಮೋಚನಾ ಹೋರಾಟಕ್ಕೆ ಮಡಿದ ಭಾರತೀಯ ಸೈನ್ಯದ ಯೋಧರಿಗೆ ಒಂದು ವಿಶೇಷ ಸ್ಮಾರಕ ನಿರ್ಮಿಸಲಾಗುವುದು.

## ಅಮೆರಿಕಕ್ಕೆ ಮಣಿಯದ ಸ್ವಾಭಿಮಾನಿ ಹಸೀನಾ

(ದಿ ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಸುಭೀರ್ ಭೌಮಿಕ್ ಅವರ ಲೇಖನದ ಆಯ್ದ ಭಾಗ, ಕನ್ನಡ ಅನುವಾದ ಕೃಪೆ: ಪ್ರಜಾವಾಣಿ ಎಪ್ರಿಲ್ 3)

ಪ್ರಧಾನಿ ಶೇಖ್ ಹಸೀನಾ ವಾಜಿದ್ (ದಿ. ಮುಜೀಬುರ್ ರೆಹ್ಮಾನರ ಪುತ್ರಿ) ಅವರಂತೂ 1972ರ ಸಂವಿಧಾನವನ್ನು ಅಕ್ಷರಶಃ ಜಾರಿಗೆ ತರಲು ಶತಪ್ರಯತ್ನ ಮಾಡುತ್ತಿದ್ದಾರೆ. ಇದು ಸುಲಭವಲ್ಲ ಎಂದು ಅವರಿಗೂ ಗೊತ್ತು. ಏಕೆಂದರೆ ಅವರ ಹತ್ಯೆಗೆ ಆಗಾಗ ಪ್ರಯತ್ನ ನಡೆಯುತ್ತಿದೆ. ಆದರೂ ಎದೆಗುಂದಿಲ್ಲ.

ಆದರೆ, ಹಸೀನಾ ಜನತಂತ್ರ ಮತ್ತು ಜಾತ್ಯತೀತತೆ ಮರುಸ್ಥಾಪನೆಗೆ ನಡೆಸುತ್ತಿರುವ ಯತ್ನದಲ್ಲಿ ಇತ್ತೀಚೆಗೆ ಅಮೆರಿಕ ಅನವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತಿರುವುದು ಕಿರಿಕಿರಿಗೆ ಕಾರಣವಾಗಿದೆ. ನೊಬೆಲ್ ಪ್ರಶಸ್ತಿ ವಿಜೇತ, ಕಿರು ಹಣಕಾಸು ಸಾಲ ಯೋಜನೆಯ ರೂವಾರಿ ಮೊಹಮ್ಮದ್ ಯೂನುಸ್ ಅವರನ್ನು ಬಾಂಗಾದೇಶ ಗ್ರಾಮೀಣ ಬ್ಯಾಂಕ್ ಅಧ್ಯಕ್ಷರಾಗಿ ಮರು ನೇಮಕ ಮಾಡುವಂತೆ ಅಮೆರಿಕ ಒತ್ತಡ ಹೇರಿದರೂ ಜಪ್ಪೆಂದಿಲ್ಲ. ಇದರಿಂದ ತೀವ್ರ ಅಸಮಾಧಾನಗೊಂಡ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಬಾಂಗ್ಲಾದೇಶ ಭೇಟಿಯನ್ನು ರದ್ದು ಮಾಡಿದ್ದಾರೆ. ಈ ತಿಂಗಳ ಕೊನೆಗೆ ವಿಶ್ವ ಇಸ್ಲಾಮಿಕ್ ವೇದಿಕೆ ಸಭೆಯಲ್ಲಿ ಪಾಲ್ಗೊಳ್ಳಲು ವಾಷಿಂಗ್ಟನ್‌ಗೆ ಬಂದಿಳಿಯುವ ಹಸೀನಾ ಅವರನ್ನು ಅಧ್ಯಕ್ಷ ಒಬಾಮಾ ಭೇಟಿ ಮಾಡುತ್ತಿಲ್ಲ. ಇದ್ಯಾವುದರಿಂದಲೂ ಆಕೆ ವಿಚಲಿತರಾಗಿಲ್ಲ.

ಅಷ್ಟಕ್ಕೂ ಯೂನುಸ್ ಏನೂ ಕಮ್ಮಿಯಿಲ್ಲ. ಸರ್ಕಾರಕ್ಕೂ ಕೂಡ ತಿಳಿಸದೆ, ಗಪ್‌ಚುಪ್ಪಾಗಿ ನಾರ್ವೆಯಿಂದ ತಮ್ಮ ಬ್ಯಾಂಕ್‌ಗೆ 480 ಲಕ್ಷ ನಾರ್ವೆಜಿಯನ್ ಪೌಂಡ್ ನೆರವು ಪಡೆದುಕೊಂಡಿದ್ದಾರೆ. ಇದು ಕಳೆದ ನವೆಂಬರ್‌ನಲ್ಲಿ ಬೆಳಕಿಗೆ ಬಂದ ನಂತರ ಸರ್ಕಾರ ಮತ್ತು ಮಾಧ್ಯಮಗಳು ಅವರ ವಿರುದ್ಧ ಗರಂ ಆಗಿವೆ. ಹಸೀನಾ ಅವರಂತೂ ಯೂನುಸ್‌ರನ್ನು 'ರಕ್ತ ಹೀರುವ ಜಿಗಣೆ' ಎಂದು ತರಾಟೆಗೆ ತೆಗೆದುಕೊಂಡು ನಿವೃತ್ತಿಗೆ ಆದೇಶಿಸಿದ್ದಾರೆ.



ನಿಯಮಾವಳಿಯಂತೆ ತನ್ನ ಅನುಮತಿ ಪಡೆಯದೇ ಇರುವುದಕ್ಕಾಗಿ ಯೂನುಸ್ ಅವರು ಗ್ರಾಮೀಣ ಬ್ಯಾಂಕ್ ಅಧ್ಯಕ್ಷ ಸ್ಥಾನ ತೆರವು ಮಾಡಬೇಕು ಎಂದು ಬಾಂಗ್ಲಾದೇಶ ಕೇಂದ್ರೀಯ ಬ್ಯಾಂಕ್ ಆದೇಶ ಹೊರಡಿಸಿ ಜಾರಿಗೆ ತಂದಿದೆ. 12 ವರ್ಷ ಸುಮ್ಮನಿದ್ದು ಈಗ ತನ್ನ ಮೇಲೆ ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ ಎಂದು ವಾದಿಸುತ್ತಿರುವ ಯೂನುಸ್ ಕೋರ್ಟ್ ಮೆಟ್ಟಿಲೇರಿದ್ದಾರೆ. ವಿಷಯ ಈಗ ಸುಪ್ರೀಂ ಕೋರ್ಟ್ ಅಂಗಳದಲ್ಲಿದೆ. ಆದರೆ ಅದರ ತೀರ್ಪಿಗೆ ಕಾಯದೇ ಯೂನುಸ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಮರು ನೇಮಕ ಮಾಡುವಂತೆ ಹಸೀನಾ ಸರ್ಕಾರದ ಮೇಲೆ ಅಮೆರಿಕ ಒತ್ತಡ ಹೇರುತ್ತಿದೆ. ಕಾನೂನಿನ ಆಡಳಿತವೇ ಶ್ರೇಷ್ಠ ಎಂದು ವಿಶ್ವದೆಲ್ಲೆಡೆ ಡೊಂಬಡಾ ಬಜಾಯಿಸುವ ಅಮೆರಿಕ, ಬಾಂಗ್ಲಾದೇಶದ ನ್ಯಾಯಾಂಗ ಪದ್ಧತಿಗೆ ಕೊಡುತ್ತಿರುವ ಗೌರವ ಇದು. ಅದರ ಎಡಬಿಡಂಗಿ ನೀತಿಗೆ ಬೇರೆ ಕನ್ನಡಿ ಬೇಕೆ?

ರಾಜಕೀಯ ಕಾರಣಕ್ಕಾಗಿ ಗ್ರಾಮೀಣ ಬ್ಯಾಂಕನ್ನು ಕೈವಶ ಮಾಡಿಕೊಳ್ಳಲು ಸರ್ಕಾರ ಈ ರೀತಿ ಇಲ್ಲ ಸಲ್ಲದ ಕುತಂತ್ರ ನಡೆಸುತ್ತಿದೆ ಎನ್ನುವುದು ಯೂನುಸ್ ಆರೋಪ. ಆದರೆ ತಾನು ಹೈಕೋರ್ಟ್ ಆದೇಶವನ್ನು ಪಾಲಿಸುತ್ತಿದ್ದೇನೆ ಎನ್ನುವುದು ಸರ್ಕಾರದ ಸಮರ್ಥನೆ. ಒಂದಂತೂ ನಿಜ. 2007ರಲ್ಲಿ ನೊಬೆಲ್ ಪ್ರಶಸ್ತಿ ಬಂದ ನಂತರ ಯೂನುಸ್ ರಾಜಕೀಯ ಪಕ್ಷವೊಂದನ್ನು ಹುಟ್ಟು ಹಾಕಲು ಯತ್ನಿಸಿದ್ದರು. ರಾಜಕೀಯ ಭ್ರಷ್ಟಾಚಾರ ತೊಡೆದು ಹಾಕುವುದು

ಪುಟ 15 ಕ್ಕೆ

# ಸ್ವದೇಶಕ್ಕೆ ಸ್ವಾಗತ !

ಪುಟ 16 ರಿಂದ

ಕಿರುಚುವಿಕೆ ನನ್ನನ್ನು ತಟ್ಟನೆ ಪುಸ್ತಕ ಪ್ರಪಂಚದಿಂದ ವಾಸ್ತವಕ್ಕೆಳೆದೊಗೆದು ಭಯದಿಂದ ಮೆಟ್ಟಿಬೀಳುವಂತೆ ಮಾಡಿಬಿಡುತ್ತಿತ್ತು. ಬಾವಲಿಗಳ ಹಾವಳಿಯಿಂದ ನಾನು ಮರೆಯಲೆತ್ನಿಸುತ್ತಿದ್ದ ಅಯೋಮಯ ಪ್ರಪಂಚ ನನ್ನನ್ನು ಬಿಡದೆ ಆವರಿಸಿ ಕಂಗಾಲು ಮಾಡುತ್ತಿತ್ತು. ನನ್ನ ಸ್ಥಿತಿಯ ಬಗ್ಗೆ ನನಗೇ ವಿಪರೀತ ಸಿಟ್ಟುಬರುತ್ತಿತ್ತು. ಆದರೆ ಬೀದಿಯಲ್ಲಿ ಬೀಳುವುದಕ್ಕಿಂತ ಈ ದರಿದ್ರ ಜಾಗದಲ್ಲಿರುವುದು ಮೇಲು. ತಲೆ ಮೇಲೆ ಒಂದು ಸೂರಾದರೂ ಇದೆ ಎಂದು ಸಮಾಧಾನ ಹೇಳಿಕೊಂಡು ನನ್ನ ದುಃಖ ವ್ಯಗ್ರತೆಗಳನ್ನು ಶಮನ ಮಾಡಿಕೊಳ್ಳುತ್ತಿದ್ದೆ. ನನ್ನ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿತ್ತೆಂದರೆ, ಬಾಂಬೆಯಲ್ಲಿ ಬಿಟ್ಟುಬಂದಿದ್ದ ನನ್ನ ಬಾಕಿ ಸಾಮಾನುಗಳನ್ನು ಮುಟ್ಟಿಸಲು ಬಂದಿದ್ದ ನನ್ನ ಸೋದರಿಯ ಮಗ ನನ್ನ ಪಾಡು ಕಂಡು ಜೋರಾಗಿ ಅಳಲು ಶುರುವಿಟ್ಟುಕೊಂಡ; ಅವನನ್ನು ಸಮಾಧಾನಪಡಿಸಿ ತಕ್ಷಣವೇ ಊರಿಗೆ ವಾಪಾಸು ಕಳಿಸಬೇಕಾಯ್ತು. ಹೀಗೆ ನಾನು ಪಾರ್ಸಿ ವಸತಿಗೃಹದಲ್ಲಿ ಬೇನಾಮಿ ಪಾರ್ಸಿಯಾಗಿ ಬದುಕುತ್ತಿದ್ದೆ.

ಆದರೆ, ನನ್ನ ಆಟ ಬಹಳ ದಿನ ನಡೆಯದು. ಒಂದಲ್ಲ ಒಂದು ದಿವಸ ನನ್ನ ನಿಜವಾದ ಬಣ್ಣ ಬಯಲಾಗುತ್ತದೆ ಎಂದು ನನಗೆ ತಿಳಿದಿತ್ತು. ಅದಕ್ಕಾಗಿ ಸರಕಾರಿ ವಸತಿಗೃಹವನ್ನು ಪಡೆಯಲು ಪ್ರಯತ್ನ ನಡೆಸಿದ್ದೆ. ಆದರೆ ನನ್ನ ಮನವಿಯ ಬಗ್ಗೆ ನನಗಿರುವಷ್ಟು ತುರ್ತು ಮಹಾರಾಜರ ಮುಖ್ಯಮಂತ್ರಿಗಳಿರಲಿಲ್ಲ. ನನ್ನ ಅರ್ಜಿ ಒಬ್ಬ ಅಧಿಕಾರಿಯ ಕೈಯಿಂದ ಮತ್ತೊಬ್ಬನ ಕೈಗೆ ಓಡಾಡುತ್ತ, ಅಧಿಕೃತ ಪರವಾನಿಗೆ ದೊರೆಯುವುದಕ್ಕೆ ಮುಂಚೆಯೇ, ಗಂಡಾಂತರ ನನ್ನ ಮೇಲೆರಗಿತು.

ಅಂದು, ನನ್ನ ಪಾರ್ಸಿ ವಸತಿಗೃಹ ವಾಸದ ಹನ್ನೊಂದನೇ ದಿನ. ಬೆಳಗಿನ ಊಟ ಮುಗಿಸಿ, ಆಫೀಸಿಗೆ ಹೊರಡಲು ಸಜ್ಜಾಗಿದ್ದೆ. ಹಿಂದಿನ ದಿನ ಗ್ರಂಥಾಲಯದಿಂದ ತಂದಿದ್ದ ಪುಸ್ತಕಗಳನ್ನು ಹಿಂದಿರುಗಿಸುವ ಸಲುವಾಗಿ ಒಟ್ಟು ಮಾಡುತ್ತಿದ್ದೆ. ಆಗ, ಹತ್ತಾರು ಜನ ಒಟ್ಟಿಗೆ ಮಾಳಿಗೆ ಮೆಟ್ಟಿಲುಗಳನ್ನು ಹತ್ತಿತ್ತಿರುವ ಸದ್ದು ಕೇಳಿತು. ಯಾರೋ ವಸತಿ ಅರಸಿ ಬಂದ ಪ್ರವಾಸಿಗರಿರಬೇಕು ಎಂದೆಣಿಸಿ, ನೋಡಲೆಂದು ಕೋಣೆಯ ಬಾಗಿಲಿಗೆ ಬಂದೆ. ತಕ್ಷಣವೇ, ಹತ್ತು ಹನ್ನೆರಡು ಭೀಮಕಾಯದ ಪಾರ್ಸಿಗಳು ಕೈಯಲ್ಲಿ ಬಡಿಗೆಗಳನ್ನು ಹಿಡಿದು ನನ್ನ ಕೋಣೆಯತ್ತ ಬರುತ್ತಿರುವುದು ಕಂಡಿತು. ಅವರು ಪ್ರವಾಸಿಗರಲ್ಲ ಎಂದು ಅರ್ಥವಾಗಲಿಕ್ಕೆ ಬಹಳ ಹೊತ್ತೇನೂ ಹಿಡಿಯಲಿಲ್ಲ. ಅವರು ಸಾಲಾಗಿ ನನ್ನ ಕೋಣೆಯ ಮುಂದೆ ನಿಂತು 'ಯಾರು ನೀನು? ಇಲ್ಲಿಗೇಕೆ ಬಂದಿದ್ದೀಯ? ಪಾರ್ಸಿ ಎಂದು ಹೇಳಿಕೊಳ್ಳಲು ನಿನಗೆಷ್ಟು ಧೈರ್ಯ? ಭಂಡ ಬಡ್ಡಿಮಗನೆ! ನೀನು ಪಾರ್ಸಿ ವಸತಿಗೃಹವನ್ನು ಅಪವಿತ್ರಗೊಳಿಸಿದ್ದೀಯಾ' ಎಂದು ಪ್ರಶ್ನೆ, ಬೈಗುಳಗಳ ಸುರಿಮಳೆ ಸುರಿಸತೊಡಗಿದರು. ನಾನು ಮೂಕವಾಗಿ ನಿಂತುಬಿಟ್ಟಿದ್ದೆ. ನನ್ನ ಆಟವನ್ನು ಮುಂದುವರೆಸುವುದು ಸಾಧ್ಯವಿರಲಿಲ್ಲ. ವಂಚನೆ ಮಾಡಿದ್ದೆ, ಬಣ್ಣ ಬಯಲಾಗಿ ಹೋಗಿತ್ತು. ನಾನು ನನ್ನ ಆಟದ ಪಟ್ಟು ಹಿಡಿದರೆ ಈ ಧರ್ಮಾಂಧ ಪಾರ್ಸಿಗಳು ನನ್ನನ್ನು ಬಡಿದು ಕೊಲ್ಲಲೂ ಹೇಸುವುದಿಲ್ಲವೆಂಬುದು ಮನವರಿಕೆಯಾಗಿಬಿಟ್ಟಿತ್ತು.

ತಿರುಗಿ ಒಂದು ಮಾತನಾಡದೆ ತೆಪ್ಪಗೆ ಮಿಕಮಿಕ ನೋಡುತ್ತ ನಿಂತಿದ್ದರಿಂದ ನನ್ನ ಪ್ರಾಣ ಉಳಿಯಿತು. ಕೊನೆಗೊಬ್ಬ ನಾನು ಯಾವಾಗ ಜಾಗ ಖಾಲಿ ಮಾಡುವವನಿದ್ದೇನೆ ಎಂದು ಕೇಳಿದ. ಆ ಹೊತ್ತಿಗೆ ತಲೆಯ ಮೇಲಿನ ಸೂರು ಪ್ರಾಣಕ್ಕಿಂತ ಬೆಲೆಯುಳ್ಳದ್ದಾಗಿತ್ತು; ಆತನ ಧಮಕಿಯೂ ಅಪಾಯಕಾರಿಯಾಗಿತ್ತು. ನಾನು ಮೌನ ಮುರಿದು, ಒಂದು ವಾರದೊಳಗೆ ಸರಕಾರಿ ವಸತಿಗೆ ನಾನು ಸಲ್ಲಿಸಿದ್ದ ಮನವಿ ಫಲ ನೀಡಬಹುದೆಂಬ ನಂಬಿಕೆಯಲ್ಲಿ ಒಂದು ವಾರದ ಗಡುವು ಕೊಡಲು ಬೇಡಿಕೊಂಡೆ. ಆದರೆ ಅವರು ನನ್ನ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಇವತ್ತು ಸಂಜೆಯೊಳಗೆ ಗಂಟುಮೂಟೆ ಕಟ್ಟಬೇಕೆಂದು ತೀರ್ಪು ನೀಡಿ, ತಪ್ಪಿದರೆ ನನ್ನ ಸ್ಥಿತಿ ನೆಟ್ಟಗಿರಲಿಕ್ಕಿಲ್ಲ ಎಂದು ಬೆದರಿಕೆ ಹಾಕಿ ಹೋದರು. ನಾನು ಅವಾಕ್ಕಾಗಿ ಹೋಗಿದ್ದೆ; ನನ್ನ ಎದೆ ಕುಸಿದು ಹೋಗಿತ್ತು. ಕಂಡವರಿಗೆ ಶಾಪ ಹಾಕಿ, ಉಮ್ಮಳಿಸಿದ ದುಃಖದಲ್ಲಿ ಕಣ್ಣೀರಿಡುತ್ತ ಕೂತೆ. ಇನ್ನೇನು ಮಾಡಬಹುದಿತ್ತು! ಈ ಸ್ಥಳ ದರಿದ್ರವಾಗಿತ್ತು ನಿಜ; ಆದರೆ, ತಲೆಯ ಮೇಲಿನ ಸೂರು ನನಗೆ ಬೆಲೆ ಕಟ್ಟಲಾಗದ ಆಸ್ತಿಯಾಗಿತ್ತು. ಅದನ್ನೂ ಇವತ್ತು ಕಳೆದುಕೊಳ್ಳುವವನಿದ್ದೆ.

ಪಾರ್ಸಿಗಳು ಹೋದ ನಂತರ ಮುಂದೇನು ಮಾಡುವುದು ಎಂದು ಯೋಚಿಸತೊಡಗಿದೆ. ಕೆಲವೇ ದಿನಗಳಲ್ಲಿ ಸರಕಾರದ ವಸತಿಗೃಹ ದೊರಕಿ ನನ್ನ ಸಮಸ್ಯೆಗಳು ಕೊನೆಯಾಗುತ್ತವೆ ಎಂಬ ಆಶೆ ನನಗಿತ್ತು. ಹಾಗಾಗಿ, ತಾತ್ಕಾಲಿಕ ವಸತಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವತ್ತ ಯೋಚಿಸತೊಡಗಿದೆ. ಸ್ನೇಹಿತರ ಸಹಾಯ ಕೇಳುವುದು ಒಳ್ಳೆಯದು ಎಂದುಕೊಂಡೆ. ಆದರೆ ಬರೋಡದಲ್ಲಿ ನನಗೆ ಯಾರೂ ಅಸ್ಪೃಷ್ಯ ಜಾತಿಯ ಸ್ನೇಹಿತರಿರಲಿಲ್ಲ. ನನಗಿದ್ದ ಇಬ್ಬರು ಗೆಳೆಯರಲ್ಲಿ ಒಬ್ಬ ಹಿಂದು, ಮತ್ತೊಬ್ಬ ಭಾರತೀಯ ಕ್ರಿಶ್ಚಿಯನ್. ಮೊದಲು ಒಂದು ಸ್ನೇಹಿತನ ಬಳಿ ಹೋಗಿ ನನ್ನ ಸಂಕಷ್ಟ ಹೇಳಿಕೊಂಡೆ. ಆತ ಉದಾತ್ತ ವ್ಯಕ್ತಿತ್ವದವನೂ, ನನ್ನ ಹತ್ತಿರದ ಗೆಳೆಯನೂ ಆಗಿದ್ದ. ನನ್ನ ಕತೆ ಕೇಳಿ ಆತ ವ್ಯಥೆಪಟ್ಟದ್ದು ಮಾತ್ರವಲ್ಲದೆ, ನನ್ನನ್ನು ಅವಮಾನಿಸಿದವರ ವಿರುದ್ಧ ಕಿಡಿಕಾರಿದ. ಆದರೆ ಒಂದು ಸಂಗತಿಯನ್ನು ನಿಚ್ಚಳವಾಗಿ ಹೇಳಿದ : 'ನೀನು ನನ್ನ ಮನೆಗೆ ಬಂದರೆ, ಮನೆಯಾಳುಗಳು ಕೆಲಸ ಬಿಟ್ಟು ಹೋಗುತ್ತಾರೆ.' ಆತ ಏನನ್ನು ಸೂಚಿಸುತ್ತಿದ್ದಾನೆ ಎಂಬುದು ನನಗರ್ಥವಾಯಿತು; ಮತ್ತೂ ಒತ್ತಾಯ ಮಾಡುವುದು ಬೇಡವೆನಿಸಿತು.

ಕ್ರಿಶ್ಚಿಯನ್ ಸ್ನೇಹಿತನ ಬಳಿ ಹೋಗಲಿಕ್ಕೆ ನನಗಿಷ್ಟವಿರಲಿಲ್ಲ. ಹಿಂದೆ ಆತ ತನ್ನ ಜೊತೆ ಬಂದಿರುವಂತೆ ಕರೆದಿದ್ದ; ಆದರೆ ನಡವಳಿಕೆಗಳು ನನಗೆ ಹೊಂದುತ್ತಿರಲಿಲ್ಲವಾಗಿ, ಬೇಡವೆಂದು ಪಾರ್ಸಿ ವಸತಿಗೃಹದಲ್ಲಿ ಉಳಿದಿದ್ದೆ. ಈಗ ಹೋಗಿ ಬೇಡಿದರೆ ಛೇಡಿಸಿಯಾನು ಎನಿಸಿತು. ನನ್ನ ಪ್ರಯತ್ನ ನಾನು ಮಾಡಬೇಕೆಂದು ನಿರ್ಧಾರ ಮಾಡಿ ಆಫೀಸಿಗೆ ಹೋದೆ. ಒಬ್ಬ ಸ್ನೇಹಿತನ ಸಲಹೆ ಮೇರೆಗೆ ಕ್ರಿಶ್ಚಿಯನ್ ಸ್ನೇಹಿತನ ಸಹಾಯ ಬೇಡುವುದೇ ಒಳಿತೆಂದು ಭಾವಿಸಿ ಆತನ ಮನೆಯಲ್ಲಿ ಒಂದಿಷ್ಟು ದಿನವಿರಬಹುದೇ ಎಂದು ಕೇಳಿದೆ. ಅದಕ್ಕವನು ನಾಳೆ ತನ್ನ ಹೆಂಡತಿ ಊರಿಂದ ಬರುತ್ತಾಳೆಂದು, ಅವಳನ್ನೊಮ್ಮೆ ಕೇಳಿ ತಿಳಿಸುವುದಾಗಿಯೂ ಹೇಳಿದ. ಅದು ವಿನಯವಂತ ನಿರಾಕರಣೆಯಾಗಿತ್ತು. ಆ ಕ್ರಿಶ್ಚಿಯನ್ ದಂಪತಿಗಳು ಮೂಲತಃ ಬ್ರಾಹ್ಮಣರು ಮತಾಂತರಗೊಂಡ ನಂತರ ಗಂಡ ಉದಾರವಾದಿ ನಿಲುವನ್ನು ಬೆಳೆಸಿಕೊಂಡಿದ್ದರೆ, ಹೆಂಡತಿ ಮಾತ್ರ ಕಟ್ಟಾ ಸಂಪ್ರದಾಯಸ್ಥಳಾಗಿಯೇ ಉಳಿದಿದ್ದಳು. ಅಸ್ಪೃಷ್ಯನೊಬ್ಬ ತಮ್ಮ ಜೊತೆ ವಾಸಿಸುವುದನ್ನು ಆಕೆ ಖಂಡಿತ ಒಪ್ಪುತ್ತಿರಲಿಲ್ಲ. ಕುಣಿಯುತ್ತಿದ್ದ ಆಶಾದೀಪ ನಂದಿಹೋಯಿತು. ಕ್ರಿಶ್ಚಿಯನ್ ಸ್ನೇಹಿತನ ಮನೆಯಿಂದ ಹೊರಬಂದಾಗ ಸಂಜೆ ನಾಲ್ಕು ಗಂಟೆಯಾಗಿತ್ತು. ರಾತ್ರಿಯೊಳಗೆ ಪಾರ್ಸಿ ವಸತಿಗೃಹವನ್ನು ಖಾಲಿ ಮಾಡಬೇಕಿತ್ತು, ಬೇರೆಲ್ಲ ಬಾಗಿಲುಗಳೂ ಮುಚ್ಚಿಬಿಟ್ಟಿದ್ದವು. ಕೆಲಸ ಬಿಟ್ಟು ಬಾಂಬೆಗೆ ಮರಳಿ ಹೋಗುವುದೊಂದೇ ನನಗುಳಿದ ದಾರಿಯಾಗಿತ್ತು.

ರಾತ್ರಿ 9 ಗಂಟೆಗೆ ಬಾಂಬೆಗೆ ರೈಲಿತ್ತು. ಐದು ತಾಸುಗಳನ್ನು ಹೇಗೆ ಕಳೆಯುವುದು? ವಸತಿಗೃಹಕ್ಕೆ ಹೋಗಲೇ? ಸ್ನೇಹಿತರ ಮನೆಗೆ ಹೋಗಲೇ? ವಸತಿಗೃಹಕ್ಕೆ ಹೋದರೆ ಪಾರ್ಸಿಗಳು ಗತಿಕಾಣಿಸಿಯಾರೆಂಬ ಹೆದರಿಕೆ ಇತ್ತು. ಸ್ನೇಹಿತರ ಹತ್ತಿರ ಹೋಗುವ ಮನಸ್ಸಿರಲಿಲ್ಲ. ನನ್ನ ಸ್ಥಿತಿ ಕರುಣಾಜನಕವಾಗಿದ್ದರೂ, ಕನಿಕರಕ್ಕೆ ತುತ್ತಾಗುವ ಇಷ್ಟ ನನಗಿರಲಿಲ್ಲ. ಬಾಕಿ ಸಮಯವನ್ನು ಕ್ಯಾಂಪ್ ಮತ್ತು ಬರೋಡ ನಗರಗಳ ಗಡಿಯಾಗಿದ್ದ ಕಮತಿ ಬಾಗ್ ಎಂಬ ಸಾರ್ವಜನಿಕ ಉದ್ಯಾನವನದಲ್ಲಿ ಕಳೆಯಲು ನಿಶ್ಚಯಿಸಿದೆ. ಕೆಲ ಸಮಯ ಚಿತ್ತಶೂನ್ಯನಾಗಿ ಅಲ್ಲಿ ಕೂತಿದ್ದೆ; ಕ್ರಮೇಣ ದುಃಖ ಆವರಿಸಿ, ಚಿಕ್ಕಮಕ್ಕಳಂತೆ ಅಪ್ಪ ಅಮ್ಮನನ್ನು ನೆನೆಸಿಕೊಳ್ಳತೊಡಗಿದೆ. ಎಂಟು ಗಂಟೆಗೆ ಉದ್ಯಾನವನದಿಂದ ವಸತಿಗೃಹಕ್ಕೆ ಜಟಕಾಬಂಡಿಯಲ್ಲಿ ಹೋಗಿ, ಗಂಟುಮೂಟೆ ಕಟ್ಟಿ, ಲೆಕ್ಕ ಚುಕ್ತ ಮಾಡಲು ನಿವಾಹಕನ ಬಳಿ ಹೋದೆ. ಇಬ್ಬರೂ ಮೌನವಾಗಿ ವ್ಯವಹರಿಸಿದೆವು; ನನ್ನ ಸಂಕಷ್ಟಕ್ಕೆ ತಾನೇ ಅರ್ಧವಾಸಿ ಕಾರಣವೆಂಬ ಭಾವ ಅವನಲ್ಲಿತ್ತು. ಲೆಕ್ಕ ಚುಕ್ತ ಮಾಡಿ ಜಟಕಬಂಡಿ ಹತ್ತಿದೆ.

ಕೈಗೆ ಬಂದ ನೌಕರಿಗಳನ್ನೆಲ್ಲ ಬಿಟ್ಟು, ಬಹಳಷ್ಟು ಆಸೆಗಳನ್ನಿಟ್ಟುಕೊಂಡು ಬರೋಡಕ್ಕೆ ಹೋಗಿದ್ದೆ. ಅದು ಯುದ್ಧದ ಸಮಯವಾಗಿದ್ದರಿಂದ ಭಾರತದ ಶಿಕ್ಷಣ ಸಂಸ್ಥೆಗಳಲ್ಲಿ ಬೇಕಾದಷ್ಟು ಹುದ್ದೆಗಳು ಖಾಲಿ ಇದ್ದು, ನಾನು ಸುಲಭದಲ್ಲಿ ಶಿಕ್ಷಕ ವೃತ್ತಿ ಹಿಡಿಯಬಹುದಿತ್ತು. ಲಂಡನಿನಲ್ಲೂ ಪ್ರಭಾವಿ ಜನಗಳ ಪರಿಚಯ ನನಗಿತ್ತು. ಈ ಎಲ್ಲವನ್ನು ತೊರೆದು, ನನ್ನನ್ನು ವಿದ್ಯಾವಂತನನ್ನಾಗಿಸಿದ ಮಹಾರಾಜರ ಋಣ ತೀರಿಸುವುದು ಮುಖ್ಯವೆಂದು ಬರೋಡಕ್ಕೆ ಹೋಗಿದ್ದೆ. ಕೇವಲ 11 ದಿನಗಳಲ್ಲಿ ನಾನು ಬರೋಡದಿಂದ ಹೊರಗಟ್ಟಲ್ಪಟ್ಟು ಬಾಂಬೆಗೆ ವಾಪಾಸು ಬಂದೆ.

ಬಡಿಗೆ ಹಿಡಿದುಕೊಂಡ ಹತ್ತು, ಹನ್ನೆರಡು ಪಾರ್ಸಿಗಳು ಆಕ್ರಮಣಶೀಲವಾಗಿ ನನ್ನೆದುರು ನಿಂತದ್ದು, ಭಯಭೀತನಾಗಿದ್ದ ನಾನು ದಯೆ ತೋರಬೇಕೆಂದು ಅವರನ್ನು ಅಂಗಲಾಚುತ್ತಿದ್ದ ದೃಶ್ಯ 18 ವರ್ಷಗಳ ನಂತರವೂ ನನ್ನಲ್ಲಿ ಅಚ್ಚಳಿಯದೇ ಉಳಿದುಬಿಟ್ಟಿದೆ. ಅದನ್ನು ನೆನೆದಾಗಲೆಲ್ಲ ಕಣ್ಣಲ್ಲಿ ನೀರು ಬರುತ್ತದೆ. ಭಾರತದಲ್ಲಿ ಹಿಂದುಗಳಿಗೆ ಅಸ್ಪೃಷ್ಯನಾದವನು ಪಾರ್ಸಿಗಳಿಗೂ ಅಸ್ಪೃಷ್ಯನಾಗಿರುತ್ತಾನೆಂಬ ಜಾತಿಭೇದದ ಮತ್ತೊಂದು ಪಾಠವನ್ನು ನಾನು ಕಲಿತೆ.

# ಅಮೆರಿಕಕ್ಕೆ ಮಣಿಯದ ಸ್ವಾಭಿಮಾನಿ ಹಸೀನಾ

*ಪುಟ 14 ರಿಂದ*

ತನ್ನ ಗುರಿ ಎಂದು ಹೇಳಿಕೊಂಡಿದ್ದರು. ಅಂದಿನಿಂದಲೂ ಹಸೀನಾ ಮತ್ತವರ ಅವಾಮಿ ಪಕ್ಷ ಯುನೂಸ್ ವಿರುದ್ಧ ಕತ್ತಿ ಮಸೆಯುತ್ತಿವೆ. 'ಅವರು ಅಧಿಕಾರ ಕಳೆದುಕೊಂಡ ಸೇನೆ ಮತ್ತು ಅಮೆರಿಕದ ಮುಖವಾಡ' ಎಂದು ಆರೋಪಿಸುತ್ತಿವೆ. ಯುನೂಸ್‌ಗೆ ಅಮೆರಿಕದ ಬೆಂಬಲ ನೋಡಿದರೆ ಹಸೀನಾ ಆರೋಪ ಉತ್ಪ್ರೇಕ್ಷೆ ಎಂದು ಅನಿಸುತ್ತಿಲ್ಲ.

ಪಾಶ್ಚಾತ್ಯ ಬುದ್ಧಿಜೀವಿಗಳು ಮತ್ತು ಒಬಾಮಾ ಆಡಳಿತದ ಅನೇಕ ಹಿರಿ ತಲೆಗಳ ಪ್ರಕಾರ ಹಸೀನಾ-ಯುನೂಸ್ ಸಂಘರ್ಷಕ್ಕೆ ವೈಯಕ್ತಿಕ ಈರ್ಷೆ ಕಾರಣ. ಆದರೆ ಅದು ನಿಜವಲ್ಲ. ಏಕೆಂದರೆ 'ಯುನೂಸ್ ಕಡೆಯಿಂದ ನಾನೇನೂ ಸಾಲ ತೆಗೆದುಕೊಂಡಿಲ್ಲ. ನನಗ್ಯಾಕೆ ಅವರ ಬಗ್ಗೆ ದ್ವೇಷ' ಎಂದು ಹಸೀನಾ ನನ್ನ ಬಳಿ ಒಮ್ಮೆ ಹೇಳಿದ್ದರು. ತನ್ನ ಸರ್ಕಾರವನ್ನು ಮಣಿಸಲು ಅಮೆರಿಕ ಮತ್ತು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಯುನೂಸ್ ಅವರನ್ನು ದಾಳವಾಗಿ ಬಳಸುತ್ತಿವೆ ಎಂಬ ಅನುಮಾನ ಅವರಿಗಿದೆ. ಅಮೆರಿಕದ ನಡವಳಿಕೆ ಕೂಡ ಈ ಅನುಮಾನಕ್ಕೆ ಪುಷ್ಟಿ ಕೊಡುವಂತಿದೆ.

ಯುನೂಸ್‌ಗೆ ದೇಶದೊಳಗೆ ಬೆಂಬಲಿಗರೂ ಇರಬಹುದು, ಅಮೆರಿಕದಂಥ ಶಕ್ತಿಗಳ ಕುಮ್ಮಕ್ಕೂ ಸಿಗಬಹುದು. ಆದರೆ ಅದನ್ನೇ ನಂಬಿಕೊಂಡು ಅವರು ಕ್ಲಿಂಟನ್, ಒಬಾಮಾರಂಥವರ ಜಾಲದಲ್ಲಿ ಸಿಕ್ಕುಬಿದ್ದರೆ ವಿಲಿವಿಲಿ ಒದ್ದಾಡಬೇಕಾಗುತ್ತದೆ. ಅದರಿಂದ ಅವರಿಗೇ ಜಾಸ್ತಿ ಹಾನಿ. ಯಾಕೆಂದರೆ ಬಾಂಗ್ಲಾದೇಶ ಮುಸ್ಲಿಂ ಪ್ರಾಬಲ್ಯದ ದೇಶ ಹೇಗೋ ಬಂಗಾಲಿ ಭಾಷಿಕರೇ ಹೆಚ್ಚಿರುವ ದೇಶವೂ ಹೌದು. ಆ ಜನ ಬಡವರಾಗಿರಬಹುದು; ಆದರೆ ಸ್ವಾಭಿಮಾನಿಗಳು. ವಸಾಹತುಶಾಹಿ ವಿರುದ್ಧದ ಕೋಪ ಅವರಲ್ಲಿ ಈಗಲೂ ಕಮ್ಮಿಯಾಗಿಲ್ಲ.

ಒಬ್ಬರು (ಹಸೀನಾ) ಸ್ವಾತಂತ್ರ್ಯದ ಸಂಕೇತ. ಇನ್ನೊಬ್ಬರು (ಯುನೂಸ್) ಸಾಮಾಜಿಕ- ಆರ್ಥಿಕ ನ್ಯಾಯದ ಪ್ರತಿಪಾದಕ. ಇಬ್ಬರೂ ಸೇರಿದರೆ ಬಡ ದೇಶಕ್ಕೆ ಶಕ್ತಿ ತುಂಬಬಲ್ಲಂಥವರು. ಹೀಗಿರುವಾಗ ಈ ಎರಡು ದಿಗ್ಗಜರ ಮಧ್ಯೆ ಜಗಳಕ್ಕೆ ಕುಮ್ಮಕ್ಕು ಕೊಡುವುದು ಹುಚ್ಚುತನದ್ದು. ತಾನು 'ಭಯೋತ್ಪಾದನೆ ವಿರುದ್ಧ ಸಮರ'ದ ಮುಂಚೂಣಿಯಲ್ಲಿದ್ದೇನೆ ಎಂದು ತನ್ನ ಬೆನ್ನು ತಾನೇ ಚಪ್ಪರಿಸಿಕೊಳ್ಳುವ ಅಮೆರಿಕಕ್ಕಂತೂ ಖಂಡಿತವಾಗಿಯೂ ಶೋಭೆ ತರುವಂಥದ್ದಲ್ಲ.

JANASHAKTHI KANNADA VARA PATRIKE APRIL 17, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

# ಸ್ವದೇಶಕ್ಕೆ ಸ್ವಾಗತ !

## ಡಾ. ಬಿ.ಆರ್.ಅಂಬೇಡ್ಕರ್‌ರವರ 120ನೇ ಜನ್ಮ ದಿನಾಚರಣೆ ಏಪ್ರಿಲ್ 14, 2011

**ಮಹಾನ್ ಹೋರಾಟಗಾರ ಡಾ. ಬಿ.ಆರ್. ಅಂಬೇಡ್ಕರರವರು ಜಾತಿವಾದೆ ವ್ಯವಸ್ಥೆಯಲ್ಲಿ ಅನುಭವಿಸಿದ ಎಷ್ಟೋ ಅಪಮಾನಕಾರಿ ಘಟನಾವಳಿಗಳಲ್ಲಿ ಇಲ್ಲಿನ ಪ್ರಕರಣವೂ ಒಂದು. ಇದು ಸ್ವತಃ ಅಂಬೇಡ್ಕರ್‌ರವರ ಬರಹದ ಅನುವಾದ. ಅಕ್ಷರ ಪ್ರಕಾಶನದ 'ಡಾ. ಬಿ.ಆರ್.ಅಂಬೇಡ್ಕರ್ ಅವರ ಆಯ್ದ ಬರಹಗಳು' ಎಂಬ ಪುಸ್ತಕದಿಂದ ಆಯ್ದ ಭಾಗ ಇದು. ಅನುವಾದ ಕೆ.ಫಣಿರಾಜ್.**

ಸನ್ಮಾನ್ಯರಾದ ಬರೋಡದ ಮಹಾರಾಜರು ಉನ್ನತ ವ್ಯಾಸಂಗಕ್ಕಾಗಿ ನನ್ನನ್ನು ಅಮೇರಿಕಕ್ಕೆ ಕಳಿಸಿದ್ದರು. 1913 ರಿಂದ 17 ರವರೆಗೆ ನ್ಯೂಯಾರ್ಕಿನ ಕೊಲಂಬಿಯ ವಿಶ್ವವಿದ್ಯಾಲಯುದಲ್ಲಿ ನಾನು ವಿದ್ಯಾಭ್ಯಾಸ ಮಾಡಿದೆ. 1917 ರಲ್ಲಿ ಲಂಡನಿಗೆ ಬಂದು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ ಮುಂದುವರೆಸಿದೆ. 1918 ರಲ್ಲಿ ಬರೋಡ ಮಹಾರಾಜರಿಂದ ರಾಜ್ಯದ ಸೇವೆಗೆ ಕರೆ ಬಂದಿತು. ಅವರಿಂದ ತುಂಬ ಉಪಕೃತನಾಗಿದ್ದ ನಾನು ನನ್ನ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಬರೋಡಕ್ಕೆ ವಾಪಸಾದೆ.

ಐದು ವರ್ಷಗಳ ಯುರೋಪ್ ಮತ್ತು ಅಮೇರಿಕ ವಾಸದಲ್ಲಿ ನಾನು ಅಸ್ಪೃಶ್ಯನೆಂಬ ಪ್ರಜ್ಞೆಯೂ, ಭಾರತದಲ್ಲಿ ಜಾತಿಭೇದದಿಂದ ಉಂಟಾಗುವ ಸಂಕಷ್ಟಗಳೂ ನನ್ನ ಚಿತ್ತದಿಂದ ಅಳಿಸಿಹೋಗಿದ್ದವು. ಆದರೆ, ಬರೋಡ ರೈಲು ನಿಲ್ದಾಣದಲ್ಲಿ ಇಳಿದೊಡನೆ ಜಾತಿ ಸಂಕಷ್ಟಗಳು ನನ್ನೆದುರು ಧುತ್ತನೆ ನಿಂತುಬಿಟ್ಟವು. ಅಲ್ಲಿಯವರೆಗೂ ವಾಸ್ತವ್ಯದ ಸಮಸ್ಯೆ ನನ್ನ ತಲೆಗೆ ಬಂದಿರಲೇ ಇಲ್ಲ. ಬರೋಡದಲ್ಲಿ ಸಾಕಷ್ಟು ಹಿಂದು ವಸತಿಗೃಹಗಳಿರುವುದು ನನಗೆ ಗೊತ್ತಿತ್ತು. ಆದರೆ, ಅಲ್ಲಿ ಅಸ್ಪೃಷ್ಯರಿಗೆ ಪ್ರವೇಶ ನಿಷಿದ್ಧ. ನಾನು ನನ್ನ ಜಾತಿಯನ್ನು ಮರೆಮಾಚಿ ಆ ವಸತಿಗೃಹಗಳಲ್ಲಿ ಪ್ರವೇಶ ಪಡೆಯುವ ಸಾಧ್ಯತೆಯಿತ್ತು. ಆದರೆ ಈ ದಾರಿ ನನಗೆ ಇಷ್ಟವಿರಲಿಲ್ಲ. ನಿಜ ಏನೂ ಎನ್ನುವುದು ಒಂದಲ್ಲ ಒಂದು ಗಳಿಗೆ ಗೊತ್ತಾಗುತ್ತದೆ, ನಂತರದ ಪರಿಣಾಮ ಕೆಟ್ಟದಾಗಿರುತ್ತದೆ ಎಂಬ ವಾಸ್ತವ ನನಗೆ ಗೊತ್ತಿತ್ತು.

ಬರೋಡದಿಂದ ಅಮೇರಿಕಕ್ಕೆ ವಿದ್ಯಾಭ್ಯಾಸಕ್ಕಾಗಿ ಬಂದಿದ್ದ ಕೆಲವು ಸ್ನೇಹಿತರಿದ್ದರು. ಆದರೆ ನಾನು ಅವರ ಮನೆಗೆ ಹೋದರೆ ನನ್ನನ್ನು ಆದರದಿಂದ ಬರ ಮಾಡಿಕೊಳ್ಳುತ್ತಾರೆ ಎಂಬ ಖಾತ್ರಿ ಇರಲಿಲ್ಲ. ನಾನು ಹೋದಲ್ಲಿ ಅಸ್ಪೃಷ್ಯನೊಬ್ಬ ಅವರ ಮನೆಗೆ ಬಂದನೆಂಬ ಮುಜುಗರ ಅವರಲ್ಲಿ ಉಂಟಾಗುವ ಸಾಧ್ಯತೆಯಿತ್ತು. ಏನು ಮಾಡುವುದು? ಎಲ್ಲಿಗೆ ಹೋಗುವುದು? ಎಂಬ ಪ್ರಶ್ನೆಗಳನ್ನು ಹೊತ್ತು ನಾನು ನಿಲ್ದಾಣದಲ್ಲಿ ಸುಮಾರು ಹೊತ್ತು ನಿಂತಿದ್ದೆ. ಅಷ್ಟು ಹೊತ್ತಿಗಾಗಲೇ, ನಿಲ್ದಾಣ ನಿರ್ಜನವಾಗಿತ್ತು. ಗಿರಾಕಿಗಳು ಸಿಕ್ಕದೆ ಸಾಲು ನಿಂತಿದ್ದ ಜಟಕಾ ಬಂಡಿಯುವರು ನಾನು ಅವರ ಗಿರಾಕಿಯಾಗಿರಬಹುದೆಂಬ ಆಶೆಯಿಂದ ನನ್ನತ್ತ ನೋಡುತ್ತಿದ್ದರು. ಆ ಗಳಿಗೆಯಲ್ಲಿ ಅವರನ್ನು ವಿಚಾರಿಸಿದರೆ, ಕ್ಯಾಂಪಿನಲ್ಲಿ (ಬರೋಡ ಮಹಾರಾಜರ ಸಕರಾರದ ಕಛೇರಿ, ಅಧಿಕೃತ ವಾಸ್ತವ್ಯ ಹಾಗೂ ಇತರ ಪೂರಕ ನಾಗರಿಕ ವ್ಯವಸ್ಥೆಗಳಿದ್ದ ಪ್ರದೇಶ) ಎಲ್ಲಾದರೂ ವಾಸ್ತವ್ಯಕ್ಕೆ ಯೋಗ್ಯವಾದ ಸ್ಥಳದ ಬಗ್ಗೆ ಮಾಹಿತಿ ಸಿಗಬಹುದೆಂಬ ಆಲೋಚನೆ ಬಂತು. ಅಂತಹ ಜಟಕಾ ಬಂಡಿಯವನೊಬ್ಬನನ್ನು ಕರೆದು ವಾಸ್ತವ್ಯಕ್ಕೆ ತಕ್ಕುದಾದ ಹೋಟೆಲುಗಳೇನಾದರೂ ಕ್ಯಾಂಪಿನಲ್ಲಿವೆಯೇ? ಎಂದು ವಿಚಾರಿಸಿದೆ. ಆತ, ಕ್ಯಾಂಪಿನಲ್ಲಿ ಪಾರ್ಸಿಗಳು ನಡೆಸುವ ವಸತಿಗೃಹ ಒಂದು ಇದೆ ಎಂದು ತಿಳಿಸಿದ. ಅದನ್ನು ಕೇಳಿ ನನ್ನ ಮನಸ್ಸು ಮುದಗೊಂಡಿತು. ಪಾರ್ಸಿಗಳಲ್ಲಿ ಜಾತಿಪದ್ಧತಿ ಇಲ್ಲವಾದ್ದರಿಂದ ನನ್ನನ್ನು ಅವರು ಅಸ್ಪೃಷ್ಯನೆಂದು ಕಾಣುವ ಪ್ರಮೇಯವಿರಲಿಲ್ಲ. ಆಶಾಭರಿತ, ಆತಂಕರಹಿತವಾಗಿ ನಾನು ಆತನ ಗಾಡಿಯಲ್ಲಿ ನನ್ನ ಸಾಮಾನುಗಳನ್ನಿರಿಸಿ, ಪಾರ್ಸಿ ವಸತಿಗೃಹಕ್ಕೆ ಕರೆದುಕೊಂಡು ಹೋಗುವಂತೆ ಹೇಳಿದೆ.

ಆ ಪಾರ್ಸಿ ವಸತಿಗೃಹವು ಎರಡಂತಸ್ತಿನ ಕಟ್ಟಡವಾಗಿದ್ದು, ನೆಲಮಾಳಿಗೆಯಲ್ಲಿ ಒಬ್ಬ ವಯಸ್ಸಾದ ಪಾರ್ಸಿ ಸಂಸಾರಸ್ಥನ ಕುಟುಂಬವಿದ್ದಿತು. ಆತ ಆ ವಸತಿಗೃಹದ ನಿರ್ವಾಹಕನೂ ಆಗಿದ್ದು, ಮೇಲ್ಮಾಳಿಗೆಯಲ್ಲಿ ತಂಗುವ ಪ್ರವಾಸಾರ್ಥಿಗಳಿಗೆ ಆಹಾರವನ್ನೂ ಒದಗಿಸುತ್ತಿದ್ದ. ನಾನು ಹೋದಾಕ್ಷಣ ಆ ಪಾರ್ಸಿ ಸಂಸಾರಸ್ಥ ನನಗೆ ವಸ್ತಿಯನ್ನು ಕೊಡಲೊಪ್ಪಿ, ಮೇಲ್ಮಾಳಿಗೆಗೆ ಕರೆದೊಯ್ದು ವಾಸಿಸುವ ಕೊಠಡಿಗೆ ತಲುಪಿಸಿದ. ಜಟಾಕಾಬಂಡಿಯುವನು ನನ್ನ ಸಾಮಾನುಗಳನ್ನು ತಂದಿರಿಸಿ ತೆರಳಿದ. ನಾನು ವಾಸ್ತವ್ಯಕ್ಕೆ ಠಿಕಾಣಿಯೊಂದು ಸಿಕ್ಕ ಖುಶಿಯಲ್ಲಿದ್ದೆ. ಸ್ವಲ್ಪ ಆರಾಮವಾಗಿರಲೆಂದು ಹೊರ ಉಡುಪುಗಳನ್ನು ತೆಗೆಯುತ್ತಿದ್ದಾಗ ಪಾರ್ಸಿ ನಿರ್ವಾಹಕ ನೊಂದಣಿ ಪುಸ್ತಕವನ್ನು ಹಿಡಿದುಕೊಂಡು ನನ್ನ ಕೊಠಡಿಗೆ ಬಂದ. ಹೊರ ಉಡುಪಿ ತೆಗೆಯುತ್ತಿದ್ದರಿಂದ, ನಾನು ಪಾರ್ಸಿಗಳಿಗೆ ಪವಿತ್ರವಾದ ಸದ್ರ (ಅಂಗಿ) ಮತ್ತು ಕಷ್ಟಿ (ಜನಿವಾರ) ಧರಿಸದಿರುವುದು ಕಂಡು, ನಾನು ಪಾರ್ಸಿಯಂತೂ ಅಲ್ಲ ಎನ್ನುವುದು ಆತನಿಗೆ ಗೊತ್ತಾಗಿ ಹೋಯಿತು. ಆತ ಕಡ್ಡಿತುಂಡು ಮಾಡಿದ ಹಾಗೆ ನನ್ನ ಕುಲಗೋತ್ರ ವಿಚಾರಿಸಿದ. ಈ ವಸತಿಗೃಹವನ್ನು ತಮ್ಮ ಮತದವರಿಗೆಂದು ಪಾರ್ಸಿಗಳು ನಡೆಸುತ್ತಿದ್ದ ವಿಷಯ ತಿಳಿಯದೇ ನಾನು ಒಬ್ಬ ಹಿಂದುವೆಂದು ಆತನಿಗೆ ಹೇಳಿದೆ. ನನ್ನ ಉತ್ತರದಿಂದ ಆಘಾತಗೊಂಡ ನಿರ್ವಾಹಕ, ನನಗೆ ಈ ವಸತಿಗೃಹದಲ್ಲಿ ಜಾಗವಿಲ್ಲವೆಂದು ಹೇಳಿಬಿಟ್ಟ. ಮತ್ತೆಲ್ಲಿಗೆ ಹೋಗುವುದೆಂದು ತಿಳಿಯದೇ ನನ್ನ ಕೈಕಾಲು ತಣ್ಣಗಾಗಿಹೋಯಿತು. ಒಂದಷ್ಟು ಸಾವರಿಸಿಕೊಂಡು, ನಾನು ಹಿಂದುವಾದರೂ ಪಾರ್ಸಿ ವಸತಿಗೃಹದಲ್ಲಿ ತಂಗಲು ನನಗೇನೂ ತೊಂದರೆ ಇಲ್ಲ ಎಂದು ಹೇಳಿದೆ. ಅದಕ್ಕೆ ಆತ



'ಅದು ಹೇಗೆ ಸಾಧ್ಯ? ಇಲ್ಲಿ ವಾಸಿವು ಎಲ್ಲರ ವಿವರಗಳನ್ನು ನಾನು ಈ ಖಾತೆ ಪುಸ್ತಕದಲ್ಲಿ ದಾಖಿಲಿಸಬೇಕು!' ಎಂದ. ಆತನ ಕಷ್ಟ ನನಗೆ ಅರ್ಥವಾಯಿತು. ಖಾತೆಯಲ್ಲಿ ದಾಖಲಿಸಲು ನಾನು ಒಂದು ಪಾರ್ಸಿ ಹೆಸರಿಟ್ಟುಕೊಳ್ಳಬಲ್ಲನೆಂದು, ನನಗೆ ತಕರಾರಿಲ್ಲದಿರುವಾಗ ಆತ ಲಾಭದ ಗಿರಾಕಿಯನ್ನು ಕಳೆದುಕೊಳ್ಳುವುದೇಕೆಂದೂ ಹೇಳಿದೆ. ನನ್ನ ಸಮಜಾಯಿಷಿ ಫಲ ನೀಡಿತು; ತುಂಬ ದಿನಗಳಿಂದ ವಸತಿಗೃಹ ಖಾಲಿ ಹೊಡೆಯುತ್ತಿದ್ದರಿಂದ ಆತನ ಕೈಯೂ ಬರಿದಾಗಿತ್ತೆಂದು ಕಾಣುತ್ತದೆ. ನಾನು ಪಾರ್ಸಿ ಹೆಸರಿನಿಂದ ಗುರುತಿಸಿಕೊಳ್ಳಬೇಕು ಹಾಗೂ ಊಟ , ವಸತಿಗೆ ದಿನಕ್ಕೆ ಒಂದೂವರೆ ರೂಪಾಯಿ ಕೊಡಬೇಕು ಎಂಬ ಕರಾರಿನೊಂದಿಗೆ ಆತ ವಸತಿಗೆ ಒಪ್ಪಿಗೆ ಕೊಟ್ಟುಹೋದ. ಸಮಸ್ಯೆ ಬಗೆಹರಿದಿದ್ದರಿಂದ ಖುಶಿಯಾಯಿತು. ಆದರೆ ಈ ಖುಷಿ ಕರಗಿಹೋಗುವ ಸ್ಥಿತಿ ಬೇಗ ಬಂದೊದಗಲಿತ್ತು! ಆ ದುರಂತವನ್ನು ವಿವರಿಸುವ ಮುನ್ನ ವಸತಿಗೃಹದಲ್ಲಿನ ವಾಸ್ತವ್ಯದ ಅನುಭವಗಳನ್ನು ವಿವರಿಸುವೆ.

ಮೊದಲ ಮಹಡಿಯಲ್ಲಿ ಹರಕು, ಮುರುಕು ಸಾಮಾನುಗಳನ್ನು ಗಿಜಿಗುಡುತ್ತಿದ್ದ ದೊಡ್ಡ ಹಜಾರವಿತ್ತು. ಆ ಹಜಾರದಲ್ಲಿದ್ದ ಮಲಗುವ ಕೋಣೆ ಮತ್ತು ಅದಕ್ಕೆ ಹತ್ತಿಕೊಂಡಿದ್ದ ನಲ್ಲಿ ಸಹಿತವಾದ ಬಚ್ಚಲುಗಳನ್ನುಳ್ಳ ಒಂದು ಕೊಠಡಿಯನ್ನು ನನಗೆ ಕೊಡಲಾಗಿತ್ತು. ಬಣಗುಡುವ ಈ ವಾತಾವರಣದಲ್ಲಿ ನನ್ನ ಏಕಾಂಗಿ ಜೀವನ ನಡೆದಿತ್ತು. ಬೆಳಗ್ಗೆ 8.30 ಕ್ಕೆ ಟೀ, 9.30 ಕ್ಕೆ ಉಪಹಾರ ಮತ್ತು ರಾತ್ರಿ 8.30 ಕ್ಕೆ ಊಟವನ್ನು ತಂದುಕೊಡಲು ಬಂದಾಗ ಮಾತ್ರ ಪಾರ್ಸಿ ನಿರ್ವಾಹಕನ ಮುಖದರ್ಶನವಾಗುತ್ತಿತ್ತು. ಆತ ಬಂದ ಕೆಲಸ ಮುಗಿಸಿ ತಕ್ಷಣ ಹೋಗಿಬಿಡುತ್ತಿದ್ದನೇ ಹೊರತು ಮಾತುಕತೆಗೆ ಕೂತದ್ದಿಲ್ಲ. ಹೀಗೆ ಮೂಕವಾಗಿ ನಾನು ಕಾಲ ನೂಕುತ್ತಿದ್ದೆ.

ಲೆಕ್ಕ ಮಹಾ ಪರಿಶೋಧಕರ ಕಛೇರಿಯಲ್ಲಿ ಮಹಾರಾಜರು ನನಗೆ ಕೆಲಸ ಕೊಟ್ಟಿದ್ದರು. ಬೆಳಗ್ಗೆ 10 ಗಂಟೆಗೆ ವಸತಿಗೃಹ ಬಿಟ್ಟರೆ ವಾಪಾಸು ಹೋಗುತ್ತಿದದ್ದು ರಾತ್ರಿ ಎಂಟು ಗಂಟೆಗೆ. ಆದಷ್ಟು ಕಾಲ ವಸತಿಗೃಹದ ಹೊರಗೆ ಇರುವ ಇರಾದೆಯಿಂದ ಸಂಜೆಯಿಡಿ ಸ್ನೇಹಿತರ ಜೊತೆ ಸಮಯ ಕಳೆಯುತ್ತಿದ್ದೆ. ಕೊಠಡಿಗೆ ವಾಪಾಸು ಹೋಗಿ ರಾತ್ರಿಯನ್ನು ಕಳೆಯುವ ಯೋಚನೆಯೇ ಭಯಾನಕವಾಗಿತ್ತು. ರಾತ್ರಿ ಕಳೆಯಲು ಬೇರೆ ಜಾಗವೇ ಇರದ ಕಾರಣ ಕೊಠಡಿಗೆ ಮರಳದೇ ಬೇರೆ ದಾರಿ ಇರಲಿಲ್ಲ. ಹರಕು, ಮುರುಕು ಸಾಮಾನುಗಳಿಂದ ತುಂಬಿದ್ದ ದೆವ್ವದಂತಹ ಆ ಹಜಾರದಲ್ಲಿ ಮಾತಿಗೆ ಒಂದು ನರಪ್ರಾಣಿಯೂ ಸಿಗುತ್ತಿರಲಿಲ್ಲ. ವಿದ್ಯುತ್ ದೀಪ ಅಂತಿರಲಿ, ಎಣ್ಣೆ ದೀಪದ ವ್ಯವಸ್ಥೆಯೂ ಇಲ್ಲದೆ, ರಾತ್ರಿ ವೇಳೆ ಇಡಿ ಹಜಾರ ಕಗ್ಗತ್ತಲುಮಯವಾಗಿರುತ್ತಿತ್ತು. ನಾನು ಬೇಡಿದ್ದಕ್ಕೆ ನಿರ್ವಾಹಕ ಒಂದು ಬುಡ್ಡಿದೀಪ ತಂದಿಡುತ್ತಿದ್ದ; ಆ ಹಜಾರದಲ್ಲಿ ಬುಡ್ಡಿದೀಪದ ಬೆಳಕು ಇದ್ದರೂ ಅಷ್ಟೇ. ಇರದಿದ್ದರೂ ಅಷ್ಟೆ. ಗುಹೆಯಂತಿದ್ದ ಆ ನಿರ್ಜನ ಜಾಗದಲ್ಲಿ ಮನುಷ್ಯ ಸಹವಾಸಕ್ಕೆ ಹಾತೊರೆಯುತ್ತಿದ್ದೆ. ಅದು ದುಸ್ಸಾಧ್ಯವಾಗಿದ್ದರಿಂದ ಪುಸ್ತಕಗಳ ಸಹವಾಸ ಹಿಡಿಸಿಕೊಂಡೆ. ಪುಸ್ತಕ ಪ್ರಪಂಚದಲ್ಲಿ ಮುಳುಗಿ ಏಕಾಂತವನ್ನು ಮೀರಲು ಪ್ರಯತ್ನಿಸಿದೆ. ಆದರೆ ಇದೂ ಸುಲಭವಾಗಿರಲಿಲ್ಲ. ಹಜಾರ ಬಾವಲಿಗಳ ಆವಾಸಸ್ಥಾನವಾಗಿದ್ದು, ರಾತ್ರಿ ಹೊತ್ತು ಅವುಗಳ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH